Sri S. SRINIVASA IYENGAR.—When the Government receive the full report, will the Government consider that these people will have to be given some additional relief ?

Sri H. SIDDAVEERAPPA.—We will consider when the report is received.

Mr. SPEAKER.—Question Hour is over. Now discussion on the report on Educational Reforms in Mysore will continue.

Sri A. G. RAMACHANDRA RAO (Minister for Law and Education).—I believe it would be very convenient for all if we meet tomorrow in the morning, 8-30 to 12, or 8-30 to 12-30, as the Chair desires.

Mr. SPEAKER.—8-30 A.M. to 12-30 P.M.

Sri A. G. RAMACHANDRA RAO.—All right, Sir.

DEBATE ON THE EDUCATIONAL REFORMS

*ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಮೊನ್ನೆಯ ದಿವಸ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯದಲ್ಲಿ ಮಾತನಾಡಿದೆ. ಮಕ್ಕಳಿಗಂತೂ ಬಹಳ ಮುಖ್ಯವಾದದ್ದು ಪ್ರಾಥಮಿಕ ವಿದ್ಯಾಭ್ಯಾಸ. ಈಗ ನಾವು ಕೊಡುವ ವಿದ್ಯಾಭ್ಯಾಸವನ್ನು ನೋಡಿದರೆ ಶೇಕಡ 41 ಮಂದಿಗೆ ಮಾತ್ರ ಪ್ರೈಮರಿ ವಿದ್ಯಾಭ್ಯಾಸ ನೀಡುತ್ತಿದ್ದೇವೆ. ಇನ್ನುಳಿದ 59 ಮಂದಿಗೆ ವಿದ್ಯಾಭ್ಯಾಸ ದೊರೆಯುತ್ತಿಲ್ಲ. ಇದಕ್ಕೆ ವಿದ್ಯಾ ಸುಧಾರಣಾ ಸಮಿತಿಯು ವರದಿಯಲ್ಲಿ ಸ್ಕೂಲಿಗೆ ಸೇರಿ ವಿದ್ಯಾಭ್ಯಾಸ ಪ್ರಾರಂಭಿಸಿದ ಮೇಲೆ ವಿದ್ಯಾರ್ಥಿಗಳು ಮಧ್ಯೆ ಬಿಟ್ಟು ಬಿಡುತ್ತಿದ್ದಾರೆ, ಇದರಿಂದ ಹೆಚ್ಚುಮಂದಿ ವಿದ್ಯಾವಂತರಾಗುತ್ತಿಲ್ಲ ಎಂದು ಹೇಳಿದ್ದಾರೆ. ಇದು ಬಹಳ ಮುಖ್ಯವಾದ ಕಾರಣವೆಂದು ಕಾಣುತ್ತದೆ. ಲೆಕ್ಕ ನೋಡಿದರೆ ಬಹುಶಃ ಅರ್ಧದಷ್ಟು ಬಾಲಕರು, ಅರ್ಧದಷ್ಟು ಹುಡುಗಿಯರು ಇದ್ದಾರೆ. ಬಾಲಕರ ಸಂಖ್ಯೆ ಜಾಸ್ತಿ, ಹುಡುಗಿಯರ ಸಂಖ್ಯೆ ಕಡಮೆ. ಯಾರು ವಿದ್ಯಾಭ್ಯಾಸ ಮಾಡಲು ಸ್ಕೂಲಿಗೆ ಸೇರುತ್ತಾರೋ ಅವರುಗಳು ತಮ್ಮ ವ್ಯಾಸಂಗವನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡಿದರೆ ಸುಮಾರು ಶೇಕಡ 70 ಮಂದಿ ವಿದ್ಯಾವಂತರಾಗಬಹುದು. ಈ ರೀತಿಯಾಗಿ ಶಾಲೆಗಳಿಗೆ ಸೇರಿದ ಹುಡುಗರು ಮಧ್ಯೆ ಬಿಡುವುದರಿಂದ, ಓದಬೇಕಾದಷ್ಟು ಓದದೆ ಬಿಡುವುದರಿಂದ ಆಗುವ ವೇಸ್ಟೇಜನ್ನು ಸಮಿತಿಯು ವರದಿಯಲ್ಲಿ ಹೇಳಿದ್ದಾರೆ. ಅದನ್ನು ತಡೆಗಟ್ಟಬೇಕು. ಇದಕ್ಕೆ ತಂದೆ ತಾಯಿಗಳು ಕಾರಣರಲ್ಲ, ಶೇಕಡ 10 ಭಾಗ ಅವರೂ ಕಾರಣರಾಗಿರಬಹುದು. ಇನ್ನು ಮುಖ್ಯವಾಗಿ ಜವಾಬ್ದಾರರಾಗಿರುವವರು ಉಪಾಧ್ಯಾಯರು. ಅಂಕಿ ಸಂಖ್ಯೆಗಳನ್ನು ನೋಡಿದರೆ ಎಷ್ಟೋ ಶಾಲೆಗಳಲ್ಲಿ ಮೊದಲು ಮೂರು ಮಂದಿ ಉಪಾಧ್ಯಾಯರಿರುತ್ತಾರೆ. ಬಾಲಕರ ಸಂಖ್ಯೆ ಕಡಮೆಯಾದಾಗ ಇಬ್ಬರನ್ನು ತೆಗೆದು, ಪುನಃ ಸಾಕಷ್ಟು ವಿದ್ಯಾರ್ಥಿಗಳು ಬಂದಮೇಲೆ ಮೂರು ಮಂದಿ ಉಪಾಧ್ಯಾಯರನ್ನು ಮೊದಲಿನಂತೆ ಕೊಡುತ್ತಾರೆ. ಇದನ್ನು ಗಮನಿಸಬೇಕು. ತಂದೆತಾಯಿಗಳು ಪ್ರೈಮರಿ ವಿದ್ಯಾಭ್ಯಾಸಕ್ಕೆ ಸಹಾಯಮಾಡಬೇಕೆಂದು ಸಲಹೆ ಮಾಡಿದ್ದಾರೆ. ಆದರೆ ಶೇಕಡ ಹತ್ತು ಮಂದಿ ಹಾಗೆ ಸಹಾಯಮಾಡುವುದಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಆರರಿಂದ 12 ವರ್ಷಗಳ ವರೆಗೆ ಹುಡುಗರ ತಂದೆತಾಯಿಗಳಿಗೆ ವಹಿಸುವುದರಿಂದ ಪ್ರಯೋಜನವಾಗುವುದಿಲ್ಲ. ಇದು ಹೊರಗೆ ನಮಗೆ ಕಣ್ಣಿಗೆ ಕಾಣುವುದು. ಒಳಗಿರುವ ಕಾರಣ ವಿದ್ಯಾಭ್ಯಾಸ ಮುಂದುವರಿಯಬೇಕಾದರೆ ಅದು ಉಪಾಧ್ಯಾಯರನ್ನು ಅವಲಂಬಿಸಿರುತ್ತದೆ. ಆದ್ದರಿಂದ ವಿದ್ಯಾಭ್ಯಾಸ ಮಾಡಿಸಬೇಕಾದದ್ದು ನಮ್ಮ ಕರ್ತವ್ಯವಾಗಿರುವುದರಿಂದ ಉಪಾಧ್ಯಾಯರನ್ನು ಸರಿಯಾಗಿ ತರಪೇತು ಮಾಡಬೇಕು. ಉಪಾಧ್ಯಾಯರಿಗೆ ಸರಿಯಾದ ಟ್ರೈನಿಂಗ್ ಕೊಟ್ಟ ಹೊರತು ಯಾವ ಕೆಲಸವೂ ಸಮರ್ಪಕವಾಗಿ ಆಗುವುದಿಲ್ಲ. ಕಟ್ಟಡ ಕಟ್ಟಬಹುದು, ಉಪಾಧ್ಯಾಯರನ್ನು ಕೊಡಬಹುದು, ಇನ್ಸ್‌ಪೆಕ್ಟರ್ ಕೊಡಬಹುದು. ಈಗ ಅದೆಲ್ಲಾ ವೇಸ್ಟ್ ಆಗುತ್ತಿದೆ. ನೂರಕ್ಕೆ ನೂರು ಮಂದಿ ವಿದ್ಯಾರ್ಥಿಗಳು ಪೂರ್ತಿಯಾಗಿ ವಿದ್ಯಾಭಾಸ ಮಾಡುವವರೆಗೆ ಇದಕ್ಕಾಗಿ ಮಾಡುವ ಖರ್ಚು ಸಾರ್ಥಕವಾಗುವುದಿಲ್ಲ. ಈಗ ಶೇಕಡ 33 ಜನ ಮಾತ್ರ ಸರಿಯಾದ ವಿದ್ಯಾವಂತರಾಗುತ್ತಿದ್ದಾರೆ. ಈಗ ನೂರು ರೂಪಾಯಿಗಳನ್ನು ಖರ್ಚು ಮಾಡಿದರೂ 33 ರೂಪಾಯಿಗಳ ಪ್ರಯೋಜನ ಮಾತ್ರ ಲಭಿಸುತ್ತಿದೆ. ಪ್ರೈಮರಿ ವಿದ್ಯಾಭ್ಯಾಸವಾಗಲಿ ಅಥವಾ ಸೆಕೆಂಡರಿ ವಿದ್ಯಾಭ್ಯಾಸವಾಗಲಿ ಅಥವಾ ಕಾಲೇಜು ವಿದ್ಯಾಭ್ಯಾಸವಾಗಲಿ ಸರಿಯಾಗಿ ನಡೆಯಬೇಕಾದರೆ ಅದು ಉಪಾಧ್ಯಾಯರನ್ನವಲಂಬಿಸಿದೆ. ಈಗ ವಿದ್ಯಾನಗರದಲ್ಲಿ ಮೂಲಶಿಕ್ಷಣ ಕೊಡುವ ಪ್ರಯತ್ನ ನಡೆಯುತ್ತಿದೆ, ಅದು ಶೋಚನೀಯ ಸ್ಥಿತಿಯಲ್ಲಿದೆಯೆಂದು ಹೇಳುತ್ತಾರೆ. ಇದರ ಹಾಗೆಯೇ ಇರುವ ಶಾಲೆಗಳಲ್ಲೂ ಇದೇ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಮಾಧರ್ಶ ಶಿಕ್ಷಣದ ಶಾಲೆ ಇದೆಯೆಂದು ಹೇಳುತ್ತಾರೆ, ಅದರ ಕೆಲಸವೂ ಹೀಗೆಯೇ ಇದೆ. ಕೆರೆ ಕಟ್ಟಬಹುದು, ಕಟ್ಟಡ ಕಟ್ಟಬಹುದು, ಆದರೆ ಉಪಾಧ್ಯಾಯರು ಸರಿಯಾಗಿಲ್ಲದಿದ್ದರೆ ದೇಶವೂ, ಜನಾಂಗವೂ ಹಾಳಾಗುತ್ತವೆ. ಒಬ್ಬ ಉಪಾಧ್ಯಾಯರು ಒಂದೆರಡು ಸಾವಿರ ಬಾಲಕರನ್ನಾದರೂ ಕೊನೆಯಪಕ್ಷ ತಯಾರುಮಾಡುತ್ತಾರೆಂದು ನಾನು ಲೆಕ್ಕ ಹಾಕಿದ್ದೇನೆ. ಸರಿಯಾಗಿ ಲೆಕ್ಕ ಹಾಕಿದರೆ ಆ ಅಂಕಿ ಅಂಶ ಇನ್ನೂ ಸ್ವಲ್ಪ ಜಾಸ್ತಿಯಾಗುತ್ತದೆ. ಉಪಾಧ್ಯಾಯರನ್ನು ಸರಿಯಾಗಿ ತರಪೇತು ಮಾಡದಿದ್ದರೆ ದೇಶದ ಉತ್ಪತ್ತಿ ಕಡಿಮೆಯಾಗುವುದೂ ಅಲ್ಲದೆ ದೇಶಕ್ಕೆ ಹಾನಿಯೂ ಸಹ ಆಗುತ್ತದೆ. ಈ ವಿಚಾರದಲ್ಲಿ ತಕ್ಕ ಮುತುವರ್ಜಿ ವಹಿಸದಿದ್ದರೆ, ಕೆಲವರು ಹೇಳಿದಹಾಗೆ, ಕಮ್ಯೂನಿಸಮ್ಮಿಗೆ ನಾವು ಅವಕಾಶ ಮಾಡಿದಹಾಗಾಗುತ್ತದೆ. ವಿದ್ಯಾನಗರದಲ್ಲಿ ಸರಿಯಾಗಿ ವ್ಯವಸ್ಥೆಯಿಲ್ಲವೆಂದು ಹೇಳುತ್ತಾರೆ. ಈಗಿರುವ ಉಪಾಧ್ಯಾಯರುಗಳೂ ಸರಿಯಾಗಿಲ್ಲ. ಹಿಂದೇಕೆ ಚೆನ್ನಾಗಿ ವ್ಯಾಸಂಗ ನಡೆಯುತ್ತಿತ್ತು ಎಂಬುದು ಎಲ್ಲರಿಗೂ ಗೊತ್ತಿರಬಹುದು. ನಾನು ಲೋಯರ್ ಸೆಕೆಂಡರಿ ಪಾಸು ಮಾಡಿದಾಗ ಇದ್ದ ಒಬ್ಬರೇ ಉಪಾಧ್ಯಾಯರು 5 ತರಗತಿಗಳನ್ನು ನೋಡಿಕೊಳ್ಳುತ್ತಿದ್ದರು. ಯಾರ್ಯಾರಿಗೆ ಯಾವ ಯಾವ ಶಿಕ್ಷಣ ಯಾವ ತರಹದಲ್ಲಿ ಕೊಡಬೇಕೋ ಆ ರೀತಿಯಾಗಿ ಅವರು ಕೊಡುತ್ತಿದ್ದರು. ಈ ಸಂದರ್ಭ

ದಲ್ಲಿ ಇಂಗ್ಲೆಂಡ್ ದೇಶದಲ್ಲಿ ನಡೆದ ಒಂದು ಉದಾಹರಣೆಯನ್ನು ಹೇಳಬಹುದು. ಅಲ್ಲಿ 500 ಜನರಿಗೆ ಒಬ್ಬನೇ ಹೇಳಿಕೊಡುತ್ತಿದ್ದನಂತೆ. ಅದು ಪಾರ್ಲಿಮೆಂಟಿನಲ್ಲಿ ಸಹ ಚರ್ಚೆಯಾಗಿದೆ. ಅದನ್ನು ವಿಚಾರ ಮಾಡಲಾಗಿ 'ಕಮ್ಯಾಂಡರ್ ನೇಮಿಸಿದಾಗ ಒಬ್ಬನೇ ಇದ್ದ, ಆ ಮೇಲೆ ಸಬ್ ಕಮ್ಯಾಂಡರ್, ಅನಂತರ ಇತರರು ಸಹಾಯ ಮಾಡಿದರು. ಹಾಗೆಯೇ ವಿದ್ಯಾರ್ಥಿಗಳೂ ವಿಧೇಯರಾಗಿದ್ದುದರಿಂದ ಒಬ್ಬನೇ ಆದರೂ ಸರಿಯಾದ ಮಾರ್ಗಕ್ಕೆ ತರಲು ಅವಕಾಶವಿತ್ತು' ಎಂದು ಆತ ಹೇಳಿದನಂತೆ. ಹಾಗೆ ಸಾಧ್ಯವಾದ ಮಟ್ಟಿಗೆ ನಾವೂ ಸಹ ಸ್ವಲ್ಪ ಖರ್ಚಿನಲ್ಲೇ ಹೆಚ್ಚು ಪ್ರಯೋಜನವಾಗುವಂತೆ ಏರ್ಪಾಡು ಮಾಡಬೇಕು. ನಮ್ಮ ಹಣಕಾಸಿನ ಪರಿಸ್ಥಿತಿ ಈಗ ಸರಿಯಾಗಿಲ್ಲ. ಸುಮ್ಮನೆ 28 ಸಾವಿರ ಉಪಾಧ್ಯಾಯರನ್ನು ನೇಮಿಸಬೇಕೆಂದರೆ ಅದಕ್ಕೆ ಐದಾರು ಕೋಟಿ ರೂಪಾಯಿಗಳಾಗಬೇಕು. ಆದರೆ ಅಷ್ಟು ಹಣ ಒದಗುತ್ತದೆಯೆ, ಇಲ್ಲವೆ ಎಂಬುದನ್ನು ಗಮನಿಸಬೇಕು. ಉಪಾಧ್ಯಾಯರನ್ನೇ ಎಲ್ಲಾ ಅವಲಂಬಿಸಿದೆ ಎಂಬ ಭಾವನೆಯಿಂದ ಅವರಿಗೆ ಹೆಚ್ಚು ಸಂಬಳ ಕೊಡಬೇಕೆಂದು ಹೇಳುವಾಗ ಮಿಲಿಟರಿಯಲ್ಲಿ ಯಾವರೀತಿಯ ಶಿಸ್ತಿದೆಯೋ ಅದೇ ರೀತಿಯ ಶಿಸ್ತನ್ನು ವಿದ್ಯಾಭ್ಯಾಸದಲ್ಲೂ ಇಡದಿದ್ದರೆ ವಿದಾಭ್ಯಾಸ ಹಾಳಾಗುತ್ತದೆ.

ಈಗ ತಾವು ಈ ವಿದ್ಯಾಭ್ಯಾಸದ ಅವಧಿಯನ್ನು ಆರು ವರ್ಷ ಮಾಡಿರುವುದರಿಂದ ಉತ್ತಮವಾದ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಪ್ರಯತ್ನಮಾಡಬೇಕು. ಈ ಸಂದರ್ಭದಲ್ಲಿ ಕೆಲವರು ಹೇಳಿದರು, ಒಬ್ಬೊಬ್ಬ ಉಪಾಧ್ಯಾಯರು ಇರುವ ಸ್ಕೂಲುಗಳಿಗೆಲ್ಲಾ ತರಪೇತಾದ ಮತ್ತೊಬ್ಬ ಉಪಾಧ್ಯಾಯರು ಇರುವಂತೆ ಏರ್ಪಡಿಸಬೇಕೆಂದು. ಇದಕ್ಕೆ ಮುಖ್ಯವಾಗಿ ಬೇಕಾದುದು ದ್ರವ್ಯ ಸಹಾಯ. ನಮ್ಮ ದೇಶದ ಈಗಿನ ಹಣಕಾಸಿನ ಪರಿಸ್ಥಿತಿ ಉತ್ತಮವಾಗದೆ ಇದ್ದರೆ ವಿದ್ಯಾಸುಧಾರಣೆಯ ಕಾರ್ಯವನ್ನು ಜಯಪ್ರದವಾಗಿ ಕೈಕೊಳ್ಳಲು ಸಾಧ್ಯವಾಗಲಾರದು. ನಮ್ಮ ದೇಶಕ್ಕೆ ಅನುಗುಣವಾದ ವಿದ್ಯಾಭ್ಯಾಸಕ್ರಮ ಯಾವುದು ಎಂಬುದನ್ನು ಅರಿತು ಆ ಬಗೆಯ ಶಿಕ್ಷಣಕ್ರಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುವಂತೆ ಮಾಡುವುದು ಅತ್ಯಾವಶ್ಯಕ. ನಮ್ಮ ಸಂಸ್ಥಾನದಲ್ಲಿ ಕೊನೆಯಪಕ್ಷ ಶೇಕಡಾ 80 ಮಂದಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣಕ್ರಮವೇ ಉತ್ತಮವಾದುದು. ಅದನ್ನು ಕಲಿಸಲು ತರಪೇತಾದ ಉಪಾಧ್ಯಾಯರು ಅವಶ್ಯಕ. ಈ ಶಿಕ್ಷಣಕ್ರಮದಲ್ಲಿ ಹೆಚ್ಚಿನ ಪರಿಶ್ರಮವನ್ನು ವಿದ್ಯಾರ್ಥಿಗಳು ಪಡೆದರೆ ಅವರು ತಮ್ಮ ಜೀವನವನ್ನು ತಾವೇ ಸುಗಮವಾಗಿ ಜರುಗಿಸಿಕೊಂಡು ಹೋಗಲು ಒಂದು ಮಾರ್ಗವನ್ನು ಅವರಿಗೆ ಕಲ್ಪಿಸಿಕೊಟ್ಟಹಾಗಾಗುತ್ತದೆ. ನಮ್ಮ ದೇಶ ಮುಖ್ಯವಾಗಿ ವ್ಯವಸಾಯದ ದೇಶ. ಆದುದರಿಂದ ಜನರಿಗೆ ವ್ಯವಸಾಯ ವೃತ್ತಿಯಲ್ಲಿ ಹೆಚ್ಚಿನ ಆಸಕ್ತಿ ಮತ್ತು ಶ್ರದ್ಧೆ ಇರುವಂತೆ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಈಗ ವಿದ್ಯೆ ಕಲಿಯುವವರು ಮುಂದೆ ಉದ್ಯೋಗವನ್ನು ಅವಲಂಬಿಸುವುದಕ್ಕಾಗಿಯೇ ಎಂಬ ಮನೋಧರ್ಮವನ್ನು ತಾಳಬಾರದು. ಸ್ವತಂತ್ರ ಜೀವನವನ್ನು ನಡೆಸಲು ಸಹಾಯಕವಾಗುವ ರೀತಿಯಲ್ಲಿ ವಿದ್ಯೆ ಕಲಿತು, ಅವರು ಕಲಿತ ವಿದ್ಯೆಯಿಂದ ದೇಶಕ್ಕೆ ಉಪಕಾರವಾಗುವಂತಿರಬೇಕು. ಈಗ ನಮ್ಮ ದೇಶದಲ್ಲಿ night school ಎಂದು ಅಲ್ಲಲ್ಲಿ ಏರ್ಪಡಿಸಿಕೊಂಡಿರುತ್ತಾರೆ. ಈ ಸ್ಕೂಲಿಗೆ ಹೋಗುವ ವಿದ್ಯಾರ್ಥಿಗಳು ಮಧ್ಯಾಹ್ನದ ಹೊತ್ತೆಲ್ಲಾ ಉಳುಮೆಯ ಕೆಲಸಮಾಡಿ ರಾತ್ರಿಯ ಹೊತ್ತು ವಿದ್ಯಾಭ್ಯಾಸದಲ್ಲಿ ತೊಡಗುತ್ತಾರೆ. ಮಧ್ಯಾಹ್ನದ ಹೊತ್ತೆಲ್ಲಾ ಕೆಲಸ ಮಾಡಿ ರಾತ್ರಿಯ ಹೊತ್ತು ಪುಸ್ತಕ ಓದುವುದಕ್ಕೆ ಆಗುವುದಿಲ್ಲ. ಇಷ್ಟೇ ಅಲ್ಲದೆ ಅವರು ಕಲಿಯುವ ವಿದ್ಯೆ ಸಹ ಅವರ ಮನಸ್ಸಿಗೆ ಹಿಡಿಯುವುದಿಲ್ಲ. ಆದುದರಿಂದ ಈ ರೀತಿ ಕಲಿತ ವಿದ್ಯಾಭ್ಯಾಸದಿಂದ ಏನೂ ಪ್ರಯೋಜನ ಲಭಿಸದೆ ಕಾಲಹರಣವಾದಂತಾಗುತ್ತದೆ. ಇದರಿಂದ ನಮ್ಮ ದೇಶದ ಜನರು ವಿದ್ಯಾವಿಹೀನರಾಗಿ ಎಲ್ಲೆಲ್ಲಿಯೂ ನಿರುದ್ಯೋಗದ ಪ್ರಶ್ನೆಯು ವಿಪರೀತವಾಗಿ ತಲೆದೋರಿ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯೂ ಸಹ ಬಹಳವಾಗಿ ಕುಂಠಿತಗೊಳ್ಳುತ್ತದೆ. ಆದುದರಿಂದ ನಮ್ಮ ದೇಶದಲ್ಲಿ ಬಹು ಕಡಿಮೆ ಜನರಿಗೆ ಮಾತ್ರ ಅನುಕೂಲವಾಗುವ ಪ್ರೌಢ ವಿದ್ಯಾಭ್ಯಾಸಕ್ಕಿಂತಲೂ ಬಹಳ ಹೆಚ್ಚಿನ ಜನರಿಗೆ ಉಪಯುಕ್ತವಾದ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ಸಲ್ಲಬೇಕಾದುದು ಎಲ್ಲ ದೃಷ್ಟಿಯಿಂದಲೂ ನ್ಯಾಯವಾದುದಾಗಿದೆ.

ಇನ್ನೊಂದು ವಿಚಾರ. ಈಗ ಈ ಸುಧಾರಣೆಯಲ್ಲಿ ಜೂನಿಯರ್ ಮತ್ತು ಸೀನಿಯರ್ ಸೆಕೆಂಡರಿ ವಿದ್ಯಾಭ್ಯಾಸವೆಂದು ಮಾಡಿರುತ್ತೀರಿ. ಈ ವಿಚಾರದಲ್ಲಿ ಈಗಾಗಲೇ ಹಲವು ಮಾನ್ಯ ಸದಸ್ಯರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದುವರೆಗೂ ಇಂಟರ್ ಮೀಡಿಯಟ್ ದರ್ಜೆಯ ಶಿಕ್ಷಣ ಕ್ರಮ ಯೂನಿವರ್ಸಿಟಿಗೆ ಸೇರಿತ್ತು. ಈಗ ಅದನ್ನು ತಪ್ಪಿಸಿ ವಿದ್ಯಾ ಇಲಾಖೆಯ ಆಡಳಿತಕ್ಕೆ ವಹಿಸುವ ಹೊಸದೊಂದು ವ್ಯವಸ್ಥೆ ಈ ಸುಧಾರಣೆಯಲ್ಲಿ ಕಂಡುಬಂದಿದೆ. ಇದು ಎಷ್ಟುಮಾತ್ರವೂ ಸಾಧುವಾದುದಲ್ಲ. ಇದುವರೆಗೂ ಇದಕ್ಕೆ ಕೊಟ್ಟಿದ್ದ ಘನತೆಯ ಮಟ್ಟವನ್ನೇ ತಗ್ಗಿಸಿದಂತಾಗುತ್ತದೆ.

ಪ್ರೌಢ ವಿದ್ಯಾಭ್ಯಾಸಕ್ರಮದಲ್ಲಿ ಹೆಚ್ಚಿನ ಪರಿಶ್ರಮ ಪಡೆಯುವ ಮೊದಲು, ನಮ್ಮ ಜನರು ಪ್ರಾಥಮಿಕ ಮತ್ತು ಮಾಧ್ಯಮಿಕದಲ್ಲಿಯೇ ಹೆಚ್ಚಿನ ಪರಿಶ್ರಮವುಳ್ಳವರಾಗಿರಬೇಕು. ಈ ಮಟ್ಟದ ವಿದ್ಯಾರ್ಹತೆ ಉತ್ತಮಗೊಳ್ಳುವ ವರೆಗೆ ಪ್ರೌಢ ಶಿಕ್ಷಣದಿಂದ ಹೆಚ್ಚಿನ ಉಪಯೋಗವಾಗಲಾರದು. ಆದುದರಿಂದ ಮೊದಲು ಮಾಧ್ಯಮಿಕ ಮತ್ತು ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸ ಕ್ರಮದಲ್ಲಯೇ ನಮ್ಮ ದೇಶದ ವಿದ್ಯಾರ್ಥಿಗಳಿಗೆ ಯಾವ ರೀತಿಯ ಶಿಕ್ಷಣ ಯುಕ್ತವಾದುದು ಎಂಬುದನ್ನು ಅರಿತು ಅದಕ್ಕೆ ತಕ್ಕ ರೀತಿಯಲ್ಲಿ ಶಿಕ್ಷಣ ಕ್ರಮವನ್ನು ರಚಿಸಬೇಕು.

1 P.M.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಕಾಲೇಜಿಗೆ ಸಂಬಂಧಪಟ್ಟಂತೆ ಯೂನಿವರ್ಸಿಟಿ ಕೌನ್ಸಿಲ್ ಎಂದು ಮಾಡಿದ್ದಾರೆ. ಅದು ಎಲೆಕ್ಟೆಡ್ ಬಾಡಿ. ಪ್ರೊಫೆಸರ್ಸ್ ಸಹ ಎಲೆಕ್ಟ್ ಆಗಿ ಬರಬೇಕೆಂದು ಹೇಳಿದ್ದಾರೆ. ಆ ರೀತಿ ಇರಕೂಡದು, ತಾವೇ ನಾಮಿನೇಟ್ ಮಾಡಿ. ಏಕೆಂದರೆ ಅಲ್ಲಿ ರಾಜಕೀಯ ಸಹ ನಡೆಯುತ್ತಿದೆ ಎಂದು ಅನೇಕರು ಹೇಳಿದ್ದಾರೆ. ಆದ್ದರಿಂದ ನಾನು ಹೇಳುವುದು ಯೂನಿವರ್ಸಿಟಿ ಕೌನ್ಸಿಲ್ಲಿಗೆ ಹೆಚ್ಚು ಪವರ್ಸ್ ಕೊಡಬೇಕಾದರೆ ತಾವು ಯೂನಿವರ್ಸಿಟಿ ಸಿಂಡಿಕೇಟ್ ಎಂಬುದನ್ನು ನೇಮಕ ಮಾಡುವುದು ಒಳ್ಳೆಯದು.

ಮತ್ತೊಂದು ವಿಷಯವೇನೆಂದರೆ, ಇದರಲ್ಲಿ ಸಾರ್ವಜನಿಕರ ಪಾತ್ರ ಕಡಮೆಯಾಗಿದೆ. ನಾವು ಓದುತ್ತಾ ಇರಬೇಕಾದರೆ ವಿಲೇಜ್ ಕೌನ್ಸಿಲ್ ಎಂದು ಹೇಳಿ ಒಂದು ಸಮಿತಿ ಮಾಡಿದ್ದರು. ಅವರು ಎರಡು ಅಥವಾ 3 ತಿಂಗಳಿಗೆ ಒಂದು ಸಾರಿ ಬಂದು ಉಪಾಧ್ಯಾಯರು

(ಶ್ರೀ ಎಚ್. ಎಸ್. ರುದ್ರಪ್ಪ.)

ಯಾವರೀತಿ ಕೆಲಸ ಮಾಡುತ್ತಾಯಿದ್ದಾರೆ, ಸ್ಕೂಲಿನ ಕೆಲಸಕಾರ್ಯಗಳ ಪ್ರೋಗ್ರೆಸ್ ಯಾವ ರೀತಿ ನಡೆಯುತ್ತಾಯಿದೆ ಎಂಬುದನ್ನೆಲ್ಲಾ ನೋಡುತ್ತಿದ್ದರು. ಅದರಿಂದ ಉತ್ತಮವಾದ ಒಂದು ಅಭ್ಯಾಸ ನಡೆಯುತ್ತಾ ಇತ್ತು. ಈಗ ಅದೆಲ್ಲಾ ವಜಾ ಆಗಿದೆ. ನನಗಾದರೂ ಅನ್ನಿಸುತ್ತದೆ, ದೇಶದ ಜವಾಬ್ದಾರಿ ನಮ್ಮ ಮೇಲೆ ಇರುವಾಗ ಸಾರ್ವಜನಿಕರ ಅಭಿಪ್ರಾಯ ಯಾವಾಗಲೂ ಶೇಖರಿಸಬೇಕಾಧದ್ದು ಅತ್ಯಗತ್ಯ. ಹಿಂದೆ ಇದ್ದಂತೆ ಸಮಿತಿ ನೇಮಕಮಾಡಿ ಪ್ರೋಗ್ರೆಸ್ ಯಾವ ರೀತಿ ಇದೆ ಎಂಬುದನ್ನು ನೋಡಬೇಕು. ಈಗ ತಾವು ಸರ್ಕಾರಿ ಸ್ಕೂಲುಗಳಿಗೂ, ಪ್ರೈವೇಟ್ ಸ್ಕೂಲುಗಳಿಗೂ ಇರತಕ್ಕ ವ್ಯತ್ಯಾಸ ನೋಡಿ, ಎಷ್ಟೋ ಹೆಚ್ಚು ಕಡಮೆ ಇದೆ. ಪ್ರೈವೇಟ್ ಸ್ಕೂಲುಗಳಲ್ಲಿ ಸೌಕರಣೆಗಳು ಜಾಸ್ತಿಯಿಲ್ಲ. ಆದ್ದರಿಂದ ಹುಡುಗರು ಬರುತ್ತಿಲ್ಲ. ಪ್ರೈವೇಟ್ ಸ್ಕೂಲ್‌ನಲ್ಲಿರತಕ್ಕ ವಿದ್ಯಾಭ್ಯಾಸ ಕ್ರಮ, ಶಿಕ್ಷಣ, ಶಿಸ್ತು ಸರ್ಕಾರಿ ಸ್ಕೂಲಿನಲ್ಲಿ ಇಲ್ಲ. ಬಹಳ ಕಡಮೆ. ಏಕೆ ಇಷ್ಟು ಜನ ಫೇಲ್ ಆಗಿಧ್ದಾರೆ ಎಂದು ಕೇಳಿದರೆ 'ಏನುಮಾಡುವುದು ಸಾರ್ ಒಂದು ತಿಂಗಳು ಪಾಠಗಳೇ ಆಗಲಿಲ್ಲ' ಎಂದು ಹೇಳುತ್ತಾರೆ; ಇದು ನನಗೆ ಗೊತ್ತಿರತಕ್ಕ ವಿಚಾರ, ಬೇಕಾದರೆ ವೇರಿಫೈ ಮಾಡಿಕೊಳ್ಳಿ. ತಾವು ಯಾವ ರೀತಿಯಾದ ಚೆಕ್ಸನ್ನೂ ಇಟ್ಟಿಲ್ಲ. ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಚೆಕ್ಸ್ ಅಂಡ್ ಕೌಂಟರ್ ಚೆಕ್ಸ್ ಇದ್ದೇ ಇರಬೇಕು. ಈಗ ನಾನು ನಮ್ಮ ಶಿವನಂಜೇಗೌಡರ ವಿಚಾರ ತಿಳಿಯದೇ ಹೇಳಬೇಕಾದರೆ ಹೆದರುತ್ತೇನೆ. ಸಾರ್ವಜನಿಕ ಜೀವನ ಬಹಳ ಕಷ್ಟ. ವಿದ್ಯಾರ್ಥಿಗಳ ಮೇಲೆ ಮೇಷ್ಟ್ರುಗಳು ಹೇಳುವುದಾಗಲಿ, ಮೇಷ್ಟ್ರುಗಳಮೇಲೆ ವಿದ್ಯಾರ್ಥಿಗಳು ಹೇಳುವುದಾಗಲಿ ಬಹಳ ಕಷ್ಟ. ಆದ್ದರಿಂದ ಒಂದು ಸಾರ್ವಜನಿಕ ಸಮಿತಿ ನೇಮಕ ಮಾಡಿ ಪ್ರೋಗ್ರೆಸ್ ಹೇಗೆ ನಡೆಯುತ್ತಿದೆ ಎಂಬುದನ್ನು ವಿಚಾರಮಾಡಬೇಕು. ಎಫಿಷೆನ್ಸಿ ಆಡಿಟ್ ಇದ್ದಹಾಗೆ ಉಪಾಧ್ಯಾಯರ ಮೇಲೂ ಸಹ ಒಂದು ಚೆಕ್ ಇದ್ದರೆ ಬಹಳ ಉತ್ತಮ ಎಂದು ಕಾಣುತ್ತದೆ. ಒಬ್ಬ ಮನುಷ್ಯ ಒಳ್ಳೆಯ ಜೀವನ ನಡೆಸಬೇಕಾಗಿದ್ದರೆ ಅವಕ್ಕೆ ತಳಹದಿ ವಿದ್ಯಾಭ್ಯಾಸ ಮಾಡಿಸತಕ್ಕ ಉಪಾಧ್ಯಾಯರು, ಅವರಿಗೆ ಹೆಚ್ಚು ಸಂಬಳ ಕೊಡಬೇಕು. ಹೆಚ್ಚು ಸಂಬಳ ಕೊಡುವುದಷ್ಟೇ ಅಲ್ಲದೆ ಸರಿಯಾಗಿ ಕೆಲಸ ಮಾಡದಿದ್ದಲ್ಲಿ ಕಠಿಣವಾದ ಶಿಕ್ಷೆ ಅವರಿಗೆ ಕೊಡಬೇಕು. ಹಾಗೆ ಶಿಕ್ಷೆ ವಿಧಿಸದಿದ್ದರೆ ವಿದ್ಯಾಭ್ಯಾಸ ಮಕ್ಕಳಿಗೆ ಸರಿಯಾಗಿ ದೊರಕುವುದಿಲ್ಲ. ಪದೇ ಪದೇ ಈ ರೀತಿಯ ಮಾರ್ಪಾಡುಗಳ ವರದಿಮೇಲೆ ವರ್ಷೇ ವರ್ಷೇ ನಾವು ಮಾತನಾಡುತ್ತಲೇ ಇರಬೇಕಾಗುತ್ತದೆ. ಅಷ್ಟೇ ಅಲ್ಲದೆ ದೇಶದಲ್ಲಿರತಕ್ಕ ಈ ಒಂದು ಅಶಿಸ್ತನ್ನು ನಾವು ಇನ್ನೂ ಅನೇಕ ವರ್ಷ ನೋಡಬೇಕಾಗುತ್ತದೆಯೋ ಏನೋ ಎಂಬ ಭಯ ಕೂಡ ಬರುತ್ತದೆ.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಪತಿಗಳೇ ಈಗಾಗಲೇ ಈ ವಿದ್ಯಾಭ್ಯಾಸದ ಮಾರ್ಪಾಡಿನ ವರದಿಮೇಲೆ ಅನೇಕ ಮಾನ್ಯ ಸದಸ್ಯರುಗಳ ಸಲಹೆಗಳು ನಮ್ಮ ಮುಂದೆ ಇಡಲ್ಪಟ್ಟಿವೆ. ದೇಶ ಸ್ವತಂತ್ರವಾಗುವುದಕ್ಕೆ ಮುಂಚಿನಿಂದಲೂ, ಎಂದರೆ, ಬಹಳ ಕಾಲದಿಂದಲೂ ಕೂಡ ನಾವು ಗುಲಾಮಗಿರಿಯಿಂದ ಬಂದಿರತಕ್ಕ ಈ ಒಂದು ವಿದ್ಯಾಭ್ಯಾಸ ಕ್ರಮ ತೊಲಗಬೇಕು, ನಮ್ಮ ದೇಶಕ್ಕೆ ಹೊಂದಿಕೆಯಾಗತಕ್ಕ ಒಂದು ವಿದ್ಯಾಭ್ಯಾಸ ಕ್ರಮವನ್ನು ತರಬೇಕು, ಆ ರೀತಿ ಒಂದು ಮಾರ್ಪಾಡು ಮಾಡಬೇಕು ಎಂದು ಶಾಸನ ಸಭೆಗಳಲ್ಲಿ ಮತ್ತು ಹೊರಗಡೆ ಅನೇಕ ಇತರ ಸಭೆಗಳಲ್ಲೂ ಕೂಡ ಅನೇಕ ವಿಧವಾಗಿ ಕೂಗಾಡಿದ್ದೇವೆ, ಸಲಹೆ ಮಾಡಿದ್ದೇವೆ. ಈಗಿನ ವಿದ್ಯಾಭ್ಯಾಸವನ್ನು ಆದಷ್ಟು ಜಾಗ್ರತೆ ಮಾರ್ಪಾಡು ಮಾಡಬೇಕೆಂದು ದೇಶದ ಮೇಲೆ ಒತ್ತಾಯವನ್ನು ಕೂಡ ನಾವು ಹಾಕಿದ್ದೇವೆ. ಈ ರೀತಿ ಒಂದು ಒತ್ತಾಯ ಇದ್ದಂಥ ಕಾಲದಲ್ಲಿ, ದೇಶಕ್ಕೆ ಸ್ವಾತಂತ್ರ್ಯ ಲಭಿಸಿರುವಾಗ ಈ ವಿದ್ಯಾಭ್ಯಾಸದ ಮಾರ್ಪಾಡನ್ನು ಮಾಡಬೇಕೆಂದು ಈಗಿನ ಮಂತ್ರಿಮಂಡಲದವರು, ಶತಾಯಗತಾಯ ಮನಸ್ಸುಮಾಡಿ ಈ ಮಾರ್ಪಾಡುಮಾಡಬೇಕೆಂದಿರುವ ಕ್ರಮವನ್ನು ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಒಳ್ಳೆಯ ವಿದ್ಯಾವಂತರು, ಮೇಧಾವಿಗಳು, ಅನುಭವಶಾಲಿಗಳನ್ನು ಈ ಕೆಲಸಕ್ಕಾಗಿ ಉಪಯೋಗಿಸಿಕೊಂಡು ಬಹಳ ಜಾಗ್ರತೆ ಈ ವರದಿಯನ್ನು ತಯಾರು ಮಾಡಿ, ವರದಿಯಲ್ಲಿ ಅಡಕವಾಗಿರತಕ್ಕ ಅಂಶಗಳನ್ನು ಸಫಲಗೊಳಿಸಬೇಕೆಂಬ ಒಂದು ಸದುದ್ದೇಶದಿಂದ ಸರ್ಕಾರದವರಿದ್ದಾರೆ. ಸಮಿತಿಯವರಾದರೂಕೂಡ ತಮಗೆ ವಹಿಸಿದಂಥ ಕಾರ್ಯವನ್ನು ದೇಶಾಭಿಮಾನದಿಂದ ಮತ್ತು ಸರ್ಕಾರದವರಿಗಿರತಕ್ಕ ಒಂದು ಸದುದ್ದೇಶವನ್ನು ನೆರವೇರಿಸಬೇಕೆಂಬ ಸದ್‌ಭಾವನೆಯಿಂದ ಬಹಳ ಮುತುವರ್ಜಿವಹಿಸಿ ಕೆಲಸಮಾಡಿ ಈ ವರದಿಯನ್ನು ಬಹಳ ಕಷ್ಟಪಟ್ಟು ತಯಾರುಮಾಡಿದರು. ಆ ರೀತಿ ತಯಾರುಮಾಡುವಾಗ ಬಾಕಿ ದೇಶಗಳಲ್ಲಿ ಯಾವ ತರಹ ವಿದ್ಯಾಭ್ಯಾಸ ಇದೆ, ನಮ್ಮ ದೇಶದಲ್ಲಿರತಕ್ಕ ವಿದ್ಯಾಭ್ಯಾಸ ಪದ್ಧತಿಯನ್ನು ಯಾವಯಾವ ರೀತಿ, ಕಾಲಕ್ಕನುಗುಣವಾಗಿ ಮಾರ್ಪಾಡುಮಾಡಬೇಕು ಎಂಬುದನ್ನು ಕೂಡ ಅವರು ಪರಿಶೀಲನೆ ಮಾಡಿದ್ದಾರೆ. ಹಿಂದೆ 20 ವರ್ಷಗಳ ಅಂತಸ್ತಿಗೂ ಈಗಿನ ಕಾಲದ ಮಕ್ಕಳ ಅಂತಸ್ತಿಗೂ ವ್ಯತ್ಯಾಸ ಇದೆ ಎಂಬುದನ್ನೆಲ್ಲಾ ಬಹಳ ಚೆನ್ನಾಗಿ ವಿಮರ್ಶೆಮಾಡಿ ವರದಿ ತಯಾರುಮಾಡಿದ್ದಾರೆ. ಸಮಿತಿಯವರಿಗೆ ಈ ಸಭೆಯ ಪರವಾಗಿ ವಂದನೆಗಳನ್ನರ್ಪಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಆದರೆ ಈ ಸಭೆಯಲ್ಲಿ ಮಾತನಾಡುವಾಗ ನಾವು ನಮ್ಮ ತಿಳಿವಳಿಕೆಯ ಮಟ್ಟದಿಂದ ಸರ್ಕಾರದವರು ಇದನ್ನು ಜಾರಿಗೆ ತರಲು ಹಣ ಯಾವ ರೀತಿ ಒದಗಿಸುತ್ತಾರೆ, ಒದಗಿಸುವುದಕ್ಕೆ ಹೇಗೆ ಸಾಧ್ಯ ಎಂಬ ಒಂದು ವಿಷಯವನ್ನು ತಲೆಗೆ ಹಚ್ಚಿಕೊಂಡಿರುವ ಹಾಗೆ ಕಾಣುತ್ತದೆ. ಇದನ್ನು ಹಿಂದೆ ನಾವು ನಿರೀಕ್ಷಣೆ ಮಾಡಿದ್ದಿಲ್ಲ. ಗುಲಾಮಗಿರಿಯ ವಿದ್ಯಾಭ್ಯಾಸ ತೊಲಗಬೇಕು, ನಮ್ಮ ದೇಶಕ್ಕನುಗುಣವಾಗಿ ವಿದ್ಯಾಭ್ಯಾಸ ಮಾರ್ಪಾಡಾಗಬೇಕು ಎಂಬ ಒಂದು ಸದ್‌ಭಾವನೆ ಇದ್ದು, ಮುಂದೆ ನಾವು ನಮ್ಮ ಜನಾಂಗಕ್ಕೆ ಎಂಥ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ಪ್ರಶ್ನೆ ಮುಖ್ಯವಾದ ಪ್ರಶ್ನೆಯಾಗಿತ್ತು. ಹಾಗಿರುವಾಗ ನಾವು ಈ ದಿನ ಇದಕ್ಕೆ ಹಣ ಎಲ್ಲಿದೆ, ಇದು ಸಾಧ್ಯವೇ ಎಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡುತ್ತಾ ಹೋದರೆ ಇದು ಎಷ್ಟುಮಟ್ಟಿಗೆ ಫಲಕಾರಿಯಾಗುತ್ತದೆ. ಇದು ನ್ಯಾಯವೇ ಎಂಬುದನ್ನು ಕೂಡ ನಾವು ಯೋಚನೆಮಾಡಬೇಕಾಗಿದೆ. ಹಣದ ವಿಷಯವನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕು ಮತ್ತು ವರದಿಯಲ್ಲಿರತಕ್ಕ ಒಂದು ಮೂಲ ತತ್ವ ಏನಿದೆಯೋ ಅದನ್ನು ಈಗ ಚರ್ಚೆಮಾಡಿದರೆ ಸರಿ ಎಂದು ನನಗೆ ಕಾಣುತ್ತದೆ.

ಈಗಿರತಕ್ಕ ವಿದ್ಯಾಭ್ಯಾಸದಲ್ಲಿ ಏನು ಹೇಳಿದೆಯೋ ಅದೇರೀತಿ ಮುಂದೆಯೂ ಪ್ರೈಮರಿ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ 8 ವರ್ಷಗಳಿರಬೇಕೆಂದು ಅನೇಕ ಸದಸ್ಯರು ಸಲಹೆ ಮಾಡಿದರು. ಈ ಸುಧಾರಣೆಯಲ್ಲಿ

ಇದನ್ನು 6 ವರ್ಷಕ್ಕೆ ಇಳಿಸಿರುವುದನ್ನು ವಿರೋಧಿಸಿ, ಇದರಿಂದಾಗಿ 14 ವರ್ಷಗಳ ಕಾಲ ತವುಗೆ ದೊರೆಯುತ್ತಿದ್ದ ಉಚಿತ ವಿದ್ಯಾಭ್ಯಾಸ ತಪ್ಪಿದಂತಾಗುತ್ತದೆಂದು ಅವರು ವಾದ ಮಾಡಿದರು. ಆದರೆ ಈ ರಿಪೋರ್ಟಿನಲ್ಲಿ ಇದಕ್ಕೆ ಸಮಜಾಯಿಷಿಯಾಗಿ ಏನು ತಿಳಿಸಿದ್ದಾರೆಂಬುದನ್ನು ತಾವು ನೋಡಬೇಕು. 8 ವರ್ಷಗಳ ವಿದ್ಯಾಭ್ಯಾಸವನ್ನು 6 ವರ್ಷಗಳಿಗೆ ಇಳಿಸಿದ್ದರಿಂದ ವಿದ್ಯಾಮಟ್ಟದಲ್ಲಿಯೇನೂ ಕಡಮೆಯಾಗುವುದಿಲ್ಲ, 8 ವರ್ಷಗಳಲ್ಲಿ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿಕೊಡುತ್ತಾ ಇರುವುದು, ಪ್ರೈಮರಿ ನಾಲ್ಕನೆಯ ತರಗತಿಯಲ್ಲಿ ಹೇಳಿಕೊಟ್ಟಿದ್ದನ್ನು ಮಿಡ್ಲ್ ಒಂದನೆಯ ತರಗತಿಯಲ್ಲಿ ಮತ್ತೆ ಹೇಳಿಕೊಡುವುದು — ಇವೆಲ್ಲಾ ಅವಶ್ಯಕವಲ್ಲವೆಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲದೆ, ಇನ್ನೊಂದು ಅಂಶವನ್ನೂ ನಾವು ಗಮನಿಸಬೇಕು. ಹಳ್ಳಿಗಾಡುಗಳಲ್ಲಿ ಮೊದಲು ಪ್ರೈಮರಿ ಪಾಠಶಾಲೆಗೆ ಸೇರುವಾಗ ಹುಡುಗರು ಎಷ್ಟು ಸಂಖ್ಯೆಯಲ್ಲಿರುತ್ತಾರೋ ಅದೇ ಸಂಖ್ಯೆಯಲ್ಲಿ ಪ್ರೈಮರಿ ನಾಲ್ಕನೆಯ ತರಗತಿ ಕಳೆಯುವಹೊತ್ತಿಗೂ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ನಾಲ್ಕನೆಯ ತರಗತಿ ಆಯಿತೆಂದು ಅಲ್ಲಿಂದ ಸರ್ಟಿಫಿಕೇಟ್ ತೆಗೆದುಕೊಂಡು ಮಾಧ್ಯಮಿಕ ಶಾಲೆಗೆ ಕರೆದುಕೊಂಡು ಹೋಗಿ ಮಕ್ಕಳನ್ನು ಸೇರಿಸಬೇಕೆಂಬುದರ ಕಡೆಗೆ ಕಂದೆತಾಯಿಗಳಿಗೆ ಗಮನವೇ ಇರುವುದಿಲ್ಲ. ಹೀಗಾಗಿ ಅರ್ಧಕ್ಕಿಂತ ಹೆಚ್ಚು ಜನ ಮಕ್ಕಳು ಮಾಧ್ಯಮಿಕ ಶಾಲೆಗೆ ಬರುವ ವೇಳೆಗೆ ಕುಸಿದುಬಿದ್ದುಹೋಗುತ್ತಾರೆ.

ಅಲ್ಲದೆ ಇನ್ನೂ ಒಂದು ಅಂಶ. ಪ್ರೈಮರಿ ಪಾಠಶಾಲೆಯಾದಮೇಲೆ ಮಾಧ್ಯಮಿಕ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಬೇಕೆಂಬ ಮಮತೆಯಿದ್ದರೂ ಎಲ್ಲಾ ತಂದೆತಾಯಿಗಳಿಗೂ ಅಂಥ ಯೋಗ್ಯತೆಯಿದೆಯೋ ಎಂಬುದನ್ನೂ ತಾವು ನೋಡಬೇಕು. ಎಲ್ಲಾ ಹಳ್ಳಿಯ ಮಕ್ಕಳಿಗೂ ಅನುಕೂಲತೆಗಳಿರುವುದಿಲ್ಲ. ಈಗ ನೂರಕ್ಕೆ 10 ಮಕ್ಕಳಿಗೆ ಮಾತ್ರ ಮಾಧ್ಯಮಿಕ ಶಾಲೆಯ ಅನುಕೂಲತೆ ದೊರೆಯುತ್ತಿದೆಯೋ ಹೊರತು ಬಾಕಿ ಮಕ್ಕಳಿಗೆ ಈಗ ಆಗುತ್ತಿರುವ ಪ್ರಯೋಜನವಾದರೂ ಏನು? ಹೀಗಿರುವಾಗ ಹಳ್ಳಿಗಾಡಿನ ಬಹು ಜನಸಾಮಾನ್ಯಕ್ಕೆ ಈಗಿನ ಮಾಧ್ಯಮಿಕ ಶಾಲೆಯಿಂದ ಆಗುತ್ತಿರುವ ಪ್ರಯೋಜನವಾದರೂ ಏನು ? ವಾಸ್ತವಿಕವಾಗಿ ಈಗಿರುವ ಮಾಧ್ಯಮಿಕ ಶಾಲೆಗಳಿಂದ ಪಟ್ಟಣದ ಮಕ್ಕಳಿಗೆ ಪ್ರಯೋಜನವಾಗುತ್ತಿದೆಯೋ ಹೊರತು ಹಳ್ಳಿಯ ಮಕ್ಕಳಿಗೆ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಈ ಸುಧಾರಣೆಯಲ್ಲಿ ಹೇಳಿದಂತೆ ಮಾಡುವುದಾದರೆ ಮಕ್ಕಳನ್ನು ಮೊದಲನೆಯ ವರ್ಷದ ತರಗತಿಗೆ ಸೇರಿಸಿದರೆ, ಅವರಿಗೆ ಮುಂದೆ 6 ವರ್ಷಗಳವರೆಗಾದರೂ ವಿದ್ಯಾಭ್ಯಾಸ ದೊರೆಯುತ್ತದೆಂಬ ನಿರೀಕ್ಷಣೆಯಿಟ್ಟುಕೊಳ್ಳಬಹುದಾಗಿದೆ. ಆದ್ದರಿಂದ ನಾವು ಮುಖ್ಯವಾಗಿ, 8 ವರ್ಷಗಳಲ್ಲಿ ಬರುತ್ತಿದ್ದ ತಿಳಿವಳಿಕೆಗಿಂತಲೂ ಈ 6 ವರ್ಷಗಳಲ್ಲಿ ಬರಬಹುದಾದ ತಿಳಿವಳಿಕೆಯೇನಾದರೂ ಕಡಮೆಯಾಗಿರುತ್ತದೆಯೇ ಎಂಬುದನ್ನು ಪರಿಗಣಿಸಬೇಕು ಅಷ್ಟೇ. ಆರು ವರ್ಷಕ್ಕೆ ತಗ್ಗಿಸಿದ್ದರಿಂದ ತಿಳಿವಳಿಕೆಯ ಮಟ್ಟವೇನೂ ಕಡಮೆಯಾಗುವುದಿಲ್ಲವೆಂದು ಇಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲದೆ ಆರು ವರ್ಷಕ್ಕೆ ತಗ್ಗಿಸಿದ್ದರಿಂದ ಏನು ಅನುಕೂಲವಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. 8 ವರ್ಷಕ್ಕೆ ಆಗುತ್ತಿದ್ದ ಖರ್ಚು ಕಡಿಮೆಯಾಗುತ್ತದೆ. ತಿಳಿವಳಿಕೆ ಮಟ್ಟ ಅಷ್ಟೇ ಇದ್ದರೂ ಖರ್ಚು ಕಡಿಮೆಯಾಗುತ್ತದೆಂಬುದನ್ನು ಮನಗಾಣಬೇಕು. ಇದರಿಂದ 8 ವರ್ಷಕ್ಕೆ ಬೇಕಾಗುತ್ತಿದ್ದ ಉಪಾಧ್ಯಾಯರುಗಳ ಸಂಖ್ಯೆಯನ್ನು 6 ವರ್ಷಕ್ಕೆ ಒದಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಉಪಾಧ್ಯಾಯರುಗಳ ಕೊರತೆಯೂ ತಪ್ಪುತ್ತದೆ. ಅಲ್ಲದೆ, ಇಂದು ನಮ್ಮ ದೇಶ ಸೆಕ್ಯುಲರ್ ಸ್ಟೇಟ್. ಇಲ್ಲಿ ಉರ್ದು ಪಾಠಶಾಲೆಗಳು, ತಮಿಳು ಪಾಠಶಾಲೆಗಳು, ತೆಲುಗು-ಕನ್ನಡ ಪಾಠಶಾಲೆಗಳು ಎಂದು ನಾನಾ ತೆರನಾದ ಪಾಠಶಾಲೆಗಳಿವೆ. ಈ ಸುಧಾರಣೆಯಂತೆ ಇವೊತ್ತು ಒಂದೇ ತೆರನಾದ ಪಾಠಶಾಲೆಗಳನ್ನು ಏರ್ಪಡಿಸುವುದಾದರೆ, ನಾವು ನಿಜವಾದ ಸೆಕ್ಯುಲರ್ ಸ್ಟೇಟನ್ನು ಕಟ್ಟುವುದಕ್ಕೆ ತಳಹದಿ ಹಾಕಿದಂತಾಗುತ್ತದೆ. 8 ವರ್ಷಕ್ಕೆ ಆಗುತ್ತಿದ್ದ ಉಪಾಧ್ಯಾಯರುಗಳು, ಕಟ್ಟಡಗಳು ಎಲ್ಲಾ ಈ ಆರು ವರ್ಷದ ಪ್ರೈಮರಿ ಪಾಠಶಾಲೆಗಳಿಗೇ ನಿಯೋಜಿತವಾಗಿ ಇತ ಉಪಾಧ್ಯಾಯರುಗಳ ಕೊರತೆಯೂ ಅತ್ತ ಕಟ್ಟಡಗಳ ಅಭಾವವೂ ಸ್ವಲ್ಪಮಟ್ಟಿಗೆ ಕಡಮೆಯಾಗುತ್ತದೆ.

ಅಲ್ಲದೆ ನಾವಿದನ್ನು ಜಾರಿಗೆ ಕೊಡುವುದರಲ್ಲೂ ಚೆನ್ನಾಗಿ ಯೋಚನೆ ಮಾಡಿಯೇ ಜಾರಿಗೆ ಕೊಡುತ್ತೇವೆ. ಏಕೆಂದರೆ ದೇಶಾದ್ಯಂತ ಒಂದೇ ವರ್ಷ ಇದನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಎಷ್ಟು ವರ್ಷದಲ್ಲಿ ಜಾರಿಗೆ ಕೊಡಬೇಕು, ಯಾವ ಭಾಗದಲ್ಲಿ ಜಾರಿಗೆ ಕೊಡಬೇಕು ಎಂಬುದನ್ನು ಯೋಚನೆ ಮಾಡಿ ಮಾಡಬೇಕಾಗುತ್ತದೆ. ಏಕೆಂದರೆ ಇದ ವರೆಗೆ ನಮ್ಮ ದೇಶದಲ್ಲಿ ಈ ರೀತಿ ವಿದ್ಯಾಭ್ಯಾಸದ ಮಾರ್ಪಾಡುಗಳನ್ನು ಆಗಾಗ್ಗೆ ಮಾಡಿಕೊಂಡು ಬಂದಿದ್ದೇವೆ. ಅವು ಎಲ್ಲಿ fail ಆಗಿವೆಯೆಂದರೆ, ಕಾರ್ಯರೂಪಕ್ಕೆ ತರುವುದರಲ್ಲಿ ಮಾತ್ರ. ಆದ್ದರಿಂದ ಈಗ ನಾವು ಮುಖ್ಯವಾಗಿ ಸರ್ಕಾರದವರ ಗಮನಕ್ಕೆ ತರಬೇಕಾದ್ದೇನೆಂದರೆ, ಈ ಸ್ಕೀಮನ್ನು ಜಾರಿಗೆ ತರುವಾಗ ಮೊದಲು ಒಂದು ಚಿಕ್ಕ ಪ್ರದೇಶದಲ್ಲಿ ಅಂದರೆ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಜಾರಿಗೆ ತನ್ನಿ. ಆದರೆ ಯಾವುದೇ ಪ್ರದೇಶ ತೆಗೆದುಕೊಂಡರೂ ಅಲ್ಲಿ ದಕ್ಷತೆಯಿಂದ ಜಾರಿಗೆ ಬರುವಂತೆ ಮಾಡಬೇಕೇ ಹೊರತು ಕಡ್ಡಾಯವಾಗಿ ಎಲ್ಲಾ ಕಡೆಯಲ್ಲೂ ಸ್ಕೀಮನ್ನು ತಂದು ಕೊನೆಗೆ ನಡೆವಳಿಕೆಯಲ್ಲಿ ವಿಫಲವಾಗುವ ಮಾರ್ಗಕ್ಕೆ ಹೋಗಕೂಡದು. ನಮ್ಮ ದೇಶದಲ್ಲಿ ಈ ವಿದ್ಯಾಭ್ಯಾಸ ಸುಧಾರಣೆಯನ್ನು ಬಹಳ ಕಾಲದಿಂದ ನಿರೀಕ್ಷಣೆ ಮಾಡುತ್ತಿದ್ದೇವೆ. ಆದ್ದರಿಂದ ನಮ್ಮ ನಿರೀಕ್ಷಣೆ ಸಫಲವಾಗಬೇಕಾದರೆ ಬಹಳ ದಕ್ಷತೆಯಿಂದ ಜಾರಿ ಮಾಡಬೇಕಾಗಿರುತ್ತದೆ. ಈಗ ಮಾನ್ಯ ಸದಸ್ಯರೊಬ್ಬರು ಬೇಸಿಕ್ ಎಜ್ಯುಕೇಷನ್ ಶಿಕ್ಷಣ ನಡೆಯುತ್ತಿರುವ ರೀತಿಯನ್ನು ತಿಳಿಸಿದರು. 'ನೀವೀಗ ಬೇಸಿಕ್ ಸ್ಕೂಲುಗಳನ್ನು ಎಲ್ಲೆಲ್ಲಿ ತೆಗೆದಿದ್ದೀರೋ ಅವೆಲ್ಲಾ ವಿಫಲವಾಗಿವೆಯೆಂದು ಹೇಳಿದರು'. ನಿಮ್ಮ ಉದ್ದೇಶವೇನೋ ಒಳ್ಳೆಯದಿರಬಹುದು. ಮಹಾತ್ಮಾ ಗಾಂಧೀಜಿಯವರು ರಚನಾತ್ಮಕ ಕಾರ್ಯಕ್ರಮವೇನು, ದೇಶಕ್ಕೆ ಎಂಥ ವಿದ್ಯಾಭ್ಯಾಸ ಕೊಡಬೇಕು ಎಂದು ಏನು ಹೇಳುತ್ತಿದ್ದರೋ ಅಂಥ ವಿದ್ಯಾಭ್ಯಾಸವನ್ನು ಕೊಡುವಾಗ ಅದನ್ನು ಯಾವ ರೂಪದಲ್ಲಿ ಕೊಡಬೇಕು, ಯಾವ ರೀತಿ ಕೊಡಬೇಕು ಎಂಬುದನ್ನು ಮುಖ್ಯವಾಗಿ ಯೋಚನೆ ಮಾಡಬೇಕು. ಮಕ್ಕಳ ಬುದ್ಧಿಗೆ ಅನುಗುಣವಾಗಿರತಕ್ಕ ರೀತಿಯಲ್ಲಿ ವಿದ್ಯಾಭ್ಯಾಸ ಕೊಡಬೇಕೆಂಬುದನ್ನು ಬಿಟ್ಟು ಸುಮ್ಮನೆ ನೈಯ್ಗೆ ಕಸಬು, ಕೋಳಿ ಸಾಕುವುದು, ಬಟ್ಟೆ ಒಗೆಯುವುದು ಎಂದರೆ ಇವೆಲ್ಲಾ ಮಕ್ಕಳಿಂದಾಗುವುದಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವೆಂದು ಮಕ್ಕಳಿಗೆ ಕೈಕಸಬಿನ ವಿಷಯದಲ್ಲಿ ತಿಳಿವಳಿಕೆ ಹುಟ್ಟಿಸತಕ್ಕ ಮಾರ್ಗವೇ ಹೊರತು ವಾಸ್ತವವಾಗಿ

(ಶ್ರೀ ಟಿ. ಎಕ್. ಮೂಡಲಗಿರಿಗೌಡ.)

ಕೆಲಸಮಾಡತಕ್ಕ ಕಾಲವಲ್ಲ. ಬಟ್ಟೆ ಒಗೆಯುವುದನ್ನು ಹೇಳಿಕೊಟ್ಟರೆ, ಆ ಕಸಬನ್ನು ಮಾಡಿ ನಾಲ್ಕಾಣೆ ಸಂಪಾದನೆಮಾಡಿಕೊಡುತ್ತಾನೆ, ಅಥವಾ ಕ್ಷೌರಮಾಡುವುದನ್ನು ಕಲಿಸಿದರೆ ಕ್ಷೌರಮಾಡಿ ನಾಲ್ಕಾಣೆ ಸಂಪಾದಿಸಿಕೊಡುತ್ತಾನೆ ಎಂದು ಭಾವಿಸುವುದು ತಪ್ಪು. ಮಕ್ಕಳಿಗೆ ಕಸುಬುಗಳಲ್ಲಿ ತಿಳಿವಳಿಕೆ ಕೊಡವುದು ಅವರಲ್ಲಿ ಕೆಲಸ ಮಾಡಬೇಕು ಎಂಬ ಭಾವನೆಯನ್ನು ಹುಟ್ಟಿಸಬೇಕೆಂಬುದೇ ಉದ್ದೇಶ. ವ್ಯವಸಾಯ ಪಾಠವನ್ನು ಕಲಿಸಿದರೆ ಆತ ಬೆಳಗ್ಗೆ ಎದ್ದು ವ್ಯವಸಾಯಕ್ಕೆ ಹೊರಡಬೇಕೆಂದಲ್ಲ; ಅದಕ್ಕೆ ಬದಲು ಆತ ಪುಂಡನಾಗಿ ಓಡಾಡಿಕೊಂಡಿರದೆ ತನ್ನ ಸಂಸಾರಕ್ಕೆ ಅಥವಾ ತಂದೆ ತಾಯಿಗಳಿಗೆ ಸಹಕಾರಿಯಾಗಿರತಕ್ಕಂಥ ತಿಳಿವಳಿಕೆಯನ್ನು ಅವನಲ್ಲಿ ಬೆಳಸಬೇಕೆಂಬುದು. ಅದು ಬಿಟ್ಟು ಆತ ಆರು ವರ್ಷದ ವೃತ್ತಿಶಿಕ್ಷಣ ಪಡೆದಿದ್ದಾನೆ, ಬಟ್ಟೆ ಹೊಲಿಯುವುದೋ, ನೇಯ್ಗೆಯೋ ಏನಾದರೂ ಮಾಡುತ್ತಾನೆ ಎಂದು ಭಾವಿಸುವುದು ಹುಚ್ಚುತನ ಎಂದು ಹೇಳಬೇಕು ಅಷ್ಟೆ.

ಆಮೇಲೆ ಪ್ರಿ-ಪ್ರೈಮರಿ ಎಜ್ಯುಕೇಷನ್ ವಿಚಾರ. ಈ ವಿಷಯವನ್ನು ಸರ್ಕಾರದವರು ಸ್ವಲ್ಪ ಸಹಾನುಭೂತಿಯಿಂದ ನೋಡಬೇಕೆಂದು ಹೇಳುತ್ತೇನೆ. ಪ್ರಿ-ಪ್ರೈಮರಿ ವಿದ್ಯಾಭ್ಯಾಸವೆಂಬುದು ಈಗ ಕೇವಲವಾಗಿ ಪಟ್ಟಣಗಳಲ್ಲಿ, ಯಾವ ಮುನಿಸಿಪಾಲಿಟಿಗಳಲ್ಲಿ ಹಣಕಾಸಿನ ಭದ್ರತೆ ಇರುತ್ತದೆ ಅಲ್ಲಿ ರೂಢಿಗೆ ಬರಬಹುದೇ ವಿನಾ ಹಳ್ಳಿಗಳಲ್ಲಿ ಸಾಧ್ಯವಿಲ್ಲ. ಮೊದಲು ಪ್ರೈಮರಿ ಶಾಲೆಗೆ ಸೇರಿಸತಕ್ಕ ವಯಸ್ಸು 6 ವರ್ಷವೆಂದಾದರೆ, 6 ವರ್ಷದವರೆಗೂ ಮಕ್ಕಳನ್ನು ತಡೆದು ನಿಲ್ಲಿಸುವುದೇ ಒಂದು ಕಷ್ಟವಾಗಿರುತ್ತದೆ. ಆದ್ದರಿಂದ ಹಳ್ಳಿಗಳಲ್ಲಿ ಮುಖ್ಯವಾಗಿ ನೀವೇ ಪ್ರಯತ್ನಮಾಡಿ ನರ್ಸರಿ ಸ್ಕೂಲುಗಳನ್ನೇರ್ಪಡಿಸಬೇಕು. ಇದಕ್ಕಾಗಿ ಬೇಕಾದರೆ ಅಲ್ಲಿರತಕ್ಕ ಸಣ್ಣ ಪಂಚಾಯಿತಿಗಳ ಸಹಕಾರವನ್ನು ಪಡೆದು ಪ್ರಯತ್ನ ಮಾಡಬೇಕೇ ಹೊರತು, ಅದಿಲ್ಲದೆ, ನಾವೇನೋ, ಸಹಾಯ ಅಲ್ಪಸ್ವಲ್ಪ ಕೊಡುತ್ತೇವೆ, ನಿಮ್ಮಲ್ಲಿಯೇ ದೊಡ್ಡ ಮನುಷ್ಯರು ಮುಂದೆ ಒಂದು ಇಂಥ ನರ್ಸರಿ ಸ್ಕೂಲುಗಳನ್ನು ಏರ್ಪಡಿಸ ಬೇಕೆಂದರೆ ಸಾಧ್ಯವಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ನೀವೇ ಈ ಕಾರ್ಯವನ್ನು ಕೈಕೊಂಡು ಮಕ್ಕಳಿಗೆ ಸ್ಕೂಲಿನಲ್ಲಿ ಹೇಗೆ ವರ್ತಿಸಬೇಕು, ಹೇಗೆ ಒಬ್ಬರಿಗೊಬ್ಬರು ಮಿಳಿತವಾಗಬೇಕು, ಹೇಗೆ ಕುಳಿತುಕೊಳ್ಳಬೇಕು ಮುಂತಾದುವುಗಳನ್ನೆಲ್ಲಾ ಕಲಿಸಿಕೊಡುವುದರ ಕಡೆಗೆ ಹೆಚ್ಚು ನಿಗಾಕೊಡಬೇಕೆಂದು ಹೇಳುತ್ತೇನೆ.

ಅಲ್ಲದೆ ಪಾಠಶಾಲೆಗಳ ಕಟ್ಟಡಗಳ ವಿಚಾರದಲ್ಲಿ ಶ್ರೀ ವೆಂಕಟಪ್ಪನವರು ಮಾತನಾಡುತ್ತಾ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಮೊದಲು ನಮ್ಮ ಜನರೇ ಮುಂದೆ ಬಂದು ಸ್ಕೂಲುಕಟ್ಟಡಗಳನ್ನು ಕಟ್ಟಿಸಿಕೊಡುತ್ತಿದ್ದರು; ಹಣವನ್ನು ಶೇಖರಿಸಿ, ಸರ್ಕಾರದಲ್ಲಿ ಬಂದು ನಮಗೆ ಸ್ಕೂಲು ಕೊಡಿ ಎಂದು ಹೇಳುತ್ತಿದ್ದರು. ಈಚೆಗೆ ಸರ್ಕಾರದವರು ತಾವೇ ಕೊಡುತ್ತೇವೆಂದು ಹೇಳಿ ಜನರಿಗೆ ಒಂದು ವಿಧವಾದ ಆಸೆ ತೋರಿಸಿದ್ದಾರೆ. ಅದರಿಂದ ಈ ಹೊತ್ತು ಹಿಂದೆ ಬರುತ್ತಿದ್ದಂತೆ ಜನ ಬರುತ್ತಿಲ್ಲ. ಆದರೂ ಹಿಂದೆ ಸರ್ಕಾರದವರೂ ಕೊಡುವುದು, ಸಾರ್ವಜನಿಕರೂ ಕೊಡುವುದು ಹೀಗೊಂದು ಯೋಜನೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದರೋ ಅದನ್ನೇ ಮುಂದುವರಿಸಿಕೊಂಡು ಬರಬೇಕೇ ಹೊರತು ಸಾರ್ವಜನಿಕರೇ ಎಲ್ಲವನ್ನೂ ಮಾಡಬೇಕೆಂದು ಹೇಳುವುದು ಸರಿಯಲ್ಲ.

ಸೆಕೆಂಡರಿ ವಿದ್ಯಾಭ್ಯಾಸವೇನಾಗಿದೆಯೆಂದರೆ, ಸರ್ಕಾರದವರೇ ಹಣವನ್ನು ಖರ್ಚುಮಾಡುವ ಪ್ರಸಂಗ ಬಂದಿದೆ. ಇಂಟರ್‌ಮೀಡಿಯೆಟ್ ವಿದ್ಯಾಭ್ಯಾಸ ಹೇಗಿದೆಯೆಂದರೆ, ಮುಂದೆ ಎಂಥ ಪ್ರಜೆಯಾಗಬೇಕೆಂದು ಗೊತ್ತುಮಾಡುವ ಒಂದು selection course ಆಗಿದೆ. ಇದನ್ನು ಈ ಸುಧಾರಣೆಯ ಪ್ರಕಾರ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸೇರಿಸಲಾಗಿದೆ. ವಿದ್ಯಾಭ್ಯಾಸ ಕ್ರಮವನ್ನು ಮೂರು ಪಂಗಡಗಳಾಗಿ ಮಾಡಿ ಪ್ರೈಮರಿ, ಸೆಕೆಂಡರಿ, ಯೂನಿವರ್ಸಿಟಿ ಎಂದು ಮಾಡಿರುವಾಗ, ಯೂನಿವರ್ಸಿಟಿಯಲ್ಲಿರತಕ್ಕ ಈ ಇಂಟರ್‌ಮೀಡಿಯೆಟ್ ವಿದ್ಯಾಭ್ಯಾಸವನ್ನು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸೇರಿಸಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ ಅಧೀನಕ್ಕೆ ಕೊಡುವುದು ಸರಿಯಲ್ಲವೆಂದು ಅನೇಕ ವಿದ್ವಾಂಸರು ವಾದಿಸುತ್ತಿದ್ದಾರೆ. ಇದು ವಿಶ್ವವಿದ್ಯಾನಿಲಯದಲ್ಲೇ ಇರಬೇಕೆಂದು ಹೇಳುತ್ತಿದ್ದಾರೆ.

ಸೆಕೆಂಡರಿ ವಿದ್ಯಾಭ್ಯಾಸದಲ್ಲಿ—ಆರು ವರ್ಷವಾದ ನಂತರ ಏಳನೆಯ ವರ್ಷದಿಂದ ವೃತ್ತಿ ಶಿಕ್ಷಣ ಕೊಡಬೇಕೆಂಬ ಸಲಹೆಯಿದೆ. ಎಲ್ಲೆಲ್ಲಿ ಯಾವ ಯಾವ ಮಕ್ಕಳಿಗೆ ಏನೇನು ಶಿಕ್ಷಣ ಕೊಡಬೇಕೋ ಅದಕ್ಕೇ ಸರಿಯಾದ ಏರ್ಪಾಡು ಮಾಡಬೇಕಾಗುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲ ಪ್ರಾರಂಭಮಾಡಿದರೆ ಅದನ್ನು ಮುಂದುವರಿಸಲು ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗ ಅಕ್ಯುಪೇಷನಲ್ ಇನ್ಸ್ಟಿಟ್ಯೂಟುಗಳು, ಟೆಕ್ನಿಕಲ್ ಇನ್ಸ್ಟಿಟ್ಯೂಟುಗಳೂ ಇವೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಟೆಕ್ನಿಕಲ್ ಶಿಕ್ಷಣಕ್ಕೆ ಹೆಚ್ಚು ಸಲಕರಣೆಗಳನ್ನೊದಗಿಸಿ ವಿದ್ಯಾಭ್ಯಾಸ ಕೊಡಬೇಕಾದ ಸಂದರ್ಭ ಬರುತ್ತದೆ. ಆಗ ವಿದ್ಯಾರ್ಥಿಗಳು ತಾವು ಯಾವ ವೃತ್ತಿಯನ್ನು ಹಿಡಿಯಬೇಕು ಎಂಬುದನ್ನು ಚುನಾಯಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಈ ಸಂಸ್ಥೆಗಳನ್ನು ಮಾರ್ಪಾಡು ಮಾಡುವುದಕ್ಕೆ ಸರ್ಕಾರಕ್ಕೆ ಸಲಕರಣೆ ಏನಿದೆ ಹಣವನ್ನೊದಗಿಸಲು ಮಾರ್ಗವೇನಿದೆ, ಎಂಬುದನ್ನು ಯೋಚಿಸಿ ತಕ್ಕ ಏರ್ಪಾಡು ಮಾಡಬೇಕಾಗುತ್ತದೆ. ಹಾಗಿಲ್ಲದಿದ್ದರೆ, ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಸಫಲವಾಗುವುದಿಲ್ಲ. ಆದುದರಿಂದ ಇದಕ್ಕೆಲ್ಲಾ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳಿ, ಇಷ್ಟು ಸಲಹೆಯನ್ನು ತಮ್ಮ ಮುಂದಿಟ್ಟಿದ್ದೇನೆ.

Mr. SPEAKER.—No speech shall exceed fifteen minutes.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತಜಾತಿಗಳು).—ಸ್ವಾಮಿ, ಪೂಜ್ಯ ಅಧ್ಯಕ್ಷರೆ, ಮೈಸೂರು ಸಂಸ್ಥಾನದಲ್ಲಿ ಪ್ರಜಾ ಸರ್ಕಾರದವರು ಬಹಳ ಶ್ರಮಪಟ್ಟು ಹತ್ತಾರು ಮೇಧಾವಿಗಳನ್ನು ನಮ್ಮ ಸೇರಿಸಿ, ವಿದ್ಯಾಭ್ಯಾಸ ಕ್ರಮದ ಸುಧಾರಣೆಯ ವಿಚಾರದಲ್ಲಿ ಪರಿಶೀಲನೆಮಾಡಿ ಅವರು ಸೂಚಿಸಿರುವ ಸುಧಾರಣೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಮಾಡಿರುವ ಸಲಹೆಗಳು ಬಹು ಜನರ ಮೆಚ್ಚಿಗೆಯನ್ನು ಪಡೆಯುತ್ತಿವೆ. ಆದರೂ ಕೆಲವ್ ಸೂಕ್ತ ಸಲಹೆಗಳನ್ನು ನಾವು ಕೊಡಬೇಕಾಗಿದೆ. ಈಗ ಮೈಸೂರು ದೇಶದಲ್ಲಿ ಹೆಚ್ಚು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಹಿಂದಿನ ಸರ್ಕಾರದವರು ಅಲ್ಪ ಸ್ವಲ್ಪ ಖರ್ಚು ಮಾಡುತ್ತಿದ್ದರು. ಈಗ ಹೆಚ್ಚು ಖರ್ಚು ಮಾಡುತ್ತಿರುವುದು ಒಳ್ಳೆಯದು. ನಮ್ಮ ದೇಶದಲ್ಲಿ ಹೆಚ್ಚು ಜನರು ವಿದ್ಯಾವಂತರಾಗುವುದು ನ್ಯಾಯ

ಮತ್ತು ಧರ್ಮ. ಇಂಗ್ಲೆಂಡ್, ರಷ್ಯಾ, ಅಮೇರಿಕ, ಹಾಲೆಂಡ್, ಪೋಲೆಂಡ್ ಮುಂತಾದ ದೇಶಗಳಲ್ಲಿ ಶೇಕಡ 99ರಷ್ಟು ವಿದ್ಯಾವಂತರಿದ್ದಾರೆ. ನಾವು ಇಷ್ಟು ಹಿಂದುಳಿದಿರುವುದಕ್ಕೆ ಕಾರಣವೇನೆಂದರೆ, ಮೊದಲಿನಿಂದ ವಿದ್ಯಾಭ್ಯಾಸಕ್ಕೆ ಅಷ್ಟು ಗಮನಕೊಡಲಿಲ್ಲ. ಈ ನಮ್ಮ ಮೈಸೂರು ಸರ್ಕಾರದವರು ಮಾಡಿರುವ ಪ್ರಯತ್ನ ಅಮೋಘವಾದುದು. ಸುಧಾರಣಾ ಸಮಿತಿಯವರು ಮಾಡಿರುವ ಕೆಲವು ಸಲಹೆಗಳ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಸಭೆಯ ಮುಂದಿಡುತ್ತೇನೆ.

ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಹೆಚ್ಚಬೇಕಾದರೆ ಹಳ್ಳಿ ಹಳ್ಳಿಯಲ್ಲಿಯೂ ಸ್ಕೂಲಿರಬೇಕು. ಹಳ್ಳಿಗಳ ಮಕ್ಕಳಿಗೆ ಜ್ಞಾನಾರ್ಜನೆಯಾಗಬೇಕು. ಈಗ ನಾನು ನೋಡಿರುವ ಹಾಗೆ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿಯೂ ಸ್ವಲ್ಪ ಬದಲಾವಣೆಯಾಗಬೇಕು. ಉಪಾಧ್ಯಾಯರುಗಳ ಸಂಬಳವನ್ನೂ ಸ್ವಲ್ಪ ಹೆಚ್ಚಿಸಬೇಕು. ಇವರು ನಮ್ಮ ಮಕ್ಕಳನ್ನು ತಯಾರು ಮಾಡುವವರು. ಆದರೆ ಒಂದು ವಿಷಯವನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಎಲ್. ಎಸ್. ಓದಿರುವವರು ಪ್ರೈಮರಿ ಸ್ಕೂಲು ಉಪಾಧ್ಯಾಯರು, ಅವರಲ್ಲಿ ಅನೇಕರಿಗೆ ಸರಿಯಾಗಿ ಓದುವುದಕ್ಕೂ ಬರೆಯುವುದಕ್ಕೂ ಬರುವುದಿಲ್ಲ. ನಾನು ಸುಮ್ಮನೆ ಹೀಯಾಳಿಸುತ್ತಿಲ್ಲ. ಗುಡಿಸು, ಸುಳಿ ಮುಂತಾದವು ಕೂಡ ಗೊತ್ತಿಲ್ಲ. ಇಂಥವರು ಹುಡುಗರಿಗೇನು ಹೇಳಿಕೊಟ್ಟಾರು ? ಇದನ್ನು ಉತ್ತಮಗೊಳಿಸಬೇಕು. ಉಪಾಧ್ಯಾಯರಾಗಿ ನೇಮಿಸಬೇಕಾದರೆ, ಕೊನೆಯ ಪಕ್ಷ 23 ವರ್ಷವಾದರೂ ವಯಸ್ಸಾಗಿರಬೇಕು. ಅವರ ಬುದ್ಧಿ ಸ್ವಲ್ಪ ಪಕ್ವವಾಗಿರಬೇಕು. ಅವರಿಗೆ ಸರಿಯಾದ ಶಿಕ್ಷಣ ಕೊಡಬೇಕ . ಇಂಥವರನ್ನು ಪ್ರೈಮರಿ ಸ್ಕೂಲುಗಳಿಗೆ ಹಾಕಬೇಕು. ಶಾಲೆಗಳಲ್ಲಿ ಸರಿಯಾದ ಶಿಸ್ತಿರಬೇಕು. ಸೋಮಾರಿಗಳನ್ನು ಹಾಕಬಾರದು. ಸರಿಯಾಗಿ ಕೆಲಸಮಾಡುವವರನ್ನೂ ಧೈರ್ಯಶಾಲಿಗಳನ್ನೂ, ಮೇಧಾವಿಗಳನ್ನೂ ಹಾಕಿದರೆ, ಅಂಥವರಿಂದ ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯುತ್ತದೆ. ನಮ್ಮ ಪ್ರಾಥಮಿಕ ವಿದ್ಯಾಭ್ಯಾಸದಲ್ಲೇ ಮಕ್ಕಳಿಗೆ ಸಂಸ್ಕೃತದ ಅಭ್ಯಾಸವಾಗಬೇಕು. ನಮ್ಮ ಮಾತೃಭಾಷೆ, ಸಂಸ್ಕೃತ ಮತ್ತು ಹಿಂದಿ ಇವುಗಳೆಲ್ಲವನ್ನೂ ನಮ್ಮ ಮಕ್ಕಳು ಕಲಿಯಬೇಕು. ಸಕಲ ಶಾಸ್ತ್ರಗಳೂ ಸಂಸ್ಕೃತದಲ್ಲಿವೆ. ಅದರ ಪ್ರಾಮುಖ್ಯತೆಯನ್ನು ಈ ರೀತಿ ಹೇಳಿದ್ದಾರೆ:

> ಸಕಲ ಶಾಸ್ತ್ರವನು ತುಂಬಿದ ಸಂಸ್ಕೃತ
> ನಿಖಿಲ ವಿವೇಕವ ಬೋಧಿಸುತಿರಲು
> ಸುಖವೆಂದು ಇಂಗ್ಲೀಷ್ ವಿದ್ಯೆಯು ಕಲಿವರು
> ವಿಕಳಮತಿಗಳೆಂದು ಬಂದಿತು ದೂರು.
> ನಮ್ಮ ದೇಶವಿದೆ, ನಮ್ಮ ಭಾಷೆಯಿದೆ, ನಮ್ಮ
> ವಿದ್ಯೆ ಇನ್ನಾರಿಗಿದೆ ?

ಇಂಥ ಒಳ್ಳೆಯ ಭಾಷೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ವಿದ್ಯಾವಂತನಾಗಬೇಕಾದರೆ ಬರೀ ಕಾಲೇಜಿನಲ್ಲಿ ಓದಿದರೆ ಸಾಲದು. ಅಂಥವರು ಹಳ್ಳಿಗಳಿಗೆ ಬಂದರೆ ಏನೂ ಪ್ರಯೋಜನವಿಲ್ಲ. ಈ ಹೊತ್ತಿನ ದಿನ ಕಾಲೇಜುಗಳಲ್ಲಿ ಓದಿದವರು ಹಳ್ಳಿಗಳಿಗೆ ಹೋಗುವುದಿಲ್ಲ. ಅಲ್ಲಿ ಹೋಗಿ ಇತರ ಜನರನ್ನೂ ವಿದ್ಯಾವಂತರನ್ನಾಗಿ ಮಾಡಿ ತಮ್ಮ ಮಟ್ಟಕ್ಕೇ ಅವರನ್ನೂ ಏರಿಸಲು ಪ್ರಯತ್ನಮಾಡುತ್ತಿಲ್ಲ. ಈ ರೀತಿಯ ವಿದ್ಯಾಭ್ಯಾಸ ಕೊಡುತ್ತಿರುವುದರಿಂದ ನಮ್ಮ ದೇಶ ಹೀಗಾಗಿದೆ. 'ವಿದ್ಯಾವಿಹೀನಃಪಶುಃ' ಎಂದು ಹೇಳುತ್ತಾರೆ. ನಮ್ಮ ದೇಶದಲ್ಲನೇಕರಿಗೆ ಸರಿಯಾದ ಬಾಳು ಬಾಳುವುದಕ್ಕೂ ಬೆಳೆಯುವುದಕ್ಕೂ, ದುಡಿಯುವುದಕ್ಕೂ, ಖರ್ಚು ಮಾಡುವುದಕ್ಕೂ ಬರುವುದಿಲ್ಲ. ತಾನು ದುಡಿದುದನ್ನು ಯಾವ ರೀತಿ ಖರ್ಚುಮಾಡಬೇಕೆಂಬುದನ್ನು ತಿಳಿದಿದ್ದರೆ ನಮ್ಮ ದೇಶ ಎಷ್ಟೋ ಮುಂದೆ ಬರುತ್ತಿತ್ತು. ನಮ್ಮ ದೇಶದಲ್ಲಿ ಆರ್ಥಿಕ, ಸಾಮಾಜಿಕ, ನೈತಿಕ ಪ್ರಗತಿ ಸರಿಯಾಗಬೇಕಾದರೆ ಇದು ಬಹಳ ಮುಖ್ಯ. ಈ ವಿಷಯದಲ್ಲಿ ತಂದೆ ತಾಯಿಗಳು ಹೆಚ್ಚು ಪ್ರಯತ್ನ ಮಾಡುತ್ತಿಲ್ಲ. ಐದು ವರ್ಷದಿಂದ ಹನ್ನೆರಡು ವರ್ಷದವರೆಗೆ ಮಕ್ಕಳನ್ನು ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂಬ ನಿಯಮವನ್ನು ಕೆಲವು ಕಡೆ ಜಾರಿಗೆ ತಂದರು. ಈ ಕಾನೂನು ಸರಿಯಾಗಿ ಜಾರಿಯಾಗುತ್ತಿಲ್ಲ. ಇದರಿಂದ ನಮ್ಮ ಧ್ಯೇಯ ಸಾಧನೆಯಾಗಿಲ್ಲ. ಹಿಂದೆ ಡಾ॥ ಸಿ. ಆರ್. ರೆಡ್ಡಿಯವರು 1918ರಲ್ಲಿ ನಮ್ಮ ಮೈಸೂರು ದೇಶಕ್ಕೆ ಬಂದಾಗ, 'ಇಲ್ಲಿಯ ಜನ ವಿದ್ಯೆಯಲ್ಲಿ ಹಿಂದುಳಿದಿದ್ದಾರೆ. ಒಟ್ಟು ಜನ ಸಂಖ್ಯೆಯಲ್ಲಿ ಐದನೆಯ ಒಂದು ಭಾಗದಷ್ಟು ಹರಿಜನರಿದ್ದಾರೆ, ಇಷ್ಟು ದೊಡ್ಡ ಜನಾಂಗವನ್ನು ತುಳಿದು ಪರಾಧೀನತೆಯಲ್ಲಿ ಹಾಕಿದ್ದರೆ, ಇವರು ದೇಶದ ಸತ್ಪ್ರಜೆಗಳು, ಇವರನ್ನು ಮುಂದ ತಂದು ಕಾಪಾಡುವುದು ಸರ್ಕಾರದ ಧರ್ಮ' ಎಂದು ಹೇಳಿದರು. ಎಲ್ಲಾ ಸ್ಕೂಲುಗಳಿಗೂ ನಮ್ಮ ಹರಿಜನರನ್ನು ಬಿಡಬೇಕೆಂದು ಮಾಡಿದ್ದರಿಂದ ಈ ದಿವಸ ನಾನು ಇಲ್ಲಿ ಬಂದು ಮಾತನಾಡುತ್ತಿದ್ದೇನೆ ಇಲ್ಲದಿದ್ದರೆ ಇದು ಹೇಗೆ ಸಾಧ್ಯವಾಗುತ್ತಿತ್ತು ?

1-30 P.M.

ಇದು ಎಲ್ಲಾ ಕಡೆಗಳಲ್ಲೂ ಏರ್ಪಾಡಾಗಬೇಕು. ಆದರೆ ಈಗ ಎಲ್ಲೋ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಈ ಬೇಸಿಕ್ ಎಜ್ಯುಕೇಷನ್ನನ್ನು ಕೊಡುತ್ತಿದ್ದೀರಿ. ಹೀಗೆ ಎಲ್ಲೋ ಅಲ್ಲಲ್ಲಿ ಕೇವಲ 8,10 ಸ್ಕೂಲುಗಳಲ್ಲಿ ಹಾಗೆ ಹುಡುಗರಿಗೆ ವೃತ್ತಿಶಿಕ್ಷಣ ಹೇಳಿಕೊಟ್ಟರೆ ಅದರಿಂದ ದೇಶಕ್ಕೆಲ್ಲಾ ಉಪಯೋಗವಾದಂತಾಗುವುದಿಲ್ಲ. ಚರ್ಮದ ಸಾಮಾನುಗಳನ್ನು ಮಾಡುವುದು, ಬಟ್ಟೆ ನೇಯುವುದು, ಬಟ್ಟೆ ಹೊಲಿಯುವುದು, ಚಾಪೆ ಹೆಣೆಯುವುದು, ನೂಲು ತೆಗೆಯುವುದು, ಬಡಗಿ ಕೆಲಸ ಇತ್ಯಾದಿಗಳನ್ನು ಪ್ರತಿಯೊಂದು ಶಾಲೆಯಲ್ಲೂ ಮತ್ತು ಪ್ರತಿಯೊಂದು ಹಂತದಲ್ಲೂ ಹುಡುಗರಿಗೆ ಕಲಿಸಬೇಕೆಂದು ಸರ್ಕಾರಕ್ಕೆ ಆ ಸಮಿತಿಯವರು ಶಿಫಾರ್ಸು ಮಾಡಿದ್ದಾರೆ. ಹೀಗೆ ಮಾಡುವುದು ಒಳ್ಳೆಯದು.

ಇನ್ನೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಪಾಠಶಾಲೆಗಳಿಗೆ ಕಟ್ಟಡಗಳೇ ಇರುವುದಿಲ್ಲ. ಅಂಥ ಕಡೆಗಳಲ್ಲೆಲ್ಲಾ ಸರ್ಕಾರದವರು ಬೇಗ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ತಾವು ಕಟ್ಟಿಸತಕ್ಕ ಪಾಠಶಾಲೆಗಳ ಸುತ್ತಲೂ ಹುಡುಗರಿಗೆ ತಕ್ಕಷ್ಟು ವ್ಯಾಯಾಮಕ್ಕೆ ಬೇಕಾದ ಆಟದ ಮೈದಾನವಿರಬೇಕು, ಮತ್ತು ಅಲ್ಲಿ ಮಕ್ಕಳಿಗೆ ಆಟವಾಡಲು ಇಳಿಜಾರುಬಂಡೆ ಮುಂತಾದ ಏರ್ಪಾಡುಗಳನ್ನೆಲ್ಲಾ ಮಾಡಿಸಬೇಕೆಂದೂ, ಹೂವಿನ ತೋಟ, ತರಕಾರಿ ಇತ್ಯಾದಿ ತೋಟಗಳನ್ನು ಮಾಡಿಸಲು ಅವಕಾಶವಿರುವಂತೆ ಮಾಡಬೇಕೆಂದೂ ಕೇಳಿಕೊಳ್ಳುತ್ತೇನೆ. ಅಷ್ಟು ಹೊರತಾಗಿ ಆ ಚಿಕ್ಕವಯಸ್ಸಿನ ಮಕ್ಕಳಿಗೆ ಕೋಳಿ ಸಾಕುವುದು ಮತ್ತು ಕುರಿ ಸಾಕುವುದು ಇತ್ಯಾದಿಗಳಲ್ಲಿ ಶಿಕ್ಷಣ ಕೊಡತಕ್ಕದ್ದು ಅಗತ್ಯವಾಗಿಲ್ಲವೆಂದು ಹೇಳುತ್ತೇನೆ.

(ಶ್ರೀ ಸಿ. ಟಿ. ಹನುಮಂತಯ್ಯ.)

ಈಗ ತಾವು ವಯಸ್ಕರ ಶಿಕ್ಷಣ ಸಮಿತಿಯೆಂಬುದೊಂದನ್ನು ಮಾಡಿ, ಅದಕ್ಕೇ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿದ್ದೀರಿ. ಆದರೆ ಈಗ ಇದರಿಂದ ಅಂಥ ಉಪಯೋಗವೇನೂ ಆಗುತ್ತಿಲ್ಲ. ಆದಕಾರಣ ಈಗ ಈ ಬಾಬನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಅವರಿಗೆ ಎಲ್ಲ ಕಸಬುಗಳ, ಅನುಭವವೂ ಇರುತ್ತದೆ. ಆದರೆ ಅವರಿಗೆ ಮುಖ್ಯವಾಗಿ ಬೇಕಾದದ್ದು ವಿದ್ಯೆ, ಓದುವುದು ಮತ್ತು ಬರೆಯುವುದು. ಆದರೆ ಈಗ ಇವರಿಗೆ ಹಂಚುತ್ತಿರುವ ಪುಸ್ತಕ, ಎಣ್ಣೆ ಇತ್ಯಾದಿಗಳೆಲ್ಲಾ ಲುಕ್ಸಾನಾದಂತೆಯೇ ಸರಿ, ಎಲ್ಲೋ ಶಾಸ್ತ್ರಕ್ಕೆ ತಿಂಗಳಲ್ಲಿ ಒಂದೆರಡು ದಿನಗಳು ಮಾತ್ರ ಈ ಶಾಲೆ ನಡೆಯಬಹುದು, ಆದಕಾರಣ ಇದಕ್ಕೇ ಪ್ರತ್ಯೇಕ ಉಪಾಧ್ಯಾಯರುಗಳನ್ನಿಟ್ಟು ಪಾಠ ಹೇಳಿಸುವುದರಿಂದ ಸರ್ಕಾರಕ್ಕೆ ದುಡ್ಡು ವಿಶೇಷವಾಗಿ ನಷ್ಟವಾಗುತ್ತದೆ. ಈ ಕಾರಣದಿಂದ ತಾವು ಈಗ ಹಳ್ಳಿಗಳಲ್ಲಿರತಕ್ಕ ಸರ್ಕಾರಿ ಶಾಲೆಗಳ ಉಪಾಧ್ಯಾಯರಿಗೆ ಹೇಗೂ ಕೊಡುತ್ತಿರುವ ಸಂಬಳ—30 ರೂಪಾಯಿ—ಅವರಿಗೆ ಸಾಲದೆಯಿರುವುದರಿಂದ ಅವರಿಗೆ ಮತ್ತೊಂದಿಷ್ಟು ಸಂಬಳವನ್ನು ಹೆಚ್ಚುಮಾಡಿ, ಈ ವಯಸ್ಕರ ವಿದ್ಯಾಭ್ಯಾಸದ ಶಾಲೆಗಳನ್ನೂ ಅವರೇ ನಡೆಸುವಂತೆ ಏರ್ಪಾಡು ಮಾಡಿದರೆ ಅದರಿಂದ ಉತ್ತಮ ಫಲ ದೊರೆಯುತ್ತದೆಂದು ನಾನು ಸರ್ಕಾರಕ್ಕೊಂದು ಸಲಹೆ ಮಾಡುತ್ತೇನೆ. ಹೀಗೆ ಮಾದಡಿರೆ ಹಳ್ಳಿಯಲ್ಲಿರತಕ್ಕ ಜನರೂ ಸಹ ಅಭಿವೃದ್ಧಿಗೆ ಬರುತ್ತಾರೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಹುಡುಗರಿಗೆ ರಾಮಾಯಣ, ಮಹಾಭಾರತ, ವಚನ ಭಾರತ, ಭಗವದ್ಗೀತೆ, ಶಿವಭಕ್ತಿಸಾರ ಮತ್ತು ಹರಿಭಕ್ತಿಸಾರ ಇತ್ಯಾದಿಗಳನ್ನಿಟ್ಟು ಪಾಠ ಹೇಳುವುದಾದರೆ ಹುಡುಗರಿಗೆ ನಾಲಿಗೆ ಸ್ಫುಟವಾಗಿ, ಅಕ್ಷರಗಳು ಸರಿಯಾಗಿ ಹೊರಡಲು ಅವಕಾಶವಾಗುತ್ತದೆ.

ಒಬ್ಬ ಸದಸ್ಯರು.—ತಾವೇನು ಇಲ್ಲೇ ಆ ಸಂಸ್ಕೃತಿ ಪ್ರಸಾರಕ್ಕೆ ಪ್ರಾರಂಭಿಸಿದಂತಿದೆಯಲ್ಲಾ ?

ಶ್ರೀ ಸಿ. ಟಿ. ಹನುಮಂತಯ್ಯ.—ಆ ಚಿಕ್ಕಮಕ್ಕಳಿಗೆ ಒಂದು ಸರಿಯಾದ ಅಸ್ತಿಭಾರವನ್ನು ಹಾಕಿ, ಅವರಲ್ಲಿ ದೈವಭಕ್ತಿ ಉದಯವಾಗುವಂತೆ ಮಾಡಲು ಮೇಧಾವಿಗಳಾದಂಥ ಮತ್ತು ದಕ್ಷರಾದಂಥ ಉಪಾಧ್ಯಾಯರುಗಳೂ ಬೇಕು ಮತ್ತು ಅವರಿಗೆ ಪಾಠ ಹೇಳಲು ಈಗಿನಂಥ ಯಾವ ಯಾವುದೋ ಪಠ್ಯ ಪುಸ್ತಕಗಳನ್ನಿಡುವುದರ ಬದಲು ಅವರಿಗೆ ಈ ಶಿವಭಕ್ತಿಸಾರ, ಹರಿಭಕ್ತಿಸಾರ, ಭಗವದ್ಗೀತೆ ಮತ್ತು ರಾಮಾಯಣ ಮುಂತಾದುವುಗಳನ್ನು ಪಠ್ಯ ಪುಸ್ತಕವಾಗಿಡುವುದು ಒಳ್ಳೆಯದು. ಈಗ ಪಾಠಶಾಲೆಗಳಲ್ಲಿಟ್ಟಿರತಕ್ಕ ಅನೇಕ ಪುಸ್ತಕಗಳನ್ನು ಬಾಲಕರಿಗೆ ಓದುವುದಕ್ಕೇ ಬರುವುದಿಲ್ಲ. ಆ ಪುಸ್ತಕಗಳಲ್ಲಿ ಕೆಲ ಕೆಲವು ದೊಡ್ಡ ದೊಡ್ಡ ಸಂಸ್ಕೃತ ಪದಗಳನ್ನು ಹಾಕಿರುತ್ತಾರೆ. ಇವರಿಗೆ ಇಂಥ ಕಷ್ಟದ ಪದಗಳನ್ನು ಹಾಕಬಾರದು. ಸುಲಭವಾಗಿ ಅರ್ಥವಾಗುವಂಥ ಅಮರಕೋಶ ಇತ್ಯಾದಿಗಳನ್ನು ಹೇಳಿಕೊಡುವುದರಿಂದ ಉತ್ತಮವಾಗುತ್ತದೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಅಧ್ಯಕ್ಷರು.—ನಿನ್ನೆಯ ದಿವಸತಾನೆ ತಾವು ತಮ್ಮ ಮೊದಲನೆಯ ಪ್ರಶ್ನೋತ್ತರ ಕಾಲದಲ್ಲಿ ನಿಮ್ನ ತರಗತಿಗಳವರ ಅಭಿವೃದ್ಧಿಗಾಗಿ ಯಾವ ಕಾನ್ಫರೆನ್ಸು ಇತ್ಯಾದಿಗಳನ್ನೂ ನಡೆಸಿಲ್ಲವೆಂದು ಪ್ರಶ್ನೆಮಾಡುತ್ತಿದ್ದಿರಿ.

ಶ್ರೀ ಸಿ. ಟಿ. ಹನುಮಂತಯ್ಯ.—ಹೌದು. ಹರಿಜನರ ಅಭಿವೃದ್ಧಿಗಾಗಿ ಸರ್ಕಾರದವರೇನೂ ಹಾಗೆ ಕಾನ್ಫರೆನ್ಸುಗಳನ್ನು ಮಾಡಲಿಲ್ಲವೆಂದು ತಿಳಿಸಿದ್ದಾರೆ. ದೇಶದಲ್ಲಿ ನಾವು ಎಲ್ಲ ಪಂಗಡಗಳವರಿಗಿಂತಲೂ ಬಹಳ ಹಿಂದುಳಿದವರಾಗಿದ್ದೇವೆಂಬುದನ್ನು ನಾನು ಬಹಳ ನೊಂದ ಮನಸ್ಸಿನಿಂದ ತಿಳಿಸುತ್ತಿದ್ದೇನೆ. ಕೆಲವು ಕಾಲದ ಹಿಂದೆ ನಮ್ಮ ಹರಿಜನರಿಗೋಸ್ಕರವಾಗಿಯೇ ಕೆಲವು ಸ್ಕೂಲುಗಳನ್ನು ಪ್ರತ್ಯೇಕವಾಗಿಟ್ಟು ಕೊಟ್ಟಿದ್ದರು. ಆಗ ನಮಗೆ ಅನೇಕ ಸೌಲಭ್ಯಗಳಿರುತ್ತಿದ್ದವು. ನಮ್ಮ ಬಾಲಕರ ವಿದ್ಯಾಭ್ಯಾಸ ಒಂದು ಉತ್ತಮ ಮಟ್ಟದಲ್ಲಿ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ಅವುಗಳನ್ನೆಲ್ಲಾ ಒಂದುಗೂಡಿಸಿ ಬಿಟ್ಟಮೇಲೆ ನಮ್ಮ ಬಾಲಕರಿಗೆ ವಿದ್ಯಾಸೌಲಭ್ಯಗಳು ಬಹಳ ಕಡಮೆಯಾದವು. ಅವರ ಅಭಿವೃದ್ಧಿ ಈಗ ಅಸಮರ್ಪಕವಾಗಿದೆ. ಈಗ ಹರಿಜನರಿಗೆ ಕೊಡತಕ್ಕ ಸೌಲಭ್ಯಗಳು ಬಹಳ ಕಡಮೆಯಾಗಿವೆ. ಎಲ್ಲಾ ಹುಡುಗರುಗಳಿಗೂ ಕೊಡುತ್ತಿರುವಂತೆ ಅಷ್ಟಿಷ್ಟು ಸೌಕರ್ಯಗಳನ್ನು ನಮ್ಮ ಹರಿಜನ ವಿದ್ಯಾರ್ಥಿಗಳಿಗೂ ಕೊಡುತ್ತಿದ್ದಾರೆ. ಹೀಗೆ ಕೊಟ್ಟರೆ ಅದರಿಂದ ನಮಗೇನೂ ಉಪಯೋಗವಾಗುವುದಿಲ್ಲ. 1918ನೆಯ ಇಸವಿಯಿಂದ ನಮಗೆ ಶಾಲೆಗೆ ಹೋಗತಕ್ಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಉಚಿತವಾಗಿ ಬಟ್ಟೆ, ಪುಸ್ತಕಗಳು, ವಿದ್ಯಾರ್ಥಿವೇತನ ಇತ್ಯಾದಿ ಎಲ್ಲಾ ಸೌಕರ್ಯಗಳನ್ನೂ ಪ್ರತಿಯೊಂದು ಹಳ್ಳಿಯಲ್ಲೂ ಕೊಡುತ್ತಿದ್ದರು. ಆದರೆ ಈಗ ಆ ರೀತಿಯಾಗಿ ಕೊಡುತ್ತಿಲ್ಲ. ಕೆಲವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿರತಕ್ಕ ಇತರ ಕೋಮಿನವಿದ್ಯಾರ್ಥಿಗಳಿಗೆ ಏನೇನು ಸೌಕರ್ಯಗಳನ್ನು ಕೊಡುತ್ತಿದ್ದಾರೆಯೋ ಅದೇ ಸೌಕರ್ಯಗಳನ್ನು ನಮ್ಮ ಹರಿಜನ ವಿದ್ಯಾರ್ಥಿಗಳಿಗೂ ಕೊಡುತ್ತಿದ್ದಾರೆ. ಇದರಿಂದ ನಮ್ಮ ವಿದ್ಯಾರ್ಥಿಗಳ ಅಭಿವೃದ್ಧಿ ಈಗ ಹಿಂದಕ್ಕೆ ಹೋಗುತ್ತಿದೆ. ದೊಡ್ಡ ದೊಡ್ಡ ಜ್ಞಾನಿಗಳು ಎಲ್ಲೆಲ್ಲಿರುತ್ತಾರೋ ಅವರು ತಮ್ಮ ಸುತ್ತಮುತ್ತಲೂ ಇರತಕ್ಕವರನ್ನು ತಮ್ಮಂತೆಯೇ ವಿದ್ಯಾವಂತರನ್ನಾಗಿ ಮಾಡತಕ್ಕದ್ದು ಅವರ ಧರ್ಮ. ನಮ್ಮಲ್ಲಿ ವಿದ್ಯಾವಂತರಿರುವುದೇ ಬಹಳ ಕಡಮೆ. 1918ರಿಂದ ಇಲ್ಲಿಯತನಕವೂ ಆಗಿರತಕ್ಕ ವಿದ್ಯಾವಂತರ ಸಂಖ್ಯೆ ಎಷ್ಟೆಂದರೆ 19 ಲಕ್ಷ ಪ್ರಜಾ ಸಂಖ್ಯೆ ಇರುವಂಥ ಕೋಮಿಗೆ ಕೇವಲ 118 ಮಂದಿ ಪದವೀಧರರಿದ್ದಾರೆ. ಇಷ್ಟೇ. ಆದರೆ ಬಾಕಿ ಕೋಮಿನವರನ್ನು ನೋಡಿ. ಅವರು ನಾನಾಮುಖವಾಗಿ ಅಭಿವೃದ್ಧಿಹೊಂದುತ್ತಿದ್ದಾರೆ. ಆದುದರಿಂದ ತಾವು ನಮ್ಮ ನಿಮ್ನ ಪಂಗಡದ ವಿದ್ಯಾರ್ಥಿಗಳಿಗೆ ಇತರ ಎಲ್ಲಾ ಕೋಮಿನವರಿಗೂ ಕೊಡುತ್ತಿರುವ ಸೌಲಭ್ಯಗಳಿಗಿಂತಲೂ ಹೆಚ್ಚಾಗಿ ಕೊಟ್ಟಲ್ಲಿ ಇವರು ದೇಶದಲ್ಲಿರತಕ್ಕ ಬಾಕಿ ಜನಾಂಗಗಳವರಂತೆ ತಾವೂ ಆರ್ಥಿಕ, ನೈತಿಕ ಮತ್ತು ಸಾಮಾಜಿಕ ಬಾಬುಗಳಲ್ಲಿ ಅಭಿವೃದ್ಧಿ ಹೊಂದಲು ಅನುಕೂಲವಾಗುತ್ತದೆ. ಇದಕ್ಕಾಗಿ ನಾನು ಸರ್ಕಾರದವರಿಗೊಂದು ಸಲಹೆ ಮಾಡಬೇಕೆಂದಿರುತ್ತೇನೆ. ಆದರೆ ಈಗ ಎಲ್ಲೋ ಅಲ್ಲಲ್ಲೆ ಕೆಲವು ಜಿಲ್ಲಾ ಕಸಬೆಗಳಲ್ಲಿ ಮಾತ್ರ ಈ ಹರಿಜನ ವಿದ್ಯಾರ್ಥಿಗಳಿಗೆ ಉಚಿತ ಭೋಜನದ ವಸತಿ ಸೌಕರ್ಯಗಳಿರುತ್ತವೆ. ಅಷ್ಟು ಹೊರತಾಗಿ ಅವರಿಗೆ ಮತ್ತಾವ ಸೌಲಭ್ಯಗಳೂ ಇರುವುದಿಲ್ಲ. ಆದರೆ ಇದರ ಜೊತೆಗೆ ಸರ್ಕಾರದವರು ಅವರಿಗೆ ಉಚಿತವಾಗಿ ಪುಸ್ತಕಗಳು ಮತ್ತು ಬಟ್ಟೆ ಸ್ಕಾಲರ್‌ಷಿಪ್ ಇತ್ಯಾದಿಗಳೆಲ್ಲವನ್ನೂ ಕೊಡಬೇಕು. ಮತ್ತು ಪ್ರತಿಯೊಂದು ತಾಲ್ಲೂಕು ಕಸಬೆಗಳಲ್ಲಿಯೂ ಒಂದೊಂದು ಉಚಿತ ಹರಿಜನ ವಿದ್ಯಾರ್ಥಿಗಳ

ಬೋರ್ಡಿಂಗ್ ಹೋಂಗಳನ್ನು ಸರ್ಕಾರದವರು ಕಡ್ಡಾಯವಾಗಿ ತೆರೆಯಬೇಕೆಂದು ಆಖೈರಾಗಿ ಸಲಹೆ ನೀಡಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೂ ಮತ್ತು ನನ್ನ ಮಾತುಗಳಲ್ಲಿ ಬೇಸರ ಪಡದೆ ಲಾಲಿಸಿದ ಸದಸ್ಯರಿಗೂ ನನ್ನ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, "The system of our education is like a Railway without Stations, without feeder lines and without cross lines" ಎಂಬುದಾಗಿ, ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರು ಒಂದುಬಾರಿ ಹೇಳಿದ್ದಾರೆ. ಬಂಧವಿಮುಕ್ತ ಭಾರತಕ್ಕೆ ಸ್ವಾವಲಂಬನಯುಕವಾದ ಒಂದು ವಿದ್ಯಾಭ್ಯಾಸ ಕ್ರಮವು ಅಗತ್ಯವೆಂದು ಸರ್ಕಾರದವರು ತಿಳಿದು, ಒಂದು ತಜ್ಞರ ಸಮಿತಿಯನ್ನೇರ್ಪಡಿಸಿ, ಸುಧಾರಣೆಗಳನ್ನು ಮಾಡುವ ಈ ಕಾರ್ಯವನ್ನು ಕೈಕೊಂಡಿದ್ದು ಒಂದು ಪ್ರಶಂಶನೀಯವಾದ ವಿಷಯವೇ ಸರಿ. ಈ ಸುಧಾರಣಾ ಸಮಿತಿಯು ಒಂದು ಯೋಜನೆಯನ್ನೂ ನಮ್ಮ ಮುಂದೆ ಇಟ್ಟಿದೆ. ಆ ಯೋಜನೆಯ ವಿವರಗಳಿಗೆ ಹೋಗುವ ಮುನ್ನ ಒಂದು ಅಂಶವನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ. "ಹಾಸಿಗೆಯಿದ್ದಷ್ಟು ಕಾಲು ನೀಡಿ, ಸುಖವಾಗಿ ಮಲಗಿ ನಿದ್ರಿಸಿದವನೇ ಆರೋಗ್ಯಶಾಲಿ ಮತ್ತು ಭಾಗ್ಯಶಾಲಿ" ಎಂಬ ಗಾದೆಯ ಮಾತಿನಂತೆ ನಮ್ಮಲ್ಲಿ ಸಧ್ಯಕ್ಕೆ ಎಷ್ಟು ಹಣಕಾಸಿನ ಪರಿಸ್ಥಿತಿ ಅನುಕೂಲವಾಗುತ್ತದೆಯೋ ಅಷ್ಟಕ್ಕೆ ತಕ್ಕಂತೆ ಒಂದು ಯೋಜನೆಯನ್ನು ತಯಾರಿಸುವುದೇ ಒಂದು ಉತ್ತಮ ಯೋಜನೆಯೆಂದು ನನಗೆ ಭಾಸವಾಗುತ್ತದೆ. ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಸುಮಾರು ಮೂರು ಕೋಟಿ ರೂಪಾಯಿಗಳು ವೆಚ್ಚವಾಗುತ್ತಿವೆ. ನಮ್ಮ ಮುಂದಿರತಕ್ಕ ಈ ಹೊಸ ಯೋಜನಯ ಪ್ರಕಾರ ವಿದ್ಯಾಭ್ಯಾಸ ಕ್ರಮವನ್ನು ದೇಶಾದಂತ್ಯವೂ ಜಾರಿಗೆ ತರಬೇಕಾದರೆ ಸುಮಾರು ವರ್ಷಂಪ್ರತಿ 7 ಕೋಟಿ ರೂಪಾಯಿಗಳು ಅಥವಾ 547 ಲಕ್ಷ ರೂಪಾಯಿಗಳಾದರೂ ಖರ್ಚಾಗಲೇಬೇಕಾಗುತ್ತವೆ, ಹೀಗೆ ಇದಕ್ಕೆ ತಗುಲುವ ಖರ್ಚನ್ನು ಹೇಗೆ ಉತ್ಪತ್ತಿಮಾಡಬಹುದು ಎಂಬ ಬಗ್ಗೆ ಕೆಲವು ವಿಷಯಗಳನ್ನೂ ಸಹ ಆ ಸಮಿತಿ ಈಗ ಸಭೆಯ ಮುಂದೆ ಇಟ್ಟಿದೆ. ಆದರೆ ಆ ಸಲಹೆಗಳನ್ನು ನೋಡುವುದಾದರೆ ಅವುಗಳಲ್ಲಿ ಯಾವುವೂ ನಮ್ಮ ಮನಸ್ಸಿಗೆ ಒಪ್ಪುವಂತಿಲ್ಲ. ಈ ಸಲಹೆಗಳು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತವೆ ಎಂಬುದರಲ್ಲಿಯೂ ಸಹ ತುಂಬ ಅನುಮಾನವಿವೆ. ಬೇರೆ ಕಡೆ ಹಣ ಒದಗುತ್ತದೆಂದು ಹೇಳಿ ಈ ಕಾರ್ಯವನ್ನು ಕೈಕೊಳ್ಳುವುದು, "ಮಳೆ ಮೋಡ ನೋಡಿ, ಸೇದುವ ಬಾವಿಯನ್ನು ಮುಚ್ಚಿದ ಹಾಗೆ" ಇದೆ. ಹೀಗಿರುವುದರಿಂದ ಆ ಸಮಿತಿಯವರು ನಮ್ಮ ಮುಂದೆ ಇಟ್ಟಿರತಕ್ಕ ವರದಿಯಲ್ಲಿ ತಿಳಿಸಿರುವಂತೆ ಈ ವಿದ್ಯಾಭ್ಯಾಸವನ್ನು ಜಾರಿಗೆ ತರುವುದು ಬಹಳ ಕಷ್ಟ ಮತ್ತು ಕೇಂದ್ರದಿಂದ ಹಣ ಬರುವುದೂ ಸಂಶಯ. ನನ್ನ ದೃಷ್ಟಿಯಲ್ಲಿ ಒಂದು ಉತ್ತಮವಾದ ಯೋಜನೆಯೆಂದರೆ, ಇದ್ದಷ್ಟೇ ಹಣದ ಖರ್ಚಿನಲ್ಲಿ ಒಂದು ಜನೋಪಯುಕ್ತವಾದ ಸುಧಾರಣೆಯನ್ನು ತಯಾರಿಸುವುದೇ ಸರ್ವಶ್ರೇಷ್ಠವಾದ ಯೋಜನೆಯೆಂದು ನಾನು ಭಾವಿಸಿದ್ದೇನೆ.

ಇನ್ನು ಸುಧಾರಣೆಯ ವಿಷಯದಲ್ಲಿ ಒಂದೆರಡು ಅಂಶಗಳನ್ನು ವಿಮರ್ಶಿಸೋಣ. ಮೊದಲನೆಯ ಸಮಸ್ಯೆ ಭಾಷಾ ಸಮಸ್ಯೆ. ಈ ಸಮಸ್ಯೆಗೆ ನಮ್ಮ ಸುಧಾರಣಾ ಸಮಿತಿಯವರಾದರೂ ತಮ್ಮ ವರದಿಯಲ್ಲಿ ಅಕ್ಷರಾಭ್ಯಾಸ ಪ್ರಾರಂಭಿಸಿದ 5 ಅಥವ 6ನೆಯ ವರ್ಷದಲ್ಲಿ ಮಾತೃಭಾಷೆ, ರಾಷ್ಟ್ರಭಾಷೆ, ದೇವಭಾಷೆ ಮತ್ತು ಅಂತರರಾಷ್ಟ್ರೀಯ ಭಾಷೆ, ಹೀಗೆ—ಕನ್ನಡ, ಹಿಂದಿ, ಸಂಸ್ಕೃತ ಮತ್ತು ಇಂಗ್ಲೀಷು-ಈ ನಾಲ್ಕು ಭಾಷೆಗಳನ್ನು ಅಭ್ಯಾಸಮಾಡಬೇಕು ಎಂದು ಹೇಳಿದ್ದಾರೆ. ಬೆಳೆಯುತ್ತಿರುವ ಮೇಧಾಶಕ್ತಿಯು ಬರೀ ಜ್ಞಾನಾರ್ಜನೆಗೆ ಎನ್ನುವುದನ್ನು ವಿರೋಧಿಸಬೇಕಾಗಿದೆ. ಇದನ್ನು ನೋಡಿದರೆ ತೆನ್ನಾಲ ರಾಮಕೃಷ್ಣ ಬರೆದ ಚಿತ್ರದಂತಿದೆ. ಅಂದರೆ_ಕಾಲೊಂದು ಕಡೆ, ತಲೆಯೊಂದುಕಡೆ, ಮುಖವೊಂದುಕಡೆ, ಬರೆದು ಇದು ಎಷ್ಟು ಚೆನ್ನಾಗಿದೆ ಎಂದು ಕೇಳಿದಂತಿದೆ. ಶಿಕ್ಷಣ ಸಮಿತಿಯವರು ಶಿಕ್ಷಣ ಕೊಡುವುದರಲ್ಲಿ ಮೊದಲು ವ್ಯಕ್ತಿ ಸಮಸ್ಯೆ, ಅನಂತರ ರಾಷ್ಟ್ರ ಸಮಸ್ಯೆ, ಅನಂತರ ಅಂತರ ರಾಷ್ಟ್ರೀಯ ಸಮಸ್ಯೆ ಎಂಬ ಒಂದು ಕ್ರಮವಾಗಿ ಮಾರ್ಪಾಡು ಮಾಡಬೇಕಾಗಿತ್ತು. ಆದರೆ ಇಂದು ನಮ್ಮ ಸುಧಾರಣಾ ಸಮಿತಿಯವರು ಮೊಟ್ಟಮೊದಲು ಅಂತರರಾಷ್ಟ್ರೀಯ ಸಮಸ್ಯೆ, ಅನಂತರ ರಾಷ್ಟ್ರೀಯ ಸಮಸ್ಯೆ ಕೊನೆಯದಾಗಿ ವ್ಯಕ್ತಿ ಸಮಸ್ಯೆ ತೆಗೆದುಕೊಂಡಹಾಗೆ ಕಾಣುತ್ತದೆ. ವಿದ್ಯಾರ್ಥಿ ಶಿಕ್ಷಣ ಆರಂಭಿಸಿದ ಮೂರು ನಾಲ್ಕು ವರ್ಷಗಳಲ್ಲೇ ಜೀವನ ಸಮಸ್ಯೆ ಬಗೆಹರಿಸುವ ಶಕ್ತಿ ಈ ಸುಧಾರಣೆಯಿಂದ ಬರುವಂತೆ ಕಾಣುವುದಿಲ್ಲ. ಇದು ಶೋಚನೀಯ.

ಇನ್ನು ಮುಂದೆ ಹೈಸ್ಕೂಲು ಶಿಕ್ಷಣ ಮುಗಿಯುವವರೆಗೆ ಕನ್ನಡದಲ್ಲೇ ಶಿಕ್ಷಣಕೊಡಬೇಕು. ಅನಂತರ ಹಿಂದಿ ಮತ್ತು ಸಂಸ್ಕೃತ ಕಲಿಯುವುದನ್ನು ಪ್ರಾರಂಭಿಸಬಹುದು. ಅಪೇಕ್ಷಿಸಿದವರು ಇಂಗ್ಲೀಷನ್ನು ಇಂಟರ್‌ಮೀಡಿಯಟ್ ತರಗತಿ ಆದಮೇಲೆ ತೆಗೆದುಕೊಳ್ಳಬಹುದು.

Sri A. G. RAMACHANDRA RAO (Minister for Law and Education).—It is not optional; English is also compulsory.

ಶ್ರೀ ಯು. ಎಂ. ಮಾದಪ್ಪ.—ಅದು ನನ್ನ ಅಭಿಪ್ರಾಯ. ಮಾತೃ ಭಾಷೆ ಹೊರತಾಗಿ ಉಳಿದ ಯಾವ ಭಾಷೆಯನ್ನೂ ಸಹ ನಿರ್ಬಂಧವಾದ ಪರೀಕ್ಷೆಯ ವಿಷಯವಾಗಿ ಇಡಬಾರದು, ಭಾಷಾ ಸ್ವಾತಂತ್ರ್ಯವಿರಬೇಕು ಎಂದು ಒತ್ತಾಯವಾಗಿ ಹೇಳುತ್ತೇನೆ.

ವೃತ್ತಿಶಿಕ್ಷಣ ಯೋಜನೆಯನ್ನು ಸುಲಭವಾಗಿ ಜಾರಿಗೆ ತರುವುದಕ್ಕೆ ಕೆಲವು ಮಾರ್ಗಗಳಿವೆ. ಸಮಿತಿಯು ಇದನ್ನು ಗಮನಿಸಿದಂತೆ ಕಾಣಲಿಲ್ಲ. ನಮ್ಮ ಸಂಸ್ಥಾನದಲ್ಲಿ ಈಗಾಗಲೇ ಸರ್ಕಾರದ ವ್ಯವಸಾಯ ಕೇಂದ್ರ, ರೇಷ್ಮೆಕೇಂದ್ರ ಮತ್ತು ಕೈಗಾರಿಕಾ ಕೇಂದ್ರ ಇವುಗಳಿವೆ. ಇವನ್ನು ಶಿಕ್ಷಣ ಸಂಸ್ಥೆಗಳಾಗಿ ಅಲ್ಪಸ್ವಲ್ಪ ಖರ್ಚಿನಲ್ಲೇ ಮಾರ್ಪಾಡು ಮಾಡಬಹುದು. ಉದಾಹರಣೆಗೆ ಸರ್ ಮಿರ್ಜಾರವರು ಪ್ರಾರಂಭಿಸಿದ ಬದನವಾಳ ಖಾದಿಕೇಂದ್ರ. ಅಲ್ಲಿ ಖಾದಿ, ಕಾಗದ ಮತ್ತು ಸಾಬೂನು ತಯಾರಿಕೆ ಆಗುತ್ತಿದೆ. ಇದರಿಂದ ಸುಮಾರು ಮೂರು ಸಾವಿರ ಕೂಲಿಗಾರರಿಗೆ ಕೂಲಿ ಸಿಕ್ಕುತ್ತಿತ್ತು; ಕೂಲಿಗಾರರ ಸಮಸ್ಯೆಯೂ ಬಗೆಹರಿಯುತ್ತಿತ್ತು. ಇತ್ತೀಚೆಗೆ ಪ್ರಜಾಸರ್ಕಾರ ಬಂದ ಮೇಲೆ ಬದನವಾಳ ಇಂದು ಬಡವರ ಗೋಳಾಗಿದೆ. ಹಿಂದೆ ಸರ್ಕಾರ ಅಲ್ಲಿ ತಯಾರಾದ ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹಕೊಡುತ್ತಿತ್ತು. ಇಂದು ಅದು ನಿಂತುಹೋಗಿದೆ. ಇದನ್ನು ಪರ್ಯಾಲೋಚಿಸುವುದು ಅತ್ಯಗತ್ಯ.

(ಶ್ರೀ ಯು. ಎಂ. ಮಾದಪ್ಪ.)

ಸುಧಾರಣಾ ಸಮಿತಿಯವರು ದೇಶೀಯ ಶಿಕ್ಷಣಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆಯುರ್ವೇದ ವೈದ್ಯಶಿಕ್ಷಣಕ್ಕೆ ನಿರೀಕ್ಷೆ ಮಾಡಿದಷ್ಟು ಪ್ರೋತ್ಸಾಹ ಕೊಟ್ಟಿಲ್ಲ. ಸಂಸ್ಥಾನದಲ್ಲಿ ಕೇವಲ ಒಂದೇ ಒಂದು ಆಯುರ್ವೇದ ಶಿಕ್ಷಣ ಸಂಸ್ಥೆಯಿದೆ. ಇದನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಒಂದು, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಂದು, ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಒಂದು ಏರ್ಪಡಿಸಿ ಅದರಿಂದ ದೇಶೀಯ ಶಿಕ್ಷಣಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಅಲ್ಲದೆ ಆಯುರ್ವೇದ ಶಿಕ್ಷಣವನ್ನು ವಿಶ್ವವಿದ್ಯಾನಿಲಯದ ಮಟ್ಟದಲ್ಲೂ ಪರಿಗಣಿಸಬೇಕು.

ಸಮಿತಿಯವರು ಬಿಟ್ಟಿರುವ ಮತ್ತೊಂದು ಸಮಸ್ಯೆ ಕುರುಡರು, ಮೂಕರಿಗೆ ಸಂಬಂಧಪಟ್ಟಿದೆ. ಅವರ ಪಾಠಶಾಲೆಯ ಕಡೆ ಗಮನ ಕೊಟ್ಟಿಲ್ಲ. ಅದೃಷ್ಟಹೀನ ಅಂಗವಿಕಲರ ಈ ಸಮಸ್ಯೆ ಬಹಳ ಚಿಂತಾಜನಕವಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರೂ ಇದಕ್ಕೆ ಸಾಕಷ್ಟು ಸಹಾಯ ನೀಡುತ್ತಿಲ್ಲ. ಶಿಕ್ಷಣ ಸಮಿತಿ ಇದಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ.

ವಿಶ್ವವಿದ್ಯಾನಿಲಯದ ಸುಧಾರಣೆ ಅಂಗವಿಲ್ಲದ ಬುಗರಿ ಎಂದು ಹೇಳಬಹುದು. ಇಂಟರ್ ಮೀಡಿಯಟನ್ನು ವಿಶ್ವವಿದ್ಯಾನಿಲಯದಿಂದ ಬೇರ್ಪಡಿಸುವುದು, ಇಂಜನಿಯರಿಂಗ್ ಶಿಕ್ಷಣವನ್ನು ಇಂಜನಿಯರಿಂಗ್ ಇಲಾಖೆಗೆ ಮತ್ತು ವೈದ್ಯ ಶಿಕ್ಷಣವನ್ನು ವೈದ್ಯ ಇಲಾಖೆಗೆ ವಹಿಸುವುದು—ಹೀಗೆ ಏರ್ಪಡಿಸಿದರೆ, ನಿಜವಾಗಿಯೂ ವಿಶ್ವವಿದ್ಯಾನಿಲಯವು ಒಂದು ಮೈನರ್ ಮುನಿಸಿಪಾಲಿಟಿ ಆಗುತ್ತದೆ. ಅನೇಕ ಮಹನೀಯರು ಈಗಾಗಲೆ ಈ ವಿಷಯದಲ್ಲಿ ಅಭಿಪ್ರಾಯಕೊಟ್ಟರು. ಯೂನಿವರ್ಸಿಟಿ ಸೆನೇಟ್‌ನಲ್ಲಿ ಚರ್ಚೆ ಯಾದಾಗ ಅಲ್ಲಿ ನಾನೂ ಮತ್ತು ನನ್ನ ಸಹೋದ್ಯೋಗಿಗಳೂ ಈ ವಿಷಯವನ್ನು ಒತ್ತಾಯಮಾಡಿದ್ದೇವೆ. ವಿಶ್ವವಿದ್ಯಾನಿಲಯವು ಸರ್ವವ್ಯಾಪಿಯಾಗಬೇಕಾದರೆ ಅದರ ಒಂದು ಅಂಗವಾಗಿರುವ ಸೆನೇಟ್ ಹೆಚ್ಚು ಅಧಿಕಾರ ಹೊಂದಿರಬೇಕು. ಅಲ್ಲದೆ ಈ ವಿಶ್ವವಿದ್ಯಾನಿಲಯ ಸ್ವತಂತ್ರ ಸಂಸ್ಥೆಯಾಗಿರಬೇಕು. ಇದು ಪವಿತ್ರ ವಿದ್ಯಾ ಸಂಸ್ಥೆಯಾಗಿರಬೇಕೇ ಹೊರತು ಸರ್ಕಾರದ ರಾಜಕೀಯ ಬಣ್ಣದ ಬುಗರಿಯಾಗಿರಬಾರದು. ಇದನ್ನು ಯಾರೂ ಮರೆಯಬಾರದು.

ವಿದ್ಯಾರ್ಥಿಗಳ ದೈಹಿಕ ಶಿಕ್ಷಣ ಮತ್ತು ಮಾನಸಿಕ ಶಿಕ್ಷಣಕ್ಕೆ ಎನ್. ಸಿ. ಸಿ., ಸ್ಕೌಟ್, ಭಾರತ ಸೇವಾದಳ, ಗೈಡ್ಸ್ ಎಂದು ಸಮಿತಿಯು ನಾಲ್ಕು ಭಾಗವನ್ನು ಶಿಫಾರ್ಸು ಮಾಡಿದೆ. ಈ ಒಂದೊಂದು ಸಂಸ್ಥೆಗೂ ಪ್ರತ್ಯೇಕವಾಗಿ ಹಣ ಒದಗಿಸುವುದರಿಂದ ಈಗಿನ ಆರ್ಥಿಕದುಸ್ಥಿತಿಯಿಂದ ಸರ್ಕಾರಕ್ಕೆ ತೊಂದರೆಯಾಗುವ ಸಂಭವವಿದೆ. ಇದನ್ನು ಒತ್ತಿಹೇಳುವುದು ಅನಾವಶ್ಯಕ. ಹೈಸ್ಕೂಲು ವಿದ್ಯಾಭ್ಯಾಸ ಮುಗಿಯುವವರೆಗೆ ಭಾರತ ಸೇವಾದಳದ ಶಿಕ್ಷಣ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನಿರ್ಬಂಧವಾಗಿ ಕೊಡುವ ಪದ್ಧತಿ ಜಾರಿಗೆ ತರಬೇಕು. ಎನ್. ಸಿ. ಸಿ. ಶಿಕ್ಷಣವನ್ನು ವಿಶ್ವವಿದ್ಯಾನಿಲಯದಲ್ಲಿ ನಿರ್ಬಂಧವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೊಡಬೇಕಾದದ್ದು ಅಗತ್ಯ. ಏಕೆಂದರೆ ನಮ್ಮ ರಾಜ್ಯದ ನಮ್ಮ ದೇಶದ ಶಾಂತಿ ಸಂರಕ್ಷಣೆ ಮಾಡಿಕೊಳ್ಳುವಕಾಲ ಬಂದಾಗ ಇಂಥ ವ್ಯವಸ್ಥಿತವಾಗಿರುವ ವಿದ್ಯಾರ್ಥಿ ವೃಂದವನ್ನು ಉಪಯೋಗಿಸಿಕೊಳ್ಳತಕ್ಕ ಅವಶ್ಯಕತೆ ಬರುತ್ತದೆ.

ಕೊನೆಯದಾಗಿ ಹಣಕಾಸಿನ ಸಮಸ್ಯೆ. ಈ ಸುಧಾರಣೆಯ ಜೊತೆಯಲ್ಲಿ ಸುಧಾರಣೆಗೆ ಹಣಕಾಸನ್ನೊದಗಿಸುವ ಹಲವು ಸಲಹೆಗಳನ್ನು ಸಮಿತಿಯು ಮಾಡಿದೆ. ಅದರಲ್ಲಿ ಕೇಂದ್ರದ ಸಹಾಯ ಪಡೆಯುವುದು ಬಹಳ ಮುಖ್ಯವಾದ ಒಂದು ಸಲಹೆ. ಎರಡನೆಯದು ವಿದ್ಯಾರ್ಥಿಗಳ ಫೀಜನ್ನು ಹೆಚ್ಚಿಸುವುದು. ಮೂರನೆಯದು ಇಂಡಸ್ಟ್ರಿಯಲ್ ಟ್ಯಾಕ್ಸ್ ಮತ್ತು ಬಿಜಿನೆಸ್ ಟ್ಯಾಕ್ಸ್ ವಿಧಿಸುವುದು, ನಾಲ್ಕನೆಯದು ವ್ಯವಸಾಯ ತೆರಿಗೆ ಹಾಕುವುದು. ಇವುಗಳಲ್ಲಿ ಯಾವುದನ್ನು ವಿಧಿಸಬೇಕೆಂಬುದನ್ನು ಯೋಚನೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಇದರಲ್ಲಿ ಕೇಂದ್ರ ಸರ್ಕಾರದ ಸಹಾಯ ಪಡೆಯುವುದರಲ್ಲಿ ನನ್ನ ಸ್ವಾಗತವಿದೆ. ಇದಕ್ಕೆ ಕಾರಣಗಳನ್ನು ನಮ್ಮ ನಾಯಕರಾದ ಶ್ರೀ ಇಮಾಂರವರು ಪದೇಪದೇ ಹೇಳಿದ್ದಾರೆ; ನಿಜವಾಗಿಯೂ ಅದು ಸಕಾರಣವಾಗಿದೆ. ನಮ್ಮ ಸಂಸ್ಥಾನದಿಂದ ಎಷ್ಟು ಉತ್ಪತ್ತಿ ಪಡೆಯುತ್ತಿದ್ದಾರೋ ಅದಕ್ಕೆ ತಕ್ಕಹಾಗೆ ನಮಗೆ ಸಹಾಯನೀಡುವುದು ಕೇಂದ್ರದ ಕರ್ತವ್ಯವೆಂದು ಹೇಳಿದರೆ ತಪ್ಪಾಗಲಾರದು. ವಿದ್ಯಾರ್ಥಿಗಳಿಗೆ ಫೀಜು ಹೆಚ್ಚಿಸುವುದರಿಂದ ಏನಾಗಬಹುದು, ಯಾರಿಗೆ ತೊಂದರೆ ಎಂಬುದು ನಾವು ನಾವೇ ಯೋಚನೆಮಾಡಬೇಕಾದ ವಿಷಯ. ಹೆಚ್ಚಾಗಿ ಗ್ರಾಮಾಂತರದಿಂದ ಬರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಖಂಡಿತ ಕಷ್ಟವಾಗುತ್ತದೆ. ಫೀಜಿನ ಭಾರವನ್ನು ಹೊರುವ ಜೊತೆಗೆ ಅವರು ಅಶನವಸತಿಗಳಿಗೂ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಒಂದಕ್ಕೆ ಮೂರರಷ್ಟು ಹೆಚ್ಚಾಗಿ ಸಿಟಿಯಲ್ಲಿರುವವರಿಗಿಂತ ಖರ್ಚು ಮಾಡಬೇಕಾಗುತ್ತದೆ. ಫೀಜು ಹೆಚ್ಚಿದರೆ ಗ್ರಾಮಾಂತರಗಳಿಂದ ಬರುವವರಿಗೆ ಖಂಡಿತ ಕಷ್ಟಪರಿಸ್ಥಿತಿಯುಂಟಾಗುತ್ತದೆ.

ಇನ್ನು ವಿದ್ಯಾರ್ಥಿನಿಯರ ವಿಚಾರ. ಈಗಾಗಲೇ ಯೂನಿವರ್ಸಿಟಿಯವರು ಸರ್ಕಾರದ ಅನುಮತಿ ಪ್ರಕಾರ ಫೀಜು ಹೆಚ್ಚಿಸಿರುವುದು ಶೋಚನೀಯ. ನಮ್ಮ ಸಂಸ್ಥಾನದಲ್ಲಿ ವಿದ್ಯಾರ್ಥಿನಿಯರು ಬಹಳ ಕಡಮೆ ಮಂದಿ ಇರುವುದರಿಂದ ಫೀಜಿನ ವಿಚಾರದಲ್ಲಿ ರಿಯಾಯಿತಿ ತೋರಿಸಿದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಏನೂ ತಲೆಕೆಳಗಾಗುತ್ತಿರಲಿಲ್ಲ. ಫೀಜನ್ನು ಹೆಚ್ಚಿಸುವುದರಿಂದ ವಿದ್ಯೆಯು ಕೇವಲ ಶ್ರೀಮಂತರ ಸ್ವತ್ತಾಗುತ್ತದೆ, ಬಡವರ ರಕ್ತಹೀರಿ ತನ್ಮೂಲಕ ಸಂಪಾದಿಸಿದ ಹಣದಿಂದ ಐಶ್ವರ್ಯವಂತರಿಗೆ ವಿದ್ಯೆ ಕೊಟ್ಟಹಾಗಾಗುತ್ತದೆಯೆಂದರೆ ತಪ್ಪಾಗಲಾರದು.

ನಮ್ಮ ದೇಶವು ವ್ಯವಸಾಯ ದೇಶ. 1923 ರಿಂದ 1953ರವರೆಗೆ ವ್ಯವಸಾಯದಿಂದ ಪ್ರಯೋಜನ ಹೊಂದಿ ತನ್ಮೂಲಕ ಅನುಕೂಲಸ್ಥರಾಗಿರುವವರು ಎಷ್ಟು ಮಂದಿ ನಮ್ಮ ದೇಶದಲ್ಲಿದ್ದಾರೆಂಬುದನ್ನು ಪರಿಗಣಿಸಿದುದೇ ಆದರೆ ಶೇಕಡಾ ಮೂರರಷ್ಟು ಸಹ ಸಿಕ್ಕುವುದಿಲ್ಲ. ಹೀಗಿರುವಲ್ಲಿ ವಿದ್ಯೆಯ ಮಟ್ಟವನ್ನೇ ಹೆಚ್ಚಿಸುತ್ತೇವೆಂಬ ಸೋಗಿನಿಂದ ವ್ಯವಸಾಯ ತೆರಿಗೆಯನ್ನು ಪ್ರತ್ಯಕ್ಷವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ವಿಧಿಸುವುದಾದರೆ ಇದನ್ನು ನಾನು ಉಗ್ರವಾಗಿ ಪ್ರತಿಭಟಿಸುತ್ತೇನೆ. ಈ ರೀತಿ ತೆರಿಗೆಯನ್ನು ಹೆಚ್ಚಿಸುವುದಕ್ಕೆ ವಿದ್ಯಾಸುಧಾರಣೆಯಲ್ಲಿ ಯಾವ ಸಕಾರಣವನ್ನೂ ಹೇಳಿಲ್ಲ. ಅದು ಎಷ್ಟು ಮಾತ್ರವೂ ಸಾಧುವಾದುದಲ್ಲ. ಏಕೆಂದರೆ ಈಗಿನ ಸ್ಥಿತಿಯಲ್ಲಿ ಈ ಭಾರವನ್ನು ಹೊರಲು ರೈತಾಪಿ ಜನರು ಎಷ್ಟು ಮಾತ್ರವೂ ಶಕ್ತಿಯುತರಾಗಿಲ್ಲ. ಈ ಬಗೆಯ ಸುಧಾರಣೆಯಿಂದ ಯಾವ ಪ್ರಯೋಜನವೂ ಆಗಲಾರದೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸಾಧಾರಣವಾಗಿ ದೇಶದಲ್ಲಿ ವಿದ್ಯಾಭ್ಯಾಸದ ವಿಚಾರದಲ್ಲಿ ಆಗಿಂದಾಗ್ಗೆ ಕ್ರಾಂತಿ ಕಾರಕ ಬದಲಾವಣೆ ಆಗಬೇಕಾದುದು ಅಗತ್ಯ. ಅದೇ ರೀತಿ ಮೈಸೂರು ಸರ್ಕಾರದವರು ವಿದ್ಯಾಭ್ಯಾಸದ ಪ್ರಗತಿಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಒಂದು ಸಮಿತಿಯನ್ನು ಸಹ ಮಾಡಿ ಆ ಸಮಿತಿಯ ವರದಿಯನ್ನು ನಮ್ಮ ಮುಂದೆ ಇಟ್ಟಿರುತ್ತಾರೆ. ಈ ಸಮಿತಿಯಲ್ಲಿ ವಿದ್ಯಾಪಾರಂಗತರೂ, ಮೇಧಾವಿಗಳೂ ಇದ್ದು ಕೋಟ್ಯಾಂತರ ರೂಪಾಯಿಗಳು ವೆಚ್ಚಮಾಡಬೇಕಾಗಿರುವ ಈ ವರದಿಯನ್ನು ನಮ್ಮ ಮುಂದೆ ಇಟ್ಟಿರುತ್ತಾರೆ. ಇದು ಹೇಗಿದೆಯೆಂದರೆ, ಮದುವೆ ಮಾಡಿಸಲು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡು ಅದನ್ನು ಪ್ರಾರಂಭಮಾಡಲು ದುಡ್ಡೆಲ್ಲಿಂದ ತರುವುದು ಎಂದು ಹೇಳಿದಹಾಗಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಗಾಂಧರ್ವವಿವಾಹ ಮಾಡಿಸಿದರಾಯಿತು.ಅದಕ್ಕೆ ದುಡ್ಡು ಬೇಕಿಲ್ಲ (ನಗು!)

ಶ್ರೀ ಟಿ. ಹನುಮಯ್ಯ.—ಈಗ ನಮ್ಮ ದೇಶದ ಸುಮಾರು 17 ಸಾವಿರ ಹಳ್ಳಿಗಳಲ್ಲಿ ಸುಮಾರು 10 ಸಾವಿರ ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಶಾಲೆಗಳಿವೆ. ಇನ್ನೂ ಸುಮಾರು 5-6 ಸಾವಿರ ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಶಾಲೆಗಳಿಲ್ಲ. ಆದುದರಿಂದ ಮೊಟ್ಟಮೊದಲು ಸಂಸ್ಥಾನಾದ್ಯಂತ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮ ಏರ್ಪಡಿಸಬೇಕಾದುದು ಅತ್ಯಗತ್ಯ. ಈ ಹೊಸ ಸುಧಾರಣಾ ಕ್ರಮದಲ್ಲಿ ವೃತ್ತಿಶಿಕ್ಷಣ ಕ್ರಮಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟಿರುತ್ತಾರೆ. ಈ ವೃತ್ತಿಶಿಕ್ಷಣ ಕ್ರಮವನ್ನು ಪಟ್ಟಣಗಳಲ್ಲಿ ಏರ್ಪಡಿಸಲು ಸಾಧ್ಯವಾಗಲಾರದು. ಉದಾಹರಣೆಗಾಗಿ ವ್ಯವಸಾಯದ ವೃತ್ತಿ ಶಿಕ್ಷಣಕ್ಕೆ ಅವರಿಗೆ ಜಮೀನು ಸೌಕರ್ಯವಿರುವುದಿಲ್ಲ. ಅಲ್ಲದೆ, ವೃತ್ತಿಶಿಕ್ಷಣವನ್ನು ಹಳ್ಳಿಗಳಲ್ಲಿ ಮಾತ್ರ ಏರ್ಪಡಿಸಿ, ಕೈಗಾರಿಕಾ ಶಿಕ್ಷಣವನ್ನು ಪಟ್ಟಣಗಳಲ್ಲಿ ಏರ್ಪಡಿಸುವುದಾದರೆ, ಹಳ್ಳಿಗಳಲ್ಲಿರುವವರು ಕೈಗಾರಿಕಾ ವಿಚಾರದಲ್ಲಿ ಹಿಂದೆ ಬೀಳುತ್ತಾರೆ.

ಎರಡನೆಯದಾಗಿ, ಕಾಲೇಜು ವ್ಯಾಸಂಗಕ್ಕಾಗಿ ಈಗ ನಮ್ಮ ಸರ್ಕಾರದವರು ಸುಮಾರು 3½ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಈ ವಿದ್ಯೆಯನ್ನು ಕಲಿತ ಹಲವರು ಈಗ ಉದ್ಯೋಗವನ್ನು ದೊರಕಿಸಿಕೊಳ್ಳದೆ ಬಹಳ ತೊಂದರೆಪಡುತ್ತಿದ್ದಾರೆ. ಆದುದರಿಂದ ಸ್ವಲ್ಪಕಾಲ ಈ ಮಟ್ಟದ ವಿದ್ಯಾಭ್ಯಾಸವನ್ನು ಐದು ವರ್ಷಕಾಲ ನಿಲ್ಲಿಸಿ, ಇದರಿಂದ ಉಳಿತಾಯವಾಗುವ ಹಣವನ್ನು ಇನ್ನುಳಿದ 5-6 ಸಾವಿರ ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಪ್ರಗತಿಗಾಗಿ ಖರ್ಚುಮಾಡಿದರೆ ನಮ್ಮ ದೇಶದ ವಿದ್ಯಾವಿಹೀನರ ಸಂಖ್ಯೆಯನ್ನು ಬಹುಮಟ್ಟಿಗೆ ಸರ್ಕಾರದವರು ಕಡಮೆ ಮಾಡಿದಹಾಗಾಗುತ್ತದೆಂದು ನನ್ನ ಸಲಹೆ.

ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿಯೇ ವೃತ್ತಿ ಶಿಕ್ಷಣ ಕ್ರಮವನ್ನು ಅಳವಡಿಸಿ ಅವರು ಈ ಮಟ್ಟಕ್ಕೆ ವಿದ್ಯಾಭ್ಯಾಸವನ್ನು ಮುಗಿಸಿ ಮುಂದಿನ ಮಟ್ಟಕ್ಕೆ ಅಂದರೆ ಹೈಸ್ಕೂಲ್ ವಿದ್ಯಾಭ್ಯಾಸದ ಮಟ್ಟಕ್ಕೆ ಹೋದರೆ ಈ ಶಿಕ್ಷಣದಲ್ಲಿಯೇ ಇನ್ನೂ ಹೆಚ್ಚಿನ ಪರಿಶ್ರಮಹೊಂದಲು ಅನುಕೂಲವಾಗುವಂತೆ ಶಿಕ್ಷಣಕ್ರಮವನ್ನೂ ಅಳವಡಿಸಿಕೊಂಡುಹೋಗುವುದು ಉತ್ತಮವಾದ ಮಾರ್ಗ. ಏಕೆಂದರೆ ಕಲಿತ ವಿದ್ಯೆಯಲ್ಲಿ ನೈಪುಣ್ಯವನ್ನು ಪಡೆಯಬೇಕಾದುದು ಅತ್ಯಗತ್ಯ.

2 P.M.

ಇನ್ನೊಂದು ಅಂಶ ಸ್ವಾಮಿ. ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಎಲ್. ಎಸ್. ತೆಗೆದುಹಾಕಬೇಕೆಂದು ಇದೆ. ಒಂದು ವಿಧದಲ್ಲಿ ಇದನ್ನು ತೆಗೆಯುವುದು ಒಳ್ಳೆಯದು ಎಂದು ನಾನು ಒಪ್ಪಿಕೊಂಡರೂ ಕೂಡ ಇನ್ನೊಂದು ವಿಧದಲ್ಲಿ ನೋಡಿದರೆ ಸ್ವಲ್ಪ ತೊಂದರೆಯಾಗುತ್ತದೆ. ಬಹುಶಃ ಇವೊತ್ತಿನ ದಿವಸ ಈ ಪರೀಕ್ಷೆಯಲ್ಲಿ 100ಕ್ಕೆ 30,35ಜನ ಪಾಸಾಗಬಹುದು. ಒಂದು ವೇಳೆ ಇದನ್ನು ತೆಗೆದುಹಾಕಿದ ಪಕ್ಷದಲ್ಲಿ 100ಕ್ಕೆ 9) ಜನರಿಗೆ ಪ್ರಮೋಷನ್ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಆ ಸ್ಕೂಲಿನಲ್ಲಿ ಪಾಠಹೇಳಿಕೊಡತಕ್ಕ ಮೇಷ್ಟರು ಆ ಊರಿನಲ್ಲಿ ವಾಸಮಾಡುವ ದಕ್ಕಾಗುವುದಿಲ್ಲ. ಊರಿನ ಶ್ಯಾನುಭೋಗರ ಮಕ್ಕಳು ಇರುತ್ತಾರೆ ಗೌಡರ ಮಕ್ಕಳೂ ಇರುತ್ತಾರೆ ಅವರನ್ನು ಪಾಸ್ ಮಾಡಿಸದಿದ್ದರೆ ಆ ಮೇಷ್ಟರಿಗೆ ಉಳಿಗಾಲವಿಲ್ಲ. ಆದ್ದರಿಂದ ಪ್ರಮೋಷನ್ ಕೊಟ್ಟೇ ಕೊಡಬೇಕಾಗುತ್ತದೆ. ಪ್ರಮೋಷನ್ ಕೊಟ್ಟರೆ 100ಕ್ಕೆ 99 ಜನ ಪಾಸ್ ಆಗುತ್ತಾರೆ. ಅದಕ್ಕೆ ತಕ್ಕಂತೆ ಸೆಕೆಂಡರಿ ಶಿಕ್ಷಣ ಕೊಡಬೇಕಾದರೆ ಹೆಚ್ಚು ಹೆಚ್ಚು ಹೈಸ್ಕೂಲುಗಳನ್ನು ತೆಗೆದರೆ ತಾನೆ ಸಾಧ್ಯ? ಆದ್ದರಿಂದ ಈ ಒಂದು ದೊಡ್ಡ ಆತಂಕ ಬರುತ್ತದೆ. ಬಹಳ ಹೆಚ್ಚು ಜನ ಹುಡುಗರು ಹೈಸ್ಕೂಲಿಗೆ ನುಗ್ಗುವುದರಿಂದ ಹೈಸ್ಕೂಲುಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಿದರೆ ಪ್ರಯೋಜನವಾಗುತ್ತದೆಯೇ ಹೊರತು ಇಲ್ಲದಿದ್ದರೆ ಏನೂ ಸಾರ್ಥಕವಾಗುವುದಿಲ್ಲ. ಈ ವರದಿ ದೊಡ್ಡ ದೊಡ್ಡ ಪರಿಣತರು ಸೇರಿಮಾಡಿದ್ದೇ ಆದರೂ ಕೂಡ ಇದನ್ನು ಕಾರ್ಯಗತಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇವುಗಳನ್ನು ಮಾಡಬೇಕಾದರೆ ಹೆಚ್ಚು ದುಡ್ಡು ಬೇಕು. ದುಡ್ಡಿಲ್ಲದೆ ಯಾವ ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೆಚ್ಚಿಸಬೇಕು, ಹಳ್ಳಿಗಾಡುಗಳಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಪ್ರೈಮರಿ ಸ್ಕೂಲನ್ನು ಸ್ಥಾಪನೆ ಮಾಡಬೇಕು. ಹೆಚ್ಚು ಹಣ ಖರ್ಚುಮಾಡುವುದಕ್ಕಾಗದಿದ್ದರೂ ಕೂಡ, ಹಿಂದೆ ಆಶ್ರಮವಾಸ ಎಂದು ಹೇಳಿ ಗುರುಕುಲಗಳನ್ನಿಟ್ಟುಕೊಂಡು 100–200 ಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಏರ್ಪಾಡು ಮಾಡಿ ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸವಾಗುವಂತೆ ಮಾಡುವುದು ಬಹಳ ಅಗತ್ಯ ಎಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು ತಯಾರು ಮಾಡಿಕೊಟ್ಟಿರತಕ್ಕ ಈ ವರದಿ ಬಗ್ಗೆ ಮಾನ್ಯ ಸಭೆಯ ಅನೇಕ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವಿವಿಧ ರೂಪದಲ್ಲಿ ಸಭೆಯ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಇನ್ನು ಹೆಚ್ಚು ಮಾತನಾಡತಕ್ಕದ್ದು ಏನೂ ಅಷ್ಟಾಗಿಲ್ಲ ಎಂದು ನನಗೆನ್ನಿಸುತ್ತಿದೆಯಾದರೂ ಈ ಸುಧಾರಣಾ ಸಮಿತಿಯವರ ವರದಿಯನ್ನು ತಯಾರು ಮಾಡಿರತಕ್ಕ ಶ್ರೀಮಾನ್ ಮಲ್ಲಾರಾಧ್ಯರವರು ಬರೆದಿರತಕ್ಕ ಒಂದು ವಾಕ್ಯವನ್ನು ಮಾತ್ರ ನಾನು ಹೇಳಬೇಕಾಗಿದೆ. ಹಿಂದೆ ತಯಾರು ಮಾಡಿದ ವರದಿಗಳಲ್ಲಿರತಕ್ಕ ಮುಖ್ಯವಾದಂಥ ಅಂಶಗಳನ್ನು ಮತ್ತು ಹೊಸದಾಗಿ ಕೆಲವು ಅಂಶಗಳನ್ನು ಸೇರಿಸಿ, ಈ ವರದಿಯನ್ನು ತಯಾರು ಮಾಡಿ ಸಮಿತಿಯವರ ಕರ್ತವ್ಯವನ್ನು

(ಶ್ರೀ ವಿ. ಮಸಿಯಪ್ಪ.)

ಪೂರೈಸಿದೆಯೆಂದು ಅವರು ಹೇಳಿದ್ದಾರೆ. ಹಾಗೆಯೇ ಈಗಾಗಲೇ ಮಾತನಾಡಿರುವ ಮಹನೀಯರುಗಳು ಕೊಟ್ಟಿರತಕ್ಕ ಅಭಿಪ್ರಾಯಗಳು ಮತ್ತು ಸಮಿತಿಯವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇವುಗಳಿಗೆ ಎಲ್ಲಾದರೂ ವ್ಯತ್ಯಾಸ ಬರತಕ್ಕ ಸಂದರ್ಭಗಳಿದ್ದರೆ ಅವಕ್ಕೆ ಸಮಜಾಯಿಷಿಕೊಟ್ಟು ಒಂದೆರಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ ಈ ವರದಿ ಬಗ್ಗೆ ನನ್ನ ಅಭಿಪ್ರಾಯವೇನು ಎಂಬುದನ್ನು ವ್ಯಕ್ತಪಡಿಸಿದ ಹಾಗಾಗುತ್ತದೆ. ಸ್ವಾಮಿ, ಒಟ್ಟಿನಲ್ಲಿ ನಾನು ಈ ಒಂದು ವರದಿಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಟ್ಟು ಸ್ವಾಗತವನ್ನು ಕೋರುತ್ತೇನೆ. ಕಾರಣ ಇದರಲ್ಲಿ ಅಡಗಿರತಕ್ಕ ಅಂಶಗಳು ಈಗಿನ ಸನ್ನಿವೇಶಕ್ಕೆ ಮತ್ತು ಜನತೆಯ ಆಶೋತ್ತರಗಳಿಗೆ, ಮಾನ್ಯ ಸಭೆಯವರು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಡಿಸಿರತಕ್ಕ ಹಿರಿಯ ಬಯಕೆಗೆ ದೇಶದ ಅಭ್ಯುದಯದ ಬಗ್ಗೆ ಯಾವ ಹೆಬ್ಬಯಕೆಯನ್ನು ವ್ಯಕ್ತಪಡಿಸಿದರೋ ಆ ಹೆಬ್ಬಯಕೆಗಳನ್ನು ನೆರವೇರಿಸಿರತಕ್ಕ ಅಂಶಗಳಾಗಿವೆ. ನಮ್ಮ ದೇಶದ ಮುಂದಿನ ಸತ್ಪ್ರಜೆಗಳನ್ನು, ಎಂದರೆ, ಬಾಲಕರನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯತಕ್ಕ ಉತ್ತಮವಾದ ಸಲಹೆಗಳನ್ನು ಈ ವರದಿಯಲ್ಲಿ ಕೊಟ್ಟಿದ್ದಾರೆ. ಒಂದೆರಡು ಹೇಳುವುದಾದರೆ ಪ್ರಾಥಮಿಕ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವುದರ ಮೂಲಕ ಮಕ್ಕಳು ಒಂದು ಉದ್ಯೋಗವನ್ನು ಕಲಿತುಕೊಂಡು ಮುಂದೆ ಜೀವನ ನಡೆಸಲಿಕ್ಕೆ ಒಂದು ಮಾರ್ಗವನ್ನು ಕಲ್ಪಿಸಿರುವುದು ಬಹಳ ಮುಖ್ಯವಾದ ವಿಚಾರ. ಶ್ರೀಮಾನ್ ಮೂಡಲಗಿರಿ ಗೌಡರು ಬಹಳ ಒಳ್ಳೆಯ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದು ಬಹುಶಃ ನಮ್ಮ ಅನೇಕ ಮಿತ್ರರ ಪ್ರಶ್ನೆಗಳಿಗೆ ಉದಾಹರಣೆಯಾಗಿದೆಯೆಂದು ಹೇಳಬಹುದು. ಶ್ರೀಮಾನ್ ಇಮಾಂರವರು ಬೇಸಿಕ್ ಎಜುಕೇಷನ್ ವಿಚಾರವಾಗಿ ಮಾತನಾಡುತ್ತಾ ಚಿಕ್ಕಮಕ್ಕಳಿಗೆ ದೇಹದಾರ್ಢ್ಯ ಆಷ್ಟಾಗಿಯಿರುವುದಿಲ್ಲ. 6 ವರ್ಷದ ಒಬ್ಬ ಹುಡಗ ಅಂಥ ಕೆಲಸಗಳನ್ನು ಮಾಡಬೇಕೆಂದರೆ ಎಷ್ಟುಮಟ್ಟಿಗೆ ಮಾಡಬಲ್ಲ, ಅವನ್ನು ಕಲಿತುಕೊಳ್ಳಬಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಾನು ಹೇಳುವುದು ಇಷ್ಟೇ ಒಂದು ಶಾಲೆಯಲ್ಲಿರಬಹುದಾದ ಬಾಲಕ, ಬಾಲಕಿಯರಲ್ಲಿ ಯಾರು ಯಾರಿಗೆ ಯಾವ ಯಾವುದರಲ್ಲಿ ಆಸಕ್ತಿಯಿದೆಯೋ ಅದರಲ್ಲಿ ಅಭ್ಯಾಸ ಮಾಡಲಿಕ್ಕೆ ಸಹಾಯಕವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕದ್ದೇ ಈ ಮೂಲ ಶಿಕ್ಷಣ ಪದ್ಧತಿಯ ಗುರಿಯೇ ವಿನಾ ಎಲ್ಲ ವಿದ್ಯೆಯನ್ನು ಕಲಿತುಕೊಳ್ಳಬೇಕೆಂದಾಗಲಿ, ದೇಹಕ್ಕೆ ವಿಪರೀತವಾದ ಶ್ರಮ ಕೊಡಬೇಕೆಂಬುದಾಗಲಿ, ಉದ್ದೇಶವಲ್ಲ. ಶ್ರೀಮಾನ್ ಮೂಡಲಗಿರಿ ಗೌಡರು ಹೇಳಿದ ಹಾಗೆ, ಹುಡುಗನಲ್ಲಿ ಯಾವುದಾದರೂ ಒಂದು ಉದ್ಯೋಗದಲ್ಲಿ ತೊಡಗಬೇಕೆಂಬ ಮನಸ್ಸು, ಭಾವನೆ ಬೆಳೆಸಬೇಕಾದ್ದು ಬಹಳ ಮುಖ್ಯವಾದ ಅಂಶ. ಈ ಒಂದು fundamental training ಹುಡುಗನಿಗೆ ಬಹಳ ಅವಶ್ಯಕ. ಕಿವಿಯಿಂದ ಸುಮ್ಮನೆ ಕೇಳುವುದಕ್ಕೆ ಬದಲಾಗಿ ಅದರ ಜೊತೆಗೆ ಬಿಸಿಲಿನಲ್ಲಿ ಕೆಲಸಮಾಡುವುದನ್ನು ಕಲಿಸಬೇಕು; ಮಳೆಯಲ್ಲಿ ನೆನೆಯುವುದನ್ನು ಕಲಿಸಬೇಕು, ಹೀಗೆಯೇ ಮೈಮುರಿದು ಕೆಲಸ ಮಾಡುವುದನ್ನು ಕಲಿಸಬೇಕು. ಆ ರೀತಿ ನಮ್ಮ ಮಕ್ಕಳನ್ನು ಬೆಳೆಸಿದ್ದರೆ ದೊಡ್ಡವರಾದ ಮೇಲೆ ಅವರಿಗೆ ಸಶ್ರಮ ಶಿಕ್ಷೆ ಕೊಟ್ಟ ಹಾಗಾಗುತ್ತದೆ. ಆದ್ದರಿಂದ ಆ ಒಂದು ವಯಸ್ಸಿನಲ್ಲಿ ನಮಗೆ ಮಗುವಿನ ಬಗ್ಗೆ ಎಷ್ಟೇ ಮಾನವೀಯ ಕನಿಕರ ಬಂದರೂ ಕೂಡ ನಾವು ನಿಜವಾದ ತಂದೆತಾಯಿಗಳು ಎನ್ನಿಸಿಕೊಳ್ಳಬೇಕಾದರೆ, ದೇಶದ ಹಿತೈಷಿಗಳು ಎನ್ನಿಸಿಕೊಳ್ಳಬೇಕಾದರೆ, ಎಲ್ಲಾ ಖರ್ಚುಗಳನ್ನು ವಹಿಸಿ ಈ ಮೂಲ ಶಿಕ್ಷಣವನ್ನು ಮಕ್ಕಳಿಗೆ ಕೊಡುವುದು ಅವಶ್ಯಕ. ಈ ಒಂದು ಹಿನ್ನೆಲೆಯಿಂದ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಸುಧಾರಣೆ ಮಾಡಿರತಕ್ಕದ್ದು ಬಹಳ ಅತ್ಯುತ್ತಮವಾದುದಾಗಿದೆ. ಇನ್ನು ಹಣಕಾಸಿನ ಪ್ರಶ್ನೆಯನ್ನು ಮುಂದಾಗಿಟ್ಟುಕೊಂಡು ಮಾನ್ಯ ಸದಸ್ಯರನೇಕರು ಬಹಳವಾಗಿ ಟೀಕೆಮಾಡಿದರು. ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ, ಈ ಸಭೆ ಪ್ರೋಗ್ರೆಸೀವ್ ವ್ಯೂಸ್ ಇಟ್ಟುಕೊಂಡಿದೆಯೋ ಅಥವಾ ರಿಟ್ರೋಗ್ರೆಸೀವ್ ವ್ಯೂಸ್ ಇಟ್ಟುಕೊಂಡಿದೆಯೋ ಎಂಬುದನ್ನು ಕೇಳಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ದೇಶದ ನಾಯಕರು ಮತ್ತು ಅನೇಕ ಮಂದಿ ಮಾನ್ಯ ಸದಸ್ಯರು ನಮ್ಮ ದೇಶವನ್ನು ಅಭಿವೃದ್ಧಿಗೆ ತರಬೇಕಾದರೆ ಆ ರೀತಿ ಮಾಡಬೇಕು ಈ ರೀತಿ ಮಾಡಬೇಕು ಎಂದು ಪ್ರತಿಯೊಂದು ಅಂಶದಲ್ಲೂ ಪಾಶ್ಚಾತ್ಯ ದೇಶಗಳ ಉದಾಹರಣೆಯನ್ನು ಕೋಟ್ ಮಾಡುತ್ತಾಯಿರುವುದು ನಮಗೆ ಗೊತ್ತಿದೆ. ಪ್ರತಿಯೊಬ್ಬರೂ ಸಹ ಪಾಶ್ಚಿಮಾತ್ಯ ದೇಶಗಳವರು ಯಾವುದೋ ಒಂದು ರೀತಿಯಲ್ಲಿ ಅಭಿವೃದ್ಧಿಗೆ ಬಂದಿದ್ದಾರೆ ಎಂಬ ಒಂದೇ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆಯೋ ಹೊರತು ಅವರು ಅನುಸರಿಸಿತ್ತಿರುವ ತತ್ವವನು ಆಲೋಚಿಸಿದ ಹಾಗೆ ಕಾಣುವುದಿಲ್ಲ ಎಂದು ನನಗೆನ್ನಿಸುತ್ತಿದೆ. ಒಂದು ಶಾಸ್ತ್ರೀಯವಾದ ನಿಯಮವನ್ನು ತತ್ವವನ್ನು ಅನುಸರಿಸಿ ಅದರಂತೆ ಮುಂದುವರಿಯಲು ಅವರು ಪ್ರಯತ್ನ ಮಾಡುತ್ತಾರೆ. ಒಂದು ಉನ್ನತವಾದ ಗುರಿಯನ್ನಿಟ್ಟುಕೊಂಡರೆ ಆ ಗುರಿಯನ್ನು ಸಾಧನೆ ಮಾಡಲಿಕ್ಕೆ ಮಾರ್ಗದಲ್ಲಿ ಏನೇ ಕಷ್ಟಬರಲಿ—ಕಾಲವಿಳಂಬವಾಗಬಹುದು, ಶ್ರಮವಾಗಬಹುದು ಆದರೂ ಕೂಡ ಅದನ್ನು ಸಾಧಿಸಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ವಿನಾ ಹಣವಿಲ್ಲ ಎಂದಾಗಲೀ, ಬೇರೆ ಯಾವ ಕಾರಣದಿಂದಾಗಲೀ ಅವನ್ನು ಬಿಟ್ಟು ಬಿಟ್ಟು ಸಪ್ಪೆ ಮುಖ ಹಾಕಿಕೊಂಡು ಕುಳಿತುಕೊಳ್ಳುವುದಿಲ್ಲ. ಹಾಗೆ ಕುಳಿತುಕೊಂಡಿದ್ದ ಪಕ್ಷದಲ್ಲಿ ಈ ದಿವಸ ಪಾಶ್ಚಿಮಾತ್ಯ ದೇಶಗಳವರು ನಮಗೆ ಮಾದರಿಯಾಗಿರುತ್ತಿರಲಿಲ್ಲ. ಉದಾಹರಣೆಗೆ, ರಷ್ಯಾ ದೇಶ ತೆಗೆದುಕೊಳ್ಳಿ 5-10-15 ವರ್ಷಗಳ ಯೋಜನೆ ಹಾಕಿಕೊಂಡು 20-30 ವರ್ಷಗಳಲ್ಲಿ ಅವರು ಉನ್ನತವಾದ ಒಂದು ಮಟ್ಟಕ್ಕೆ ಬಂದಿದ್ದಾರೆ. ಒಂದು ವೇಳೆ ಮಧ್ಯದಲ್ಲೇ ಅವರು ನಿರಾಶರಾಗಿ ಕೈಬಿಟ್ಟಿದ್ದರೆ ಈಗ ಯಾವ ಒಂದು ಮಟ್ಟಕ್ಕೆ ಬಂದಿದ್ದಾರೋ ಆ ಮಟ್ಟಕ್ಕೆ ಬರಲು ಅವಕಾಶವಾಗುತ್ತಾಯಿರಲಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಆಲೋಚನೆ ಮಾಡಬೇಕಾದ ವಿಚಾರ. ಈ ದೃಷ್ಟಿಯಿಂದ ಒಂದು ಸದವಕಾಶ ಸನ್ನಿಹಿತವಾಗಿರುವ ಈ ಸಮಯದಲ್ಲಿ 'ಹಾಸಿಗೆಯಿದ್ದಷ್ಟೆ ಕಾಲು ಚಾಚು' ಎಂಬ ನಿಯಮವನ್ನು ಬಿಟ್ಟುಬಿಡಬೇಕಾಗಿದೆ. ಇದನ್ನು ಅನುಸರಿಸಿಕೊಂಡು ಹೋಗುವುದಾದರೆ ಖಂಡಿತವಾಗಿಯೂ ದೇಶಕ್ಕೆ ಉಳಿಗಾಲವಿಲ್ಲ. ದೇಶಾಭಿವೃದ್ಧಿಯಾಗುತ್ತದೆ ಎಂಬುದು ಕನಸಿನ ವಿಷಯವಾಗಿ ಪರಿಣಮಿಸಬಹುದೆಂದು ನನಗೆನ್ನಿಸುತ್ತದೆ. ದೇಶ ಅಭಿವೃದ್ಧಿಗೆ ಬರಬೇಕೆಂಬ ಉದಾತ್ತವಾದ ಧ್ಯೇಯವನ್ನು ಮುಂದಿಟ್ಟುಕೊಂಡು ಉತ್ತಮವಾದ ಯೋಜನೆಗಳನ್ನು ಹಾಕಿದ ಪಕ್ಷದಲ್ಲಿ ಕೇಂದ್ರ ಸರ್ಕಾರ ಹಣ ನೀಡಬೇಕಾಗಬಹುದು. ಶ್ರೀಮಾನ್ ಪಟ್ಟಾಭಿರಾಮನ್‌ರವರು ಸಲಹೆ ಕೊಟ್ಟ ಹಾಗೆ, ಕೇಂದ್ರ ಸರ್ಕಾರದವರು ಮೂಲ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣ ಕೊಡಲಿಕ್ಕೆ ತಗಲ

ತಕ್ಕ ಖರ್ಚಿನಲ್ಲಿ ಶೇಕಡ 30 ಭಾಗದ ಖರ್ಚನ್ನು ವಹಿಸಿಕೊಳ್ಳುವುದಾದರೆ ಅಷ್ಟು ಮಟ್ಟಿಗೆ ಮೈಸೂರು ಸರ್ಕಾರದ ಹೊರೆ ಕಡಮೆಯಾಗಬಹುದು. ಇನ್ನೊಂದು ವಿಷಯ ಹೇಳುವುದಾದರೆ ಇಂಡಿಯಾ ದೇಶದಲ್ಲಿ ಇತರ ಪ್ರದೇಶಗಳವರು ಇಂಥ ಒಂದು ವಿದ್ಯಾಭ್ಯಾಸದ ಮಾರ್ಪಾಡನ್ನು ಮಾಡಬೇಕೆಂಬುದನ್ನು ಕಲ್ಪನೆ ಮಾಡಿಕೊಳ್ಳುವುದಕ್ಕಿಂತ ಮುಂಚೆಯೇ ನಮ್ಮ ಮೈಸೂರು ದೇಶದವರು ಈ ರೀತಿಯ ಒಂದು ವರದಿಯನ್ನು ತಯಾರು ಮಾಡಿದ್ದಾರೆ ಎಂದರೆ ಬಹುಶಃ ಕೇಂದ್ರ ಸರ್ಕಾರದವರೂ ಕೂಡ ನಮ್ಮ ಒಂದು ಕೋರಿಕೆಯನ್ನು ಎಂದರೆ, ಹೆಚ್ಚಿನ ಸಹಾಯ ಕೊಡಬೇಕೆಂಬುದನ್ನು ನಿರಾಕರಿಸಲಾರರು ಎಂದು ನನಗೆನ್ನಿಸುತ್ತದೆ. ಅದೂ ಅಲ್ಲದೆ ಮುಂದೆ ಪಾರ್ಲಿಮೆಂಟಿನಲ್ಲಿ ಎಸ್ಟೇಟ್ಸ್ ಡ್ಯೂಟಿ ಬಿಲ್, ಡೆತ್‌ಡ್ಯೂಟಿ ಬಿಲ್ ಇವುಗಳೆಲ್ಲಾ ಒಂದು, ವರಮಾನ ಹೆಚ್ಚುಮಾಡಿಕೊಳ್ಳತಕ್ಕ ಮಾರ್ಗಗಳು ವಿಶೇಷವಾಗಿವೆ.

ಅಂಥ ಸಂದರ್ಭದಲ್ಲಿ ನಮಗೆ ಅವರಿಂದ ಬರಬೇಕಾದ ಪಾಲು ಬಂದೇ ಬರುತ್ತದೆ. ಅದಕ್ಕೆ ಸರಿಯಾಗಿ ನಾವು ಅಗ್ಗೆ ಸರಿಯಾಗಿ ನಮ್ಮ ಸುಧಾರಣೆಗಳನ್ನು ಸಿದ್ಧಮಾಡಿಕೊಂಡಿದ್ದರೆ ನಾವೂ ಕೇಳುವುದಕ್ಕೆ ನಮಗೊಂದು ಹಕ್ಕಿರುತ್ತದೆ. ಈ ದೃಷ್ಟಿಯಿಂದಲೂ ನಾವು ಈ ಸುಧಾರಣೆಯನ್ನು ಸ್ವಾಗತಿಸಬೇಕಾಗಿದೆ.

ಇಷ್ಟೆಲ್ಲಾ ಹೇಳಿಯಾದ ಮೇಲೆ, ಇನ್ನು ಈ ವರದಿಯಲ್ಲಿ ಅಷ್ಟಾಗಿ ಪ್ರಾಧಾನ್ಯತೆ ಕೊಟ್ಟಿಲ್ಲದಿರುವ ಒಂದೆರಡು ವಿಷಯಗಳನ್ನು ಸ್ವಲ್ಪಮಟ್ಟಿಗೆ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಕಾವೀನ ಒಂದು ದೊಡ್ಡ ಕಟ್ಟಡವನ್ನು ಕಟ್ಟಲಿಕ್ಕೆ ಹೊರಟಿದ್ದೀರಿ. ಆದರೆ ದೇಶದ ಪ್ರಜೆಗಳನ್ನು ಉತ್ತಮ ಮಟ್ಟಕ್ಕೆ ಎತ್ತಬೇಕೆಂದು ಹೊರಟಿರತಕ್ಕ ಈ ಸುಧಾರಣಾ ಸಮಿತಿಯವರು ತಳಪಾಯವೇ ಕುಸಿಯುವಂತೆ ಮರಳಿನಿಂದ ಕಟ್ಟಲು ಹೊರಟಿದ್ದಾರಲ್ಲಾ ಎಂದು ವ್ಯಸನವಾಗುತ್ತದೆ. ನರ್ಸರಿ ಪಾಠಶಾಲೆಗಳಿಗೆ ಹೆಚ್ಚಿಗೆ ಪ್ರಾಧಾನ್ಯತೆಕೊಡದೆ ಅದನ್ನು ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಮಹನೀಯರ ಇಷ್ಟ-ಅಭಿಲಾಷೆಗಳಿಗೆ ಬಿಟ್ಟು ಅವಿದ್ಯಾವಂತರಾದ, ಅಜ್ಞಾನಿಗಳಾದ, ಮಕ್ಕಳ ವಿದ್ಯಾಭ್ಯಾಸವನ್ನು ಅಲಕ್ಷ್ಯಮಾಡಿರುವುದು ಈ ಸುಧಾರಣೆಯಲ್ಲಿ ಕಾಣಬರುವ ಒಂದು ದೊಡ್ಡ ಲೋಪವೆಂದು ಹೇಳಬಹುದು. ಇದರಿಂದಾಗಿ ಅವರ ಮುಖ್ಯ ಗುರಿಯೇನಿದೆಯೋ ಅದಕ್ಕೇ ತಿಲತರ್ಪಣ ಬಿಟ್ಟ ಹಾಗಾಗಿದೆ. ಶ್ರೀಮಾನ್ ಮೂಡಿಲಗಿರಿಗೌಡರೂ ಮತ್ತು ಶ್ರೀಮಾನ್ ರುದ್ರಪ್ಪನವರೂ ಈ ವಿಷಯವನ್ನು ಆಗಲೇ ಕೂಲಂಕಷವಾಗಿ ವಿಮರ್ಶೆಮಾಡಿ ತಿಳಿಸಿದ್ದಾರೆ. ಈಗೀಗ ಪ್ರಾಥಮಿಕ ವಿದ್ಯಾಭ್ಯಾಸದ ಪಾಠಶಾಲೆಗಳನ್ನು ಕೊಡುವುದಕ್ಕಾಗಿ ಹಳ್ಳಿಗಾಡಿನವರು ಒತ್ತಾಯ ಮಾಡುತ್ತಿದ್ದಾರೆ. ಅಂಥದ್ದರಲ್ಲಿ ಸ್ಕೂಲನ್ನು ಕೊಡಬೇಕಾದರೆ ಸ್ಕೂಲಿಗೆ ಕಟ್ಟಡದ ಮತ್ತು ಉಪಾಧ್ಯಾಯರ ವಾಸದ ಮನೆ, ಕಟ್ಟಡ ಸಲಕರಣೆ—ಇವುಗಳನ್ನೆಲ್ಲಾ ಕೊಟ್ಟರೇನೇ ಸ್ಕೂಲು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಅನೇಕ ಕಡೆಗಳಲ್ಲಿ ಸಿಂಗಲ್ ಟೀಚರ್ ಸ್ಕೂಲುಗಳನ್ನು ಮಾತ್ರ ಕೊಡುತ್ತಿದ್ದೀರಿ. ಇಷ್ಟೆಲ್ಲಾ ಉಳಿತಾಯ ಮಾಡಿದ ಮೇಲೆ, ನೀವು ಎಲ್ಲಾ ಕಡೆ ಸ್ಕೂಲುಗಳನ್ನು ಕೊಡುತ್ತೀರೊ ಅಲ್ಲಿಗೇ ಒಂದು ಸರ್ಕಾರಿ ಸ್ಕೂಲನ್ನು attach ಮಾಡುವುದರಿಂದ ನಿಮಗೇನು ತುಂಬ ತೊಂದರೆಯಾಗುತ್ತದೆಯೋ? ಸುಮ್ಮನೆ ದೇಶಾದ್ಯಂತವೂ ನರ್ಸರಿ ಸ್ಕೂಲು ಎಂಬುದನ್ನೇ ಒಂದು ಪೆಡಂಭೂತವಾಗಿ ಮಾಡಿ, ಅದಕ್ಕೆ ವಿಪರೀತ ಖರ್ಚಾಗುತ್ತದೆ ಎಂದು ಹೇಳುವುದು ಸರಿಯಲ್ಲ. ನೀವು ಕಾಲೇಜ್ ವಿದ್ಯಾಭ್ಯಾಸಕ್ಕೆ ಮಾಡುತ್ತಿರುವ ಖರ್ಚುಕೂಡ ಇದಕ್ಕಾಗುವುದಿಲ್ಲ. ಅಲ್ಲದೆ ಈ ಖರ್ಚು ಅಗತ್ಯ ಮತ್ತು ಅನಿವಾರ್ಯ. ಅದನ್ನು ಮಾಡದೆ ಹೋದರೆ ನಿಮ್ಮ ಈ ಯೋಜನೆಯೇ ವಿಫಲಗೊಳ್ಳಬಹುದೆಂಬ ಶಂಕೆಯಿದೆ.

ಎರಡನೆಯದಾಗಿ, ಒಂದು ಸಂತೋಷಕರವಾದ ಅಂಶವೇನೆಂದರೆ, ಅಮರಕೋಶ, ಆಯುರ್ವೇದ ಮುಂತಾದ ಪಾಠಗಳಿಗೆ ಪ್ರಾಧಾನ್ಯತೆ ಕೊಟ್ಟಿರುವುದು. ಇದು ಬಹಳ ಅಗತ್ಯ. ಇದರಿಂದ ಹೊರ ದೇಶಗಳಿಗೆ ಔಷಧಕ್ಕಾಗಿ ಖರ್ಚಾಗುತ್ತಿರುವ ಲಕ್ಷಾಂತರ ರೂಪಾಯಿಗಳು ಉಳಿತಾಯವಾಗಲು ಅವಕಾಶವಾಗುತ್ತದೆ. ಆದ್ದರಿಂದ ಆದಷ್ಟು ಇದನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನಮಾಡಬೇಕು.

ಕೊನೆಯದಾಗಿ, ಈಗ ಯಾರೊಬ್ಬ ಸದಸ್ಯರೂ ಹೇಳದಿರುವ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದು ವಯಸ್ಕರ ಶಿಕ್ಷಣದ ವಿಚಾರದಲ್ಲಿ ಈ ಸುಧಾರಣಾ ಸಮಿತಿಯವರು ಏನೂ ಹೇಳದಿರುವುದು. ವಯಸ್ಕರ ಶಿಕ್ಷಣ ಸಮಿತಿಯೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಹುಟ್ಟಿದ್ದು 1905 ರಷ್ಟು ಹಿಂದೆಯೇ. 1905 ರಲ್ಲಿ ಷುರುವಾಗಿ ಅಖಿಲ ಭಾರತದಲ್ಲೇ ಖ್ಯಾತಿಪಡೆದಿರುವುದಲ್ಲದೆ, ವಯಸ್ಕರ ಶಿಕ್ಷಣದಲ್ಲಿ ಇಡೀ ಪ್ರಪಂಚದಲ್ಲೂ ನಮ್ಮ ಮೈಸೂರು ಹೆಸರು ಪಡೆದಿದೆಯೆಂದು ಹೇಳಬಹುದು. ವಯಸ್ಕರ ಶಿಕ್ಷಣ ಸಂಬಂಧದಲ್ಲಿ ಒಂದು ಸೆಮಿನಾರ್ ಕೂಡ ನಡೆದು ಮಾದರಿಯಾಗಿ ನಡೆಸಿಕೊಂಡು ಬಂದಿರುವ ವಯಸ್ಕರ ಶಿಕ್ಷಣ ಸಂಸ್ಥೆಗೆ ಪ್ರಾಶಸ್ತ್ಯವನ್ನು ತಪ್ಪಿಸಿ ಅದಕ್ಕೆ ಒದಗಿಸಿರುವ ಸೌಲಭ್ಯಗಳನ್ನೂ ತೆಗೆದು ವಿದ್ಯಾ ಇಲಾಖೆಗೆ ವಹಿಸಿಕೊಡಬೇಕೆಂದು ಹೇಳಿರುವುದು ಸಾಧ್ಯವಲ್ಲ. ಇದೇ ಸಂದರ್ಭದಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಮಾನ್ಯ ಶಿಕ್ಷಣ ಸಚಿವರಲ್ಲಿ ಹೋಗಿ ಅರಿಕೆಮಾಡಿಕೊಂಡಾಗ ಅದನ್ನು ಉಳಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ಆ ಬಗ್ಗೆ ನಾನು ಇನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ.

ಆಮೇಲೆ ಇಂಟರ್ ಮೀಡಿಯಟ್ ಕಾಲೇಜುಗಳ ಸ್ಥಾನದ ವಿಚಾರದಲ್ಲಿ ಎರಡೇ ಮಾತು. ಶ್ರೀಮಾನ್ ರುದ್ರಪ್ಪನವರೂ ಮತ್ತು ಇನ್ನೂ ಅನೇಕರು ಹೇಳಿದಂತೆ ಇಂಟರ್ ಮೀಡಿಯೆಟ್ ಕಾಲೇಜಿಗೆ ಹೋದ ಕೂಡಲೇ ಅಲ್ಲಿನ ವಾತಾವರಣದಲ್ಲಿ ವಿದ್ಯಾರ್ಥಿಯಲ್ಲೇ ಒಂದು ಮಾನಸಿಕ ಬದಲಾವಣೆಯಾಗುತ್ತದೆ. ಅದೇ ಅಂಶವನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ಆದ್ದರಿಂದ ಅದು ಮುಂದೆಯೂ ಯೂನಿವರ್ಸಿಟಿಗೆ ಸೇರಿದ್ದಾಗಿಯೇ ಇರಬೇಕೇ ವಿನಾ ವಿದ್ಯಾ ಇಲಾಖೆಗೆ ವರ್ಗ ಮಾಡುವುದು ಸರಿಯಲ್ಲವೆಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಈ ವಿದ್ಯಾಭ್ಯಾಸ ಸುಧಾರಣೆಯ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದು ನಿಜವಾಗಿಯೂ ಬಹಳ ದಕ್ಷತೆಯಿಂದ ತಯಾರಾದ ಒಂದು ಅಮೋಘವಾದ ರಿಪೋರ್ಟು. ಇದರ ಮೇಲೆ ಮಾತನಾಡಬೇಕಾದರೆ ಯಾರೇ ಆಗಲಿ ಸ್ವಲ್ಪ ಶಂಕೆಯಿಂದಲೇ ಮಾತನಾಡಬೇಕು. ಏಕೆಂದರೆ ಬಹಳ ಜನ ತಜ್ಞರು ಸೇರಿ ಕಷ್ಟಪಟ್ಟು ತಯಾರಿಸಿರುವ ಒಂದು ಸುಧಾರಣೆ ಇದು. ಮಾನ್ಯಮಂತ್ರಿಗಳು ಇದನ್ನು ಪ್ರಸ್ತಾಪಿಸುತ್ತಾ, ಈ ವಿದ್ಯಾಭ್ಯಾಸದ ಸುಧಾರಣೆಯ ವಿಚಾರದಲ್ಲಿ, ಅದರ ತತ್ವ ಮತ್ತು ದೇಶಕ್ಕೆ ಅಗತ್ಯವಾಗಿ ಆಗಬೇಕಾಗಿರುವ ಸುಧಾರಣೆ ಯೇನೆಂಬುದನ್ನು

(ಶ್ರೀ ಟಿ. ಸಿ. ಬಸಪ್ಪ.)

ಗಮನದಲ್ಲಿಟ್ಟುಕೊಂಡು ಮಾತನಾಡಬೇಕೇ ಹೊರತು ಸದ್ಯಕ್ಕೆ ಇದಕ್ಕೆ ತಗಲಬೇಕಾದ ಹಣದ ವಿಚಾರವನ್ನು ಯೋಚನೆ ಮಾಡಬೇಕಾದ ಅಗತ್ಯವಿಲ್ಲವೆಂದು ಸೂಚನೆ ಕೊಟ್ಟರು. ಆ ದೃಷ್ಟಿಯಿಂದ ಹೇಳುವುದಾದರೆ ಈ ಸುಧಾರಣೆಯು ನಿಜವಾಗಿಯೂ ಬಹಳ ಅಪೇಕ್ಷಣೀಯವಾದ್ದು. ನಮ್ಮ ಮುಖ್ಯಮಂತ್ರಿಗಳು ಹೇಳಿದಹಾಗೆ, ಹಣದ ಯೋಚನೆಯೇ ಇಲ್ಲದೆ ಇದನ್ನು ಜಾರಿಗೆ ಕೊಡುವುದಾದರೆ ನನಗೆ ಇವರ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯಿದೆ, ಬೆಂಬಲವಿದೆಯೆಂದು ಹೇಳಬಹುದು. ಆದರೆ ಇದನ್ನು ಕಾರ್ಯಗತಮಾಡುವ ಜವಾಬ್ದಾರಿ ಈ ಶಾಸನ ಸಭೆಗೆ ಸೇರಿದ್ದಾಗಿದೆ. ಮತ್ತು ಈ ವರದಿಯಲ್ಲೂ ಕೂಡ ಹಣವನ್ನೊದಗಿಸುವ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಆದ್ದರಿಂದ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಸುಧಾರಣೆಯನ್ನು ಯೋಚನೆ ಮಾಡಬೇಕೇ ಹೊರತು ಕೇವಲ ತತ್ವ ದೃಷ್ಟಿಯಿಂದ ಇದು ಬಹಳ ಉತ್ತಮ ಮಾರ್ಪಾಡೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಏಕೆಂದರೆ ಇಲ್ಲಿ ಹೇಳಿರುವಂತೆ ಸಂಸ್ಥಾನದಲ್ಲಿನ 17,000 ಹಳ್ಳಿಗಳಿಗೆ ಪ್ರತಿಯೊಂದಕ್ಕೂ ಇಂಥ ಪಾಠಶಾಲೆಗಳನ್ನು ಕೊಟ್ಟರೆ ನಿಜವಾಗಿಯೂ ರಾಮರಾಜ್ಯವಾಗುತ್ತದೆ. ಇರತಕ್ಕ 17,000 ಹಳ್ಳಿಗಳಲ್ಲೇ ಇನ್ನೂ 5,000 ಹಳ್ಳಿಗಳಿಗೆ ಪಾಠಶಾಲೆಗಳಿಲ್ಲ. ಬಹುಮಟ್ಟಿಗೆ ಅನೇಕ ಸ್ಕೂಲುಗಳಲ್ಲಿ ಒಬ್ಬರು ಉಪಾಧ್ಯಾಯರುಗಳು ಮಾತ್ರ ಇದ್ದಾರೆ. ಇನ್ನೂ, ಅನೇಕಕಡೆ ಗ್ರಾಂಟ್-ಇನ್-ಏಡ್‌ಸ್ಕೂಲುಗಳನ್ನು ಸರ್ಕಾರಿ ಸ್ಕೂಲುಗಳಾಗಿ ಮಾಡಿ ಎಂದು ಅರ್ಜಿಗಳಮೇಲೆ ಅರ್ಜಿಗಳು ಬಂದರೂ ಸರ್ಕಾರದವರು ದುಡ್ಡಿಲ್ಲವೆಂದು ಹೇಳಿ ಅರ್ಜಿಗಳನ್ನು ನಿರಾಕರಿಸಿದ ನಿದರ್ಶನಗಳು ಅನೇಕವಾಗಿವೆಯೆಂದು ಈ ಪುಸ್ತಕದಲ್ಲೇ ಹೇಳಿದ್ದಾರೆ. ಈ ರಿಪೋರ್ಟಿನಲ್ಲಿ ಕೊಟ್ಟಿರತಕ್ಕ ರೀತಿಯಲ್ಲಿ ಪ್ರತಿ30 ವಿದ್ಯಾರ್ಥಿಗಳುಳ್ಳ ಗ್ರಾಮಗಳಲ್ಲೂ ನೀವು ಈಗ 6 ತರಗತಿಗಳನ್ನೊಳಗೊಂಡ ಪಾಠಶಾಲೆಗಳನ್ನು ಕೊಟ್ಟರೇನೋ ಒಳ್ಳೆಯದೇ. "As a rule a six-year education should be provided in every primary school and there should be no incomplete school" ಎಂದು ಹೇಳಿರುವುದೇನೋ ಚೆನ್ನಾಗಿ ತೋರುತ್ತಿದೆ. ಆದರೆ ವಾಸ್ತವಾಂಶ ನೋಡಿದ ಪಕ್ಷಕ್ಕೆ ಈಗ ನಾಲ್ಕು ತರಗತಿಗಳನ್ನಿಡುವುದೇ ಕಷ್ಟವಾಗಿದೆ. ಇನ್ನೂ 5,000 ಹಳ್ಳಿಗಳಿಗೆ ಸ್ಕೂಲನ್ನೇ ಕೊಟ್ಟಿಲ್ಲ. ಹೀಗಿರುವಲ್ಲಿ 6 ತರಗತಿಗಳ ಸ್ಕೂಲನ್ನು ಕೊಡುವುದು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು.

ಆಮೇಲೆ ಸ್ಕೂಲು ಕಟ್ಟಡಗಳ ವಿಚಾರ ಯೋಚನೆ ಮಾಡುವುದಾದರೆ, ಈಗಿರತಕ್ಕ 12,660 ಸ್ಕೂಲು ಕಟ್ಟಡಗಳ ಪೈಕಿ 4,768 ಕಟ್ಟಡಗಳು unsuitable buildings ಆಗಿವೆಯೆಂದು 1949ನೆಯ ಇಸವಿಯ ವರದಿಯಿಂದ ಗೊತ್ತಾಗುತ್ತದೆ. ಕಮ್ಯೂನಿಟಿ ಪ್ರಾಜೆಕ್ಟ್ ಎಂದು ಹೇಳಿ ಪ್ರತಿಯೊಂದು ಗ್ರಾಮಕ್ಕೂ ಬೇಕಾದ ಕಟ್ಟಡಗಳನ್ನು ಒದಗಿಸಿಕೊಟ್ಟರೆ ಒಳ್ಳೆಯದೆಂದು ಈ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆದರೆ ಹಳ್ಳಿಗಳವರು ಈಗ ಮೊದಲಿನ ಅಭಿವೃದ್ಧಿ ಸ್ಥಿತಿಯಲ್ಲಿಲ್ಲ. ಆದ್ದರಿಂದ ಈಗ ಟೌನ್‌ಗಳವರು ಹೇಗೆ ಸರ್ಕಾರದವರನ್ನೇ ಕಟ್ಟಡ ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದಾರೋ ಅದೇ ಸ್ಥಿತಿಗೆ ಹಳ್ಳಿಗಳವರು ಬಂದಿದ್ದಾರೆಂದರೆ ಅದು ನಿಜವಾದ ಮಾತು. ಆದುದರಿಂದ ಸುಮ್ಮನೆ ಕಟ್ಟಡ ಕಟ್ಟಿಸಿಕೊಡಿ ಎಂದು ಗ್ರಾಮಸ್ಥರನ್ನು ಕೇಳಿದರೆ, ಅದು ಸಾಧ್ಯವಿಲ್ಲ, ಸಾಧುವೂ ಅಲ್ಲವೆಂದು ಹೇಳಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಪಾಠಶಾಲೆಗಳಿಲ್ಲದಿರುವ ಐದು ಸಾವಿರ ಗ್ರಾಮಗಳಿಗೆ ಪಾಠಶಾಲೆಗಳನ್ನು ಕೊಟ್ಟು ಎಲ್ಲ ಹಳ್ಳಿಗಳಲ್ಲಿಯೂ ಒತ್ತಾಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆತಂದು ಪ್ರತಿ ಹಳ್ಳಿಯಲ್ಲಿಯೂ ಪ್ರತಿಯೊಬ್ಬರೂ ವಿದ್ಯಾವಂತರಾಗುವ ರೀತಿ ಮಾಡಿದರೆ ಅದಕ್ಕಿಂತ ಬೇರೊಂದು ಸುಧಾರಣೆ ಸದ್ಯಕ್ಕಿಲ್ಲವೆಂದು ಹೇಳಬೇಕಾಗಿದೆ. ಶ್ರೀ ವಿಶ್ವೇಶ್ವರಯ್ಯನವರು ಮ್ಯಾನ್ಯುಫ್ಯಾಕ್ಚರರ್ಸ್ ಕಾನ್ಫರೆನ್ಸಿನಲ್ಲಿ—

"Man is the largest living asset and capital in any country. People in India do not lead an ordered life because the great bulk of them who form nearly 80 per cent of the entire population is not educated. Elementary education of the masses is a prime necessity. Note what they did in Russia and Japan at the very commencement of their programme of national regeneration. Molotov, the Russian leader, has said in his book 'The Success of the Five-Year Plan-1931' that in 1928 the school-going population in Russia was 14.8 million persons and by 1931 the number had increased to 44.8 million persons; in three years' time the number of persons educated in Russia had more than trebled. There is no reason why similar results should not be achieved here by adopting measures suited to our economy. The physical structure and energy of human beings in India are not far different from those in Russia. In the words of President Roosevelt 'providing education for the masses is the greatest duty of statesmanship.' In Japan a policy was followed that education should be so diffused that there may not be a village with an ignorant family, nor a family with an ignorant member."

ಎಂದು ಹೇಳಿದ್ದಾರೆ. ಹೀಗೆ ಎಲ್ಲ ಪ್ರಜೆಗಳಿಗೂ ವಿದ್ಯಾಭ್ಯಾಸ ಮಾಡಿಸುವುದು ಪ್ರತಿಯೊಬ್ಬ ಸ್ಟೇಟ್ಸ್‌ಮನ್ನಿನ ಮತ್ತು ಸರ್ಕಾರದ ಪ್ರಥಮ ಜವಾಬ್ದಾರಿ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಸರ್ವರೂ ವಿದ್ಯಾವಂತರಾಗುವ ಗುರಿಯನ್ನು ಸಾಧಿಸಿದರೆ ದೇಶವನ್ನು ಅಭಿವೃದ್ಧಿಸ್ಥಿತಿಗೆ ತಂದಂತಾಗುತ್ತದೆ. ಈ ವರದಿಯಲ್ಲಿ ಹೇಳುವ ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ; ಅದರಲ್ಲಿಯೂ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ನಾಲ್ಕುವರ್ಷ

ವಿರುವುದನ್ನು ಆರುವರ್ಷ ಮಾಡುವುದು ಸಾಧ್ಯವಿಲ್ಲ ವೆಂದು ಕಾಣುತ್ತದೆ. ಬೇರೆ ಬೇರೆ ವಿಷಯಗಳ ಶಿಕ್ಷಣಕ್ಕೆ ಕಾಲವನ್ನು ಹಂಚಿಕೆ ಮಾಡಿರುವುದರಲ್ಲಿ, ವಾರಕ್ಕಿರುವ 21 ಗಂಟೆಗಳ ಕಾಲದಲ್ಲಿ ಸಂಸ್ಕೃತಕ್ಕೆ 2 ಗಂಟೆ, ಕನ್ನಡಕ್ಕೆ 5 ಗಂಟೆ, ಐದು ಮಾತ್ರ ಆರನೆಯ ವರ್ಷಗಳಲ್ಲಿ ಇಂಗ್ಲೀಷಿಗೆ 2 ಗಂಟೆ. ತಾಯಿನುಡಿಗೆ 5 ಗಂಟೆಯಕಾಲ ಹಂಚಲಾಗಿದೆ. ಸಂಸ್ಕೃತಕ್ಕೆ ಎರಡು ಗಂಟೆ, ಕನ್ನಡಕ್ಕೆ 5 ಗಂಟೆಯೆಂದು ಸೂಚಿಸಲಾಗಿದೆ. ಈ ಸ್ವಲ್ಪಕಾಲದಲ್ಲ ಭಾಷಾಜ್ಞಾನ ಹೊಂದಲು ಸಾಧ್ಯವಾಗುತ್ತದೆಯೆ, ಇದು ಸಾಧ್ಯವೆ, ಸಾಧುವೆ ಎಂದು ಕೇಳಬೇಕಾಗಿದೆ. ಇಂಗ್ಲಿಷ್ ಕಲಿತು ಎಸ್. ಎಸ್.ಎಲ್.ಸಿ. ಪಾಸುಮಾಡಿರುವವರ ಭಾಷಾಜ್ಞಾನವನ್ನು ನೋಡಿದರೆ ಹೆದರಿಕೆಯಾಗುತ್ತದೆ. ಹೀಗಿರುವಾಗ ಇಷ್ಟು ಅಲ್ಪಕಾಲದಲ್ಲಿ ಇಂಗ್ಲೀಷು, ಸಂಸ್ಕೃತಿ ಇವುಗಳನ್ನೂ ದೇವನಾಗರಿಲಿಪಿ, ಕನ್ನಡಲಿಪಿ, ಲೆಕ್ಕ ಇದನ್ನೆಲ್ಲಾ ಕಲಿಸುತ್ತೇವೆಂದರೆ ಸಾಧ್ಯವೆ ?

Of history, geography and broad features of the world geography, he should have a clear grasp. He should have a clear grasp of the Constitution of India in the Primay Schools.

ಆದರಲ್ಲಿಯೂ ಪ್ರೈಮರಿ ಸ್ಕೂಲುಗಳಲ್ಲಿ ಇವುಗಳನ್ನೆಲ್ಲಾ ಈ ಅವಧಿಯಲ್ಲಿ ಕಲಿಸಲು ಸಾಧ್ಯವೆ ಎಂಬುದನ್ನು ಚೆನ್ನಾಗಿ ಯೋಚನೆ ಮಾಡಬೇಕಾಗಿದೆ.

ಇನ್ನೊಂದು ವಿಚಾರ. ನರ್ಸರಿ ಸ್ಕೂಲುಗಳ ವಿಚಾರ ಈಗಾಗಲೇ ಅನೇಕ ಮಾನ್ಯ ಸದಸ್ಯರು ದತ್ತಿ ಹೇಳಿದ್ದಾರೆ. ನನ್ನ ಅನುಭವದಲ್ಲಿ ನರ್ಸರಿ ವಿದ್ಯಾಭ್ಯಾಸ ಬಹಳ ಮುಖ್ಯವಾದುದು. ಈಗ ಇಂಥ ಸಂಸ್ಥೆಗಳ ಸಂಖ್ಯೆ ಬಹಳ ಕಡಮೆಇದೆ. 1949ನೆಯ ಇಸವಿಯ ವರದಿಯಪ್ರಕಾರ ಆ ವರ್ಷ ಕೇವಲ 35 ನರ್ಸರಿ ಶಾಲೆಗಳು ಇದ್ದವೆಂದು ಹೇಳಲಾಗಿದೆ. ಚಿಕ್ಕಮಕ್ಕಳ ತಯಾರಿ ಅತ್ಯಂತ ಜವಾಬ್ದಾರಿಯುತವಾದುದು. 1949ನೆಯ ಇಸವಿಯ ವರದಿಯ 93ನೆಯ ಪುಟದಲ್ಲಿ ಈ ರೀತಿ ಹೇಳಿದೆ :

> "The emphasis laid by the present day psychologists, particularly, by Depth and Dynamic Psychologists, upon the importance of formative years, has caused a great number of educationists to turn their attention to the 'Pre-School Child' and it is being realised that there must be free and educative environment for the child during the early years."

ಆರು ವರ್ಷದೊಳಗಿರುವ ಚಿಕ್ಕಮಕ್ಕಳಿಗೆ ಈಗ ಎಂತಹ ಶಿಕ್ಷಣ ದೊರೆಯುತ್ತಿದೆ, ಎಂತಹ ವಾತಾವರಣದಲ್ಲಿ ಬೆಳೆಯುತ್ತಿದ್ದಾರೆಂಬುದನ್ನು ವರ್ಣನೆ ಮಾಡುವುದಕ್ಕೇ ಸಾಧ್ಯವಿಲ್ಲ. ಅದರಲ್ಲಿಯೂ ಗ್ರಾಮಾಂತರಗಳಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸವಿರುವುದಿಲ್ಲ. ಅಂಥವರು ಮಕ್ಕಳಿಗೆ ಯಾವರೀತಿ ಶಿಕ್ಷಣಕೊಡಬಲ್ಲರು ? ಹಳ್ಳಿಗಳಲ್ಲಿ ಯಾವ ಬೀದಿಯಲ್ಲಿ ನೋಡಲಿ ಅವರು ಆಡುವ ಅವಾಚ್ಯ ಶಬ್ದಗಳು, ಕೊಳಕುತನ, ಮಕ್ಕಳ ಸ್ಥಿತಿ, ಅವರ ಮಟ್ಟ ಇವುಗಳನ್ನೂ ಅವರು ಬೆಳೆಯುವ ರೀತಿನೀತಿಗಳನ್ನೂ ನೋಡಿದರೆ ಹೆದರಿಕೆಯಾಗುತ್ತದೆ! ಆರು ವರ್ಷದೊಳಗಿನ ಮಕ್ಕಳಿಗೆ ಮುಂದೆ ನರ್ಸರಿ ಸ್ಕೂಲುಗಳನ್ನು ಮಾಡಿ, ಪ್ರತಿಹಳ್ಳಿಯಲ್ಲಿಯೂ ಏರ್ಪಾಡುಮಾಡಿ ಇವಕ್ಕೆ ಬೇಕಾದ ಉಪಾಧ್ಯಾಯರುಗಳಿಗೆ ಸರಿಯಾಗಿ ಶಿಕ್ಷಣ ಕೊಟ್ಟು ತನ್ಮೂಲಕ ಮಕ್ಕಳ ಶಿಕ್ಷಣಕ್ಕೆ ಏರ್ಪಾಡು ಮಾಡಿದರೆ ನಿಜವಾಗಿಯೂ ನಮ್ಮ ದೇಶವನ್ನು ಮುಂದೆ ತಂದ ಹಾಗಾಗುತ್ತದೆ. ಕಾಲೇಜುಗಳಿಗೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದೀರಿ; ಅದಕ್ಕೆ ಬದಲು ಪ್ರತಿಹಳ್ಳಿಯಲ್ಲಿಯೂ ನರ್ಸರಿ ಸ್ಕೂಲುಗಳನ್ನು ಪ್ರಾರಂಭಮಾಡಿ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಏನು ಅನುಭವವುಂಟಾಗುತ್ತದೆಯೋ ಅದರಿಂದ ಅವರ ಮಾನಸಿಕ ಬೆಳವಣಿಗೆಗೆ ಬಹಳ ಅನುಕೂಲವಾಗುತ್ತದೆ. ದೇಶದಲ್ಲಿ ಸರಿಯಾದ ನಾಗರಿಕ ಪ್ರಜೆಗಳನ್ನು ತಯಾರು ಮಾಡಿದ ಹಾಗಾಗುತ್ತದೆ. ಆದುದರಿಂದ ಸರ್ಕಾರದವರು ಈಗಿರುವ ನರ್ಸರಿ ಸ್ಕೂಲುಗಳನ್ನು ಮುಂದುವರಿಸಬೇಕಲ್ಲದೆ ಪ್ರತಿಹಳ್ಳಿಯಲ್ಲಿಯೂ ಈ ಸ್ಕೂಲುಗಳನ್ನು ಕಡ್ಡಾಯವಾಗಿ ಏರ್ಪಾಡು ಮಾಡಿದರೆ, ಅದು ನಿಜವಾಗಿಯೂ ಸರಿಯಾದ ಯೋಜನೆಯಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಇಂಟರ್‌ಮೀಡಿಯೇಟ್ ಕಾಲೇಜುಗಳನ್ನು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿ ಅವುಗಳನ್ನು ವಿದ್ಯಾ ಇಲಾಖೆಯ ಡೈರೆಕ್ಟರವರ ಆಡಳಿತಕ್ಕೆ ವಹಿಸಬೇಕೆಂದಿದೆ. ಸರ್ಕಾರದ ಜವಾಬ್ದಾರಿ ಹೈಸ್ಕೂಲುವರೆಗೇ ಸಾಕು; ಸರ್ಕಾರ ಮಕ್ಕಳನ್ನು ಹೈಸ್ಕೂಲು ವಿದ್ಯಾಭ್ಯಾಸ ಪೂರೈಸುವವರೆಗೆ ಸರಿಯಾಗಿ ತಯಾರು ಮಾಡುವ ಜವಾಬ್ದಾರಿ ವಹಿಸಿದರೆ ಸಾಕು. ಈಗಿರುವಂತೆ ಸರ್ಕಾರದಿಂದ ಕೊಡತಕ್ಕ ಗ್ರಾಂಟು ಮತ್ತು ಸಾರ್ವಜನಿಕರು ಕೊಡತಕ್ಕ ಹಣ ಇವುಗಳಿಂದ ಇಂಟರ್‌ಕಾಲೇಜುಗಳನ್ನು ಮತ್ತು ವಿಶ್ವವಿದ್ಯಾನಿಲಯವನ್ನು ಮುಂದುವರಿಸಿಕೊಂಡು ಬರಲಿ. ಹೆಚ್ಚು ಹಣವನ್ನು ಪ್ರೈಮರಿ ಮತ್ತು ನರ್ಸರಿ ದರ್ಜೆಗಳ ಶಿಕ್ಷಣಕ್ಕೆ ಸರ್ಕಾರದವರು ಖರ್ಚುಮಾಡಬೇಕು. ಇದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ನೇರವಾಗಿ ಅವರು ವಹಿಸಿಕೊಳ್ಳುವುದು ಬೇಡ.

Mr. SPEAKER.— The Hon'ble Member has got only one minute more.

ಶ್ರೀ ಟಿ. ಸಿ. ಬಸಪ್ಪ.—ಹಣಕಾಸಿನ ವಿಚಾರ ಮಾತನಾಡುತ್ತಾ ಅನೇಕರು ತೆರಿಗೆಗಳನ್ನು ಹೆಚ್ಚು ಮಾಡುವ ಮತ್ತು ವಿಧಿಸುವ ವಿಚಾರವನ್ನು ಹೇಳಿದ್ದಾರೆ. ಅದನ್ನು ವಿಶದೀಕರಿಸಲು ಹೋಗುವುದಿಲ್ಲ. ಎಲ್ಲ ಸುಧಾರಣೆಗಳೂ ಪ್ರಯೋಗಗಳಾಗಿವೆ. ಈಬಗ್ಗೆ ಮೊದಲು ಕೆಲವು ರೆಸಿಡೆಂಷಿಯಲ್ ಸ್ಕೂಲುಗಳನ್ನು ಪ್ರಾರಂಭಿಸುವ ವಿಚಾರ ಯೋಚನೆ ಮಾಡುವುದು ಒಳ್ಳೆಯದು. ಈ ಸುಧಾರಣೆಯನ್ನು ಸರ್ಕಾರದವರು ಜಾರಿಗೆ ತರಬೇಕೆಂದಿದ್ದಾರೆ. ಮೊದಲು ಕೆಲವುಕಡೆ, ತಾಲ್ಲೂಕಿಗೊಂದು ಕಡೆ ಅಥವಾ ಡಿಸ್ಟ್ರಿಕ್ಟಿಗೊಂದು ಕಡೆ ರೆಸಿಡೆಂಷಿಯಲ್ ಮಿಡ್ಲ್‌ಸ್ಕೂಲು, ಹೈಸ್ಕೂಲುಗಳನ್ನು ಏರ್ಪಾಡುಮಾಡಿ ಅವಕ್ಕೆ ನೂರಾರು ಎಕರೆ ಜಮೀನನ್ನು ಕೊಟ್ಟು ಮೊದಲು ಪ್ರಯೋಗ ಪರೀಕ್ಷೆಮಾಡಲಿ, ಇಂಗ್ಲೆಂಡಿನಲ್ಲಿ ಪಬ್ಲಿಕ್ ಹೈಸ್ಕೂಲುಗಳನ್ನು ಮಾಡಿದಹಾಗೆ ಗ್ರಾಮಾಂತರ ಪ್ರದೇಶಗಳಲ್ಲ ಮಾಡಲಿ. ಅಲ್ಲಿ ಯಶಸ್ವಿಯಾದ ಮೇಲೆ ಇತರಕಡೆ ಜಾರಿಗೆ ತನ್ನಿ. ಈಗಿರುವ ಬೇಸಿಕ್ ಸ್ಕೂಲುಗಳಲ್ಲಿ ಮೂರು ನಾಲ್ಕು ಬೇಸಿಕ್ ಸ್ಕೂಲುಗಳನ್ನು ನಾನು ನೋಡಿದ್ದೇನೆ. ಅಜ್ಜಂಪುರದ ಬಳಿ ನಾಲ್ಕೈದು ಸ್ಕೂಲುಗಳಿವೆ. ಅಲ್ಲಿ ಇರುವ ಚರಕಗಳು ಪೂರೆ ಹಿಡಿದಿವೆ, ಕುಟ್ಟೆ ಹಿಡಿದಿವೆ. ಅಲ್ಲಿ ಕೆಲಸವಾಗುತ್ತಿರುವುದನ್ನು ನೋಡಿದರೆ, ಹುರುಪಿಲ್ಲ, ಸರಿಯಾದ

(ಶ್ರೀ ಟಿ. ಸಿ. ಬಸಪ್ಪ.)

ಉಪಾಧ್ಯಾಯರಿಲ್ಲ, ಕೆಲಸಮಾಡತಕ್ಕ ರೀತಿ ಗೊತ್ತಿಲ್ಲವೆಂದು ಕಾಣುತ್ತದೆ. ಸರಿಯಾಗಿ ಇದನ್ನೆಲ್ಲಾ ಮಾಡಬೇಕಾದರೆ ಹೆಚ್ಚು ಉತ್ಸಾಹಬೇಕು. ಆದುದರಿಂದ ಇಡೀ ಸಂಸ್ಥಾನದಲ್ಲಿ ಇಂಗ್ಲೆಂಡಿನಲ್ಲಿ ಪಬ್ಲಿಕ್ ಸ್ಕೂಲುಗಳಿರುವಂತೆ ಕೆಲವುಕಡೆ ರೆಸಿಡೆನ್ಷಿಯಲ್ ಸ್ಕೂಲುಗಳನ್ನು ಏರ್ಪಾಡುಮಾಡಿ, ಅದರ ಸಾಧಕಬಾಧಕಗಳನ್ನು ಯೋಚನೆಮಾಡಿ ಆಮೇಲೆ ಸುಧಾರಣೆಗಳೆಲ್ಲವನ್ನೂ ಜಾರಿಗೆ ತರುವ ಅಂಶವನ್ನು ಯೋಚಿಸಬಹುದೆಂದು ನನ್ನ ಅಭಿಪ್ರಾಯ.

2-30 P. M.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಅಧ್ಯಕ್ಷರೆ, ಈಗಾಗಲೇ ಬಹಳ ಜನ ಮಾನ್ಯ ಸದಸ್ಯರುಗಳು ಈ ವಿದ್ಯಾಸುಧಾರಣಾ ವರದಿಯ ಬಗ್ಗೆ ಮಾತನಾಡಿರುತ್ತಾರೆ. ಅನೇಕರು ಅನೇಕ ಉಪಯುಕ್ತ ಸಲಹೆಗಳನ್ನು ಮಾಡಿದ್ದಾರೆ. ಹಾಗೆ ಅವರೆಲ್ಲರೂ ದೀರ್ಘವಾಗಿ ಇದನ್ನು ಪ್ರಸ್ತಾಪಮಾಡಿರುವುದು ಕೇವಲ ದೇಶದ ಹಿತದೃಷ್ಟಿಯಿಂದಲೇ ಎಂದು ನಾನು ಭಾವಿಸುತ್ತೇನೆ. ಈಗ ನಮ್ಮಲ್ಲಿ ಜಾರಿಯಲ್ಲಿರತಕ್ಕ ವಿದ್ಯಾಭ್ಯಾಸದ ಕ್ರಮ ಸರಿಯಾಗಿಲ್ಲವೆಂದೂ, ಇದನ್ನು ನಮ್ಮ ದೇಶದ ಸನ್ನಿವೇಶಕ್ಕೆ ತಕ್ಕಹಾಗೆ ಬದಲಾವಣೆ ಮಾಡಬೇಕೆಂದೂ ಸುಮಾರು 1947ರಿಂದಲೂ ಅನೇಕ ದೊಡ್ಡದೊಡ್ಡ ಮಹನೀಯರು ಒಂದು ಒತ್ತಾಯವನ್ನು ಸರ್ಕಾರದವರಮೇಲೆ ಹಾಕುತ್ತಲೇ ಬಂದಿದ್ದಾರೆ. ಅದನ್ನು ಸರ್ಕಾರದವರು ಅರಿತು, ಹಾಗೆ ಒಂದು ಬದಲಾವಣೆ ಮಾಡುವುದಕ್ಕೆ ಈಗ ಸಕಾಲವಾಗಿರುತ್ತೆಂದು ಭಾವಿಸಿ, ಈ ಬಗ್ಗೆ ಒಂದು ವಿದ್ಯಾ ಸುಧಾರಣಾ ಸಮಿತಿಯನ್ನೂ ಕಳೆದ ವರ್ಷ ನೇಮಕ ಮಾಡಿದರು. ಹಾಗೆ ಸರ್ಕಾರದವರಿಂದ ನೇಮಿಸಲ್ಪಟ್ಟ ಸಮಿತಿಯವರು ಬಹಳ ಸ್ವಲ್ಪಕಾಲದಲ್ಲೇ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ, ಅನಂತರ ಅವರು ತಯಾರಿಸಿರತಕ್ಕಂಥ ಒಂದು ವರದಿಯನ್ನು ಸರ್ಕಾರದವರು ಇಂದು ನಮ್ಮ ಮುಂದಿಟ್ಟಿದ್ದಾರೆ. ಈ ರಿಪೋರ್ಟಿನ ಬಗ್ಗೆ ಅನೇಕ ಮಹನೀಯರು ಅನೇಕ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ ಈ ಬಗ್ಗೆ ಸರ್ಕಾರದವರು ಸಂಸ್ಥಾನಾಮಳೆ ಉಪನ್ಯಾಸಗಳನ್ನೂ ಸಭೆಗಳನ್ನೂ ಏರ್ಪಡಿಸಿ, ಆ ಮೂಲಕ ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡಿದ್ದಾರೆ. ಮಂತ್ರಿಮಂಡಲದಲ್ಲಿ ಕೂಡ ಈ ಬಗ್ಗೆ ಚರ್ಚೆಗಳು ನಡೆಸಲ್ಪಟ್ಟಿರುತ್ತವೆ. ಇಷ್ಟೆಲ್ಲವೂ ಆದಬಳಿಕ ಈಗ ಈ ವರದಿಯು ನಮ್ಮ ಮುಂದೆ ಬಂದಿರುತ್ತದೆ. ಆದುದರಿಂದ ನಾವೀಗ ಇದರ ಬಗ್ಗೆ ಮುಖ್ಯವಾಗಿ ಆಲೋಚನೆ ಮಾಡಬೇಕಾದದ್ದು ಒಂದು ವಿಷಯವಿದೆ. ಅದು ಯಾವುದೆಂದರೆ ಈಗ ನಮ್ಮಮುಂದೆ ಬಂದಿರತಕ್ಕ ಸುಧಾರಣೆಯಲ್ಲಿ ಅಡಕವಾಗಿರತಕ್ಕ ಅಂಶಗಳನ್ನು ಒಪ್ಪಿಕೊಂಡು ನಾವು ಇದನ್ನು ಜಾರಿಗೆ ತರುವುದು, ಇಲ್ಲವೇ ಇದರಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಬೇಕಾದದ್ದು ಅಗತ್ಯವೇ ಎನ್ನುವ ಅಂಶವನ್ನು ಆಲೋಚಿಸತಕ್ಕದ್ದು ಬಹಳ ಮುಖ್ಯವಾದದ್ದು. ನಾನು ಈ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಳ್ಳುವ ಮುನ್ನ ತಮ್ಮಮುಂದೆ ನಮ್ಮ ರಾಜ್ಯಾಂಗದ ವಿಧಿಯಲ್ಲಿ ಆರ್ಟಿಕಲ್ 45ರಲ್ಲಿ ಏನು ಹೇಳಿರುತ್ತದೆಯೆಂಬ ಅಂಶವನ್ನು, ಇಡಬಯಸುತ್ತೇನೆ, ಆ ಆರ್ಟಿಕಲ್ 45ರಲ್ಲಿ ಹೀಗೆ ಹೇಳಿದೆ—

"Article 45.—The State shall endeavour to provide, within a period of ten years from the commencement of this Constitution, for free and compulsory education for all children until they complete the age of fourteen years."

'ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನಲ್ಲೇನೇ ಇದನ್ನು ಹೇಳಿರಬಹುದು, ಆದರೆ ಹಾಗೆ ರಾಜ್ಯಾಂಗದ ವಿಧಿಯಲ್ಲಿ ಹೇಳಿರುವುದನ್ನೆಲ್ಲಾ ನಾವು ಪರಿಪಾಲಿಸಿಕೊಂಡು ಬಂದರೂ ಬರಬಹುದು, ಇಲ್ಲವೇ ಅವುಗಳನ್ನು ಬದಲಾವಣೆ ಮಾಡಿದರೂ ಮಾಡಬಹುದು, ಇಲ್ಲವೇ ಬಿಟ್ಟರೂ ಬಿಡಬಹುದು' ಎಂದು ಕೆಲವರು ಹೇಳಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಇದನ್ನು ಅವರು ನಮ್ಮಮೇಲೆ ಬಲವಂತದಿಂದಲೇ ಹಾಕಿದ್ದಾರೆಂದು ತಿಳಿಯುತ್ತೇನೆ. ಈ ಆರ್ಟಿಕಲ್ 45ರಲ್ಲಿ ಹೇಳಿರತಕ್ಕದ್ದು ಬಹಳ ಮುಖ್ಯವಾದದ್ದು. ಇದನ್ನು ತಿಳಿದುಕೊಂಡೇ ಅನೇಕ ಮಹನೀಯರು ದೇಶದಲ್ಲಿರತಕ್ಕ ಎಲ್ಲಾ ಮಕ್ಕಳಿಗೂ ಅವರ 14ನೆಯ ವಯಸ್ಸಿಗೆ ಅವರು ಬರುವತನಕ ಅವರೆಲ್ಲರಿಗೂ ಕಡ್ಡಾಯವಾದ ಮತ್ತು ಉಚಿತವಾದ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಹೇಳಿದ್ದಾರೆ. ಈಗ ನಾನು ಈ ಅಂಶವನ್ನು ಏತಕ್ಕಾಗಿ ಇಷ್ಟು ಒತ್ತಾಯವಾಗಿ ಹೇಳುತ್ತಿದ್ದೇನೆಂದರೆ ಈಗ ಈ ವರದಿಯಲ್ಲಿ ಪ್ರಿಪ್ರೈಮರಿ ಎಜ್ಯುಕೇಷನ್ನಿನ ಬಗ್ಗೆ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಈ ಪ್ರಾಥಮಿಕ ವಿದ್ಯಾಭ್ಯಾಸದ ಮುನ್ನ ಎಲ್ಲಾ ಮಕ್ಕಳಿಗೂ 3 ವರ್ಷದಿಂದ 6 ವರ್ಷದ ವಯಸ್ಸಿನೊಳಗಿರತಕ್ಕ ಮಕ್ಕಳಿಗೆಲ್ಲಾ ನರ್ಸರಿ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು ಅತ್ಯಗತ್ಯವಾದುದೆಂದೂ ಮತ್ತು ಅದನ್ನು ಕೊಡತಕ್ಕದ್ದೂ ಒಂದು ಮುಖ್ಯ ಕರ್ತವ್ಯವೆಂದೂ ಈ ಸಮಿತಿಯವರೇ ಒಪ್ಪಿಕೊಂಡಿದ್ದಾರೆ. ಈಗ ವಿದ್ಯಾಭ್ಯಾಸದ ಖರ್ಚೆಲ್ಲವನ್ನೂ ಖಾಸಗೀ ಜನರ ಮೇಲೆಯೇ ಹಾಕಬೇಕೆಂದು ಹೇಳಿದ್ದಾರೆ. ಆದರೆ ಹಾಗೆ ಯಾರುಯಾರು ಖಾಸಗೀಜನರು ಮುಂದೆ ಬಂದು ಇಂಥ ನರ್ಸರಿ ಸ್ಕೂಲುಗಳನ್ನು ಸ್ಥಾಪನೆ ಮಾಡುತ್ತೇವೆಂದು ತಿಳಿಸಿ, ಅವರು ಸರ್ಕಾರದ ಸಹಾಯ ಅಗತ್ಯವೆಂದು ಅಪೇಕ್ಷಿಸಿದಲ್ಲಿ ಅಂಥವರಿಗೆ ಸರ್ಕಾರದವರು ಒಂದು ಗ್ರ್ಯಾಂಟುರೂಪವಾಗಿ ಸಹಾಯ ನೀಡಬಹುದೆಂದು ಹೇಳಿದ್ದಾರೆ. ಅವರು ಹೀಗೆ ಹೇಳಿರುವುದು ಆ ರಾಜ್ಯಾಂಗದ ವಿಧಿಗೆ ವಿರೋಧವಾಗಿಲ್ಲವೇನು? ಮೇಲೆ ಹೇಳಿರತಕ್ಕ ರಾಜ್ಯಾಂಗದ ವಿಧಿಯಲ್ಲಿ—ಪ್ರತಿಯೊಂದು ದೇಶದಲ್ಲಿಯೂ, ಆಯಾ ದೇಶದಲ್ಲಿರತಕ್ಕ ಎಲ್ಲ ಮಕ್ಕಳಿಗೂ, ಅವರ 14ನೆಯ ವಯಸ್ಸಿನವರೆಗೆ ಅವರಿಗೆಲ್ಲಾ ಉಚಿತವಾದ ಮತ್ತು ಕಡ್ಡಾಯವಾದ ವಿದ್ಯಾಭ್ಯಾಸವನ್ನು ಒದಗಿಸಲೇಬೇಕು, ಇದು ಆಯಾ ದೇಶಗಳಲ್ಲಿರತಕ್ಕ ಸರ್ಕಾರದ ಮುಖ್ಯ ಕರ್ತವ್ಯವೆಂದು ತಿಳಿಸಿರುತ್ತದೆ. ಇದೇ ರೀತಿಯಾಗಿ ಪಾಶ್ಚಿಮಾತ್ಯ ರಾಷ್ಟ್ರಗಳೂ ಮತ್ತು ರಷ್ಯಾದೇಶ ಇವುಗಳೆಲ್ಲವೂ ನಡೆಸಿಕೊಂಡು ಬಂದಿರುತ್ತವೆಯೆಂಬುದು, ಅವುಗಳು ಮಾಡಿಕೊಂಡಿರುವ ಕಾನೂನಿನ ಪರಿಶೀಲನೆಯಿಂದ ವೇದ್ಯವಾಗುತ್ತದೆ. ಆದುದರಿಂದ ಇಲ್ಲಿಯೂ ಸಹ ಅದೇರೀತಿ ನಡೆಸಬೇಕಾದುದು ನಮ್ಮ ಸರ್ಕಾರದ ಮುಖ್ಯ ಕರ್ತವ್ಯವಾಗಿದೆ. ಇದನ್ನೇ ನಮ್ಮ ರಾಜ್ಯಾಂಗದಲ್ಲಿ ಕೂಡ ತಿಳಿಸಿ, ಈ ಒಂದು ಹೊರೆಯನ್ನು ಸರ್ಕಾರದವೇಲೆ ಬಲಾತ್ಕಾರವಾಗಿ ಹಾಕಲಾಗಿದೆ. ಹೀಗೆಲ್ಲಾ

ಇರುತ್ತಿದ್ದಾಗ್ಗೂ ನಮ್ಮ ಸರ್ಕಾರ ಈ ದಿವಸ ಆ ವಿಚಾರಗಳಿಗೊಂದಕ್ಕೂ ಗಮನವನ್ನೇ ಕೊಡದೆ ಈ 3 ವರ್ಷಗಳಿಂದ 6 ವರ್ಷಗಳಗೊಳಗಿರತಕ್ಕ ಹುಡುಗರ ವಿದ್ಯಾಭ್ಯಾಸದ ಖರ್ಚನ್ನು ಸರ್ಕಾರ ವಹಿಸದೆ ಕೈಬಿಟ್ಟಿರ ತಕ್ಕದ್ದು ಬಹಳ ಶೋಚನೀಯವಾದ ವಿಚಾರ. ಈ ವಿಚಾರದಲ್ಲಿ ಸರ್ಕಾರದವರು "ಅಗತ್ಯವಿದ್ದರೆ ನಾವೊಂದು ಗ್ರಾಂಟ್ ಕೊಡುತ್ತೇವೆ" ಎಂದೂ ಮತ್ತು "6 ವರ್ಷ ವಯಸ್ಸಿಗೆ ಮೇಲ್ಪಟ್ಟ 12 ವರ್ಷ ವಯಸ್ಸಿನೊಳಗಿರುವ ಎಲ್ಲ ಬಾಲಕ-ಬಾಲಕಿಯರಿಗೂ ಬಲಾತ್ಕಾರ ವಿದ್ಯಾಭ್ಯಾಸ ನೀಡುತ್ತೇವೆ" ಎಂದೂ ತಿಳಿಸಿದ್ದಾರೆ. ಇನ್ನು ಈ 3 ವರ್ಷಗಳಿಂದ 6 ವರ್ಷಗಳ ವಯಸ್ಸಿನಲ್ಲಿರುವ ಬಾಲಕರ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಖಾಸಗಿ ಜನರಮೇಲೆ ಹಾಕಿರುತ್ತಾರೆ. ಆದರೆ ಎಲ್ಲೋ ಅಲ್ಲಲ್ಲಿ ಪಟ್ಟಣಗಳಲ್ಲಿರತಕ್ಕ ಅಲ್ಪಸ್ವಲ್ಪ ಮಕ್ಕಳಿಗೆ ಹಾಗೊಂದುವೇಳೆ ಈ ಸೌಲಭ್ಯ ದೊರಕಿದಾಗ್ಗೂ ಇನ್ನುಳಿದ ದೇಶಾದ್ಯಂತವೂ ಇರತಕ್ಕ ಮಕ್ಕಳ ಗತಿಯೇನು ? ಯಾವಾಗ ಆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಇದು ಸಾಧ್ಯವಾಗುವುದಿಲ್ಲವೋ ಆಗ ಅವರಿಗೆ ಆ ಚಿಕ್ಕಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಅವಕಾಶವೇ ಇಲ್ಲದಂತಾಗಿ, ಆ ಹುಡುಗರೆಲ್ಲಾ ಪೋಲಿಗಳಾಗಿ ಹೋಗಿಬಿಡುತ್ತಾರೆ. ಯಾವಾಗಲೂ ಚಿಕ್ಕವಯಸ್ಸಿನಲ್ಲಿರತಕ್ಕ ಮಕ್ಕಳ ವಿಚಾರದಲ್ಲಿ ಹಾಗೆ ಅಶ್ರದ್ಧೆ ಮಾಡಬಾರದು. ಅವರೆಲ್ಲರೂ ಒಂದು ಒಳ್ಳೆಯ ಗುಣದಲ್ಲಿ ಇದ್ದುಕೊಂಡು, ಒಂದು ಒಳ್ಳೆಯ ದಾರಿಯಲ್ಲಿ ಹೋಗುವಂತೆ ಮಾಡಿದರೆಯೇ ಅವರು ಮುಂದಕ್ಕೆ ದೇಶದ ಸತ್ಪ್ರಜೆಗಳಾಗುವುದಕ್ಕೆ ಸಾಧ್ಯವಿದೆ. ಆದಕಾರಣ ಅಷ್ಟಾಗುವುದಕ್ಕೆ ಈ ನರ್ಸರಿ ಪಾಠಶಾಲೆಗಳು ತುಂಬ ಅಗತ್ಯ. ಆದರೆ ಇದಕ್ಕೆಲ್ಲಾ ದುಡ್ಡು ಹೆಚ್ಚಿಗೆ ಖರ್ಚಾಗುತ್ತದೆ, ಆದ್ದರಿಂದ ಈ ನರ್ಸರಿ ಸ್ಕೂಲುಗಳೇ ಬೇಡವೆಂದು ಹೇಳುವುದಾದರೆ ಗ್ರಾಮಾಂತರ ವಾಸಿಗಳಾಗಿರುವ ಮಕ್ಕಳೆಲ್ಲಾ ಪೋಲಿಯಾಗಿ ಹೋಗಿಬಿಡುತ್ತಾರೆ. ಹಳ್ಳಿಗಳಲ್ಲಿ ಅವರಿಗೆ ದನಕಾಯುವ ಯೋಗ್ಯತೆ ಕೂಡ ಇರುವುದಿಲ್ಲ. ಹೀಗೆಲ್ಲಾ ಇರುವುದರಿಂದ ನಾವು ಈ ಚಿಕ್ಕವಯಸ್ಸಿನ ಮಕ್ಕಳಿಗೆ ಕೊಡತಕ್ಕ ವಿದ್ಯಾಭ್ಯಾಸದಲ್ಲಿ ಅಶ್ರದ್ಧೆ ತಾಳಿದರೆ ಮುಂದೆ ಎಷ್ಟು ಕಷ್ಟಗಳು ಸಂಭವಿಸುತ್ತವೆ? ಮತ್ತು ನಾವು ನಮ್ಮ ಕರ್ತವ್ಯವನ್ನು ಆ 45ನೆಯ ಆರ್ಟಿಕಲ್‌ನಲ್ಲಿ ಹೇಳಿರುವ ಪ್ರಕಾರ ಪರಿಪಾಲಿಸಿದಂತಾಗುತ್ತದೆಯೇ? "ಹಾಗೆ ನಾವು ಈ ನರ್ಸರಿ ಪಾಠಶಾಲೆಗಳನ್ನು ನಡೆಸುವುದಕ್ಕಾಗುವುದಿಲ್ಲ, ಇವುಗಳನ್ನು ಖಾಸಗಿ ಮುಖಂಡರೇ ನಡೆಸಿಕೊಂಡು ಹೋಗಬೇಕು" ಎಂಬುದಾಗಿ ಈಗ ಸರ್ಕಾರದವರು ಏನು ಹೇಳುತ್ತಿದ್ದಾರೋ ಆರೀತಿ ಈ ನರ್ಸರಿ ಸ್ಕೂಲುಗಳ ಜವಾಬ್ದಾರಿಯನ್ನೆಲ್ಲಾ ಈ ಖಾಸಗಿ ಮುಖಂಡರಮೇಲೆ ಹಾಕುವುದರಿಂದ ಇವರ ವಿದ್ಯಾಭ್ಯಾಸದಮೇಲೆ ಅವರಿಗೆ ಎಷ್ಟರಮಟ್ಟಿನ ಮುತವರ್ಜಿ ಇರಬಹುದು ಎಂಬುದನ್ನು ಈಗಾಗಲೇ ಬಹಳ ಮಟ್ಟಿಗೆ ತಾವೆಲ್ಲರೂ ತಿಳಿದುಕೊಂಡಿರತಕ್ಕವರಾಗಿದ್ದೀರಿ. ಈಗಾಗಲೆ ಅನೇಕ ವಿದ್ಯಾಶಾಲೆಗಳು ಎಲ್ಲೆಲ್ಲಿ ಹೇಗೆ ಸರ್ಕಾರದಿಂದ ಒಂದು ಗ್ರಾಂಟ್ ಪಡೆದುಕೊಂಡು ನಡೆಸಲ್ಪಡುತ್ತಿವೆಯೋ, ಅವುಗಳಲ್ಲೆಲ್ಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬ ತೊಂದರೆಗಳುಂಟಾಗಿವೆ. ಆ ಸ್ಕೂಲುಗಳನ್ನೇ ಈಗ ಅವರಿಗೆ ನಡೆಸುವುದಕ್ಕೆ ಸಾಧ್ಯವಾಗಿಲ್ಲದೆ ಇರುವಾಗ, ಈಗ ಪುನಃ ಹೊಸದಾಗಿ ಮತ್ತಷ್ಟು ಸ್ಕೂಲುಗಳನ್ನು ಎಂದರೆ ಈ ನರ್ಸರಿ ಸ್ಕೂಲುಗಳನ್ನೂ ಅವರೇ ನಡೆಸಿಕೊಂಡು ಹೋಗಬೇಕೆಂದು ಹೇಳುತ್ತಿರುವುದರ ಅರ್ಥವೇ ನನಗೆ ಆಗುತ್ತಿಲ್ಲ. ಇದು ಖಂಡಿತವಾಗಿಯೂ ಆಗದಬದುಕು. ಖಾಸಗಿ ಜನರಿಗೆ ಈ ನರ್ಸರಿ ಪಾಠಶಾಲೆಗಳನ್ನು ತೆರೆಯಲು ಸಾಧ್ಯವೇ ಇರುವುದಿಲ್ಲ. ಆದುದರಿಂದಲೇ ಇದಕ್ಕೆ ಸರ್ಕಾರದವರು ತಮ್ಮ ಮುಖ್ಯ ಗಮನಕೊಡಬೇಕು. ಹೀಗೆ ಅವರು ಇದನ್ನು ಖಾಸಗಿ ಜನರು ನಡೆಸಿಕೊಂಡು ಬರಬೇಕೆಂದು ಹೇಳಿದ್ದರ ಮಾತ್ರದಿಂದಲೇ ಇವರಮೇಲಿದ್ದ ಒಂದು ಮುಖ್ಯ ಜವಾಬ್ದಾರಿ ತಪ್ಪಿದಂತಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ಇವರು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದಂತಾಗುತ್ತದೆ. ಹಾಗೆ ತಾವು ದೇಶದಲ್ಲಿರತಕ್ಕ ಎಲ್ಲ ಮಕ್ಕಳ ಎಂದರೆ 3 ವರ್ಷದ ಮೇಲ್ಪಟ್ಟ 6 ವರ್ಷದ ವಯಸ್ಸಿನೊಳಗಿರತಕ್ಕವರಿಗೆ ಒಂದು ಸರಿಯಾದ ವಿದ್ಯಾವ್ಯವಸ್ಥೆಯನ್ನು ಏರ್ಪಾಡುಮಾಡದೆ ಹೋದರೆ ಅವರು ವಿದ್ಯಾವಿಹೀನರಾಗಿ, ಮುಂದೆ ದೇಶದ ಸತ್ಪ್ರಜೆಗಳಾಗಲು ಸಾಧ್ಯವಿಲ್ಲದಂತಾಗುತ್ತದೆ. ಅವರು ದೇಶದ ಉತ್ತಮ ಪ್ರಜೆಗಳಾಗುವುದಿಲ್ಲ. ಆದುದರಿಂದ ತಾವು ಮುಖ್ಯವಾಗಿ ಆ 45ನೆಯ ಆರ್ಟಿಕಲ್‌ನಲ್ಲಿ ಹೇಳಿರತಕ್ಕ ಅಂಶಗಳಿಗೆ ಪೂರ್ಣಗಮನ ಕೊಡಬೇಕು ಮತ್ತು ಜೊತೆಗೆ ಅವುಗಳನ್ನು ಪಾಲಿಸಬೇಕು. ಅಷ್ಟು ನಿಮ್ಮ ಮುಖ್ಯ ಕರ್ತವ್ಯಗಳು. ಯಾವ ದೇಶದಲ್ಲೇ ಆಗಲಿ ಮಕ್ಕಳಿಗೆ ಅವರು 14ನೆಯ ವಯಸ್ಸಿಗೆ ಬರುವತನಕ ಅವರಿಗೆ ಒತ್ತಾಯವಾಗಿ ಉಚಿತ ವಿದ್ಯಾಭ್ಯಾಸ ನೀಡುವುದು ಆ ದೇಶದ ಸರ್ಕಾರಕ್ಕೆ ಸೇರಿದ್ದು. ಅನಂತರ ಅವರಿಗೆ ಮುಂದಿನ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು ಅವರ ತಂದೆತಾಯಿಗಳ ಕರ್ತವ್ಯ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಆ ಮೂರು ವರ್ಷ ವಯಸ್ಸಿಗಿಂತ ಮೊದಲು ಯಾರು ಆ ಮಕ್ಕಳಿಗೆ ವಿದ್ಯೆ ಕಲಿಸಬೇಕು ?

ಶ್ರೀ ಆರ್. ಅನಂತರಾಮ್.—ಆ ಚಿಕ್ಕ ವಯಸ್ಸಿನಲ್ಲಿ—ಆ ಮಕ್ಕಳಿಗೆಲ್ಲಾ ತಾಯಿಯೇ ಉಪಾಧ್ಯಾಯಿನಿ. ಆಗ ಅವರನ್ನು ಒಂದು ಸರಿಯಾದ ವ್ಯವಸ್ಥೆಯಲ್ಲಿ ಬೆಳೆಸಿಕೊಂಡು ಬರತಕ್ಕದ್ದು ಅವರ ಕರ್ತವ್ಯ. ಅನಂತರ ಮಕ್ಕಳಿಗೆ ಕೊಡತಕ್ಕ ವಿದ್ಯಾಭ್ಯಾಸದ ಜವಾಬ್ದಾರಿ ಸರ್ಕಾರಕ್ಕೆ ಸೇರಿರುತ್ತದೆ. ಆದುದರಿಂದ ಸರ್ಕಾರದವರು ಈ ನರ್ಸರಿ ವಿದ್ಯಾಭ್ಯಾಸಕ್ಕೆ ತಮ್ಮ ಹೆಚ್ಚಿನ ಗಮನ ಕೊಡಬೇಕಾದದ್ದು ಅವಶ್ಯಕವೆಂದು ಹೇಳುತ್ತೇನೆ.

ಆಮೇಲೆ ಪ್ರೈಮರಿ ವಿದ್ಯಾಭ್ಯಾಸದ ವಿಚಾರ ಆಗಲೇ ಹೇಳಿದ್ದೇನೆ. ಇದು ಬಹಳ ಮುಖ್ಯವಾದುದು. ಶ್ರೀ ಬಸಪ್ಪನವರು, ವಿಶ್ವೇಶ್ವರಯ್ಯನವರು ಹೇಳಿರುವ ವಿಷಯ ಹೇಳಿದ್ದಾರೆ. ವಿದ್ಯಾ ಸುಧಾರಣಾ ಸಮಿತಿಯ ವರದಿಯಲ್ಲಿ ಆರರಿಂದ ಹನ್ನೆರಡು ವರ್ಷಗಳವರೆಗೆ ಮಕ್ಕಳಿಗೆ ಬಲಾತ್ಕಾರ ವಿದ್ಯಾಭ್ಯಾಸ ಕೊಡಬೇಕು ಮತ್ತು ಪಾಠಶಾಲೆಗಳು ಸ್ವಲ್ಪವಾಗಿರುವ ಕಡೆ ಹೆಚ್ಚಾಗಿ ತೆರೆಯಬೇಕು ಎಂದು ಹೇಳಿದ್ದಾರೆ. ಮುಖ್ಯವಾಗಿ ಈ ವಿದ್ಯಾಭ್ಯಾಸದ ಕಡೆ ಸರ್ಕಾರ ಹೆಚ್ಚಿನ ಗಮನಕೊಡಬೇಕು. ಇದರಿಂದ, ನಮ್ಮ ಸ್ನೇಹಿತರು ಹೇಳಿದಹಾಗೆ, ಸ್ವಲ್ಪ ಅನುಕೂಲವಾಗುತ್ತದೆ. 14 ವರ್ಷದವರೆಗೆ ಹೆಚ್ಚಿನ ಗಮನ ಕೊಟ್ಟ ನಂತರ ಹೈಸ್ಕೂಲು ವಿದ್ಯಾಭ್ಯಾಸದ ಕಡೆ ಸರಿಯಾಗಿ ಗಮನ ಕೊಡದಿದ್ದರೂ ಪರವಾಗಿಲ್ಲ. ಏಕೆಂದರೆ ಕೆಲವು ಕಡೆ ಪಾಶ್ಚಾತ್ಯ ದೇಶಗಳಲ್ಲಿ, ಬೊಂಬಾಯಿ ಮುಂತಾದ ಕಡೆ ವಿಶ್ವವಿದ್ಯಾನಿಲಯವೆಂದರೆ ಅದಕ್ಕೆ ಬೇಕಾದಷ್ಟು ಕಾಲೇಜುಗಳು ಸೇರಿಕೊಂಡಿವೆ. ಅವು ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತವೆ. ಸಾರ್ವಜನಿಕರು ಸಹಾಯ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಖಾಸಗಿ

(ಶ್ರೀ ಆರ್. ಅನಂತರಾಮನ್.)

ಹೈಸ್ಕೂಲುಗಳೂ ಇವೆ. ಕಟ್ಟಡ ಮುಂತಾದುವನ್ನು ಒದಗಿಸದಿದ್ದರೂ ಖಾಸಗಿ ಸಂಸ್ಥೆಗಳು ಚೆನ್ನಾಗಿ ನಡೆಯುವುದನ್ನು ನೋಡಿದರೆ ಆಶ್ಚರ್ಯವಾಗುತ್ತಿದೆ. ಖಾಸಗಿ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿದ್ದಾರೆ. ನಮ್ಮ ಸಂಸ್ಥಾನದಲ್ಲೂ ಸಹ ಆ ರೀತಿಯಾಗಿ ಸಾರ್ವಜನಿಕರೂ, ಖಾಸಗಿ ಸಂಸ್ಥೆಗಳೂ ವಿದ್ಯಾಭ್ಯಾಸ ಮಾಡಿಸಲು ಪ್ರಯತ್ನ ಮಾಡಬೇಕು. ಈಗ ನ್ಯಾಷನಲ್ ಕಾಲೇಜು ಮುಂತಾದ ಸಂಸ್ಥೆಗಳು ಸಹಾಯ ಮಾಡುತ್ತಿವೆ. ಸರ್ಕಾರದವರು ಇಂಥ ಸಂಸ್ಥೆಗಳವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು ಮತ್ತು ಹೈಸ್ಕೂಲು, ವಿಶ್ವವಿದ್ಯಾನಿಲಯಗಳನ್ನೆಲ್ಲಾ ಖಾಸಗಿ ಸಂಸ್ಥೆಯವರಿಗೆ ವಹಿಸಬೇಕೇ ಹೊರತು ಸರ್ಕಾರ ಅವಕ್ಕಾಗಿ ಹೆಚ್ಚಾಗಿ ಹಣ ಖರ್ಚುಮಾಡ ಬಾರದು. ಏಕೆಂದರೆ ಮೊದಲು ಪ್ರೈಮರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡೋಣ. ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಬೇಕಾದದ್ದು ಸರ್ಕಾರದ ಮುಖ್ಯ ಕರ್ತವ್ಯ. ಆದ್ದರಿಂದ ಹೈಸ್ಕೂಲು, ಕಾಲೇಜುಗಳಿಗೆ ಗ್ರಾಂಟು, ಉತ್ತೇಜನ ಕೊಟ್ಟು ಖಾಸಗಿ ಸಂಸ್ಥೆಯವರು ನಡೆಸುವ ಹೈಸ್ಕೂಲು ಕಾಲೇಜುಗಳಿಗೆ ಸಹಾಯಮಾಡಬೇಕು.

ಇನ್ನೊಂದು ವಿಚಾರ. ಪ್ರೈಮರಿ ವಿದ್ಯಾಭ್ಯಾಸವನ್ನು ಬೆಳಗಿನ ಹೊತ್ತು ನಡೆಸಬೇಕು, ಮಧ್ಯಾಹ್ನ ಮಕ್ಕಳಿಗೆ ತೊಂದರೆ, ಸಾಮಾನ್ಯವಾಗಿ ಎಳೆಯ ಮಕ್ಕಳು 11ರಿಂದ 5 ಗಂಟೆಯವರೆಗೆ ಸ್ಕೂಲಿನಲ್ಲಿದ್ದರೆ ಚುರುಕಾಗಿರುವುದಿಲ್ಲ, 11 ಗಂಟೆಗೆ ಊಟಮಾಡಿ ಶಾಲೆಗೆ ಬಂದರೆ ನಿದ್ರೆಮಾಡುತ್ತವೆ, ಮಕ್ಕಳು ಸಾಮಾನ್ಯವಾಗಿ ಮಧ್ಯಾಹ್ನ ನಿದ್ದೆಮಾಡುವುದು ವಾಡಿಕೆ ಎಂದು ಸಮಿತಿಯವರು ಯೋಚನೆ ಮಾಡಿ ಪ್ರೈಮರಿ ಶಾಲೆಗಳನ್ನು ಪ್ರಾತಃಕಾಲ ನಡೆಸಬೇಕೆಂದು ಹೇಳಿದ್ದಾರೆ. ಇದು ಸೂಕ್ತವಾಗಿದೆ. ಮಧ್ಯಾಹ್ನ ತಂದೆ ತಾಯಿಗಳಿಗೆ ಸಹಾಯಮಾಡಬಹುದು. ಬೆಳಗಿನ ಹೊತ್ತು ಪಾಠ ಮಾಡಿ, ಬೇಕಾದರೆ ಸಾಯಂಕಾಲ ಒಂದು ಗಂಟೆ ಕಾಲ ಶಾಲೆ ನಡೆಸಲಿ, ಮಧ್ಯಾಹ್ನ ಕೂಡದು, ಇಷ್ಟು ಹೇಳಿ ಸಮಿತಿಯವರು ಚೆನ್ನಾಗಿ ವರದಿಮಾಡಿದ್ದಾರೆ, ಈ ಸುಧಾರಣೆಗಳಲ್ಲಿ ಎಷ್ಟನ್ನು ಯಾವ ರೀತಿಯಲ್ಲಿ ಜಾರಿಗೆ ಕೊಡಬಹುದು ಎಂಬುದನ್ನು ನೋಡಿ ಅದರಂತೆ ಮಾಡಬಹುದು ಎಂದು ಸಲಹೆ ಮಾಡುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ನಾನು ಒಂದು ಹೊಸಯುಗದ ಆರಂಭವನ್ನು ಮಾಡಬೇಕೆಂದಿದ್ದೇನೆ. ಸ್ವರಾಜ್ಯ ಬಂದಮೇಲೆ ನಮ್ಮ ಶಿಕ್ಷಣದ ಬೆಳವಣಿಗೆಗೆ ನಮ್ಮ ದೇಶದ, ನಮ್ಮ ಧರ್ಮದ ರೂಪುರೇಖೆಗಳಿಗನುಸಾರವಾಗಿ ಮುಂದುವರಿಯಲು, ನಮ್ಮಲ್ಲಿ ಒಂದು ನವ ಚೈತನ್ಯವನ್ನುಂಟುಮಾಡಲು ರಾಷ್ಟ್ರದ ತಳಹದಿಗಾಗಿ ಈ ಒಂದು ವಿದ್ಯಾ ಸುಧಾರಣೆಯನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ ವಿದ್ಯಾಭ್ಯಾಸದ ಸುಧಾರಣಾ ಸಮಿತಿಯು ಒಂದು ವರದಿಯನ್ನು ಸಲ್ಲಿಸಿದೆ. ಈ ಸುಧಾರಣೆಗಳಲ್ಲಿ ಎಷ್ಟರ ಮಟ್ಟಿನ ಕ್ರಾಂತಿಕಾರಕವಾದ, ಮೂಲಭೂತವಾದ ಬದಲಾವಣೆಗಳಾಗಿವೆಯೆಂಬುದನ್ನು ಪರಿಶೀಲಿಸಬಹುದು. ಈಗ ನಮ್ಮ ದೇಶದಲ್ಲಿರುವ ವಿದ್ಯಾಭ್ಯಾಸ ಕ್ರಮವನ್ನು ನಮ್ಮ ದೇಶದ ಸ್ಥಿತಿಗತಿ ಮತ್ತು ಜೀವನದ ರೂಪುರೇಖೆಗನುಗುಣವಾಗಿ ಎಷ್ಟರಮಟ್ಟಿಗೆ ಬದಲಾವಣೆ ಮಾಡಬೇಕು, ಹೇಗೆ ಮಾಡಿದರೆ ಒಂದು ನೀತಿ ಕಲಿಸಿ ಉತ್ತೀರ್ಣರಾಗಬಹುದು ಎಂಬ ಅಂಶ ಈ ವರದಿಯಲ್ಲಿ ಅಡಗಿದೆ. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ದೇಶದ ಪರಿಸ್ಥಿತಿಯಲ್ಲಿ ಈ ದಿವಸ ಶೇಕಡ 59ರಷ್ಟು ಮಕ್ಕಳಿಗೆ, ಆರರಿಂದ ಹನ್ನೆರಡು ವರ್ಷದವರಿಗೆ ಯಾವ ವಿದ್ಯಾಭ್ಯಾಸಕ್ಕೂ ಸ್ಕೂಲೇ ಇಲ್ಲ ಎಂದು ಈ ವರದಿಯಿಂದ ಖಚಿತವಾಗಿ ಗೊತ್ತಾಗುತ್ತದೆ. ಹೊರ ದೇಶದ ಲಿಟರೆಸಿ ನೋಡಿದರೂ ಕೂಡ ಶೇಕಡ 50ರಷ್ಟಕ್ಕಿಂತ ಜಾಸ್ತಿಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದ ಪರಿಸ್ಥಿತಿಗನುಸಾರವಾಗಿ best of the bad job ಎಂದು ಹೇಳುವಂತೆ ಯಾವ ರೀತಿಯಲ್ಲಿ ಒಂದು ವಿದ್ಯಾಭ್ಯಾಸ ಸುಧಾರಣೆ ಮಾಡಬೇಕು, apart from the other conditions ವಿದ್ಯಾರಣ್ಯರ ರಾಜ್ಯ, ಸುವರ್ಣ ವೃಷ್ಟಿ ಸುರಿಸಿದ ರಾಜ್ಯ ಎಂಬ ಹೈ ಐಡಿಯಲ್‌ಗೆ ಅನುಸಾರವಾಗಿ ಎಷ್ಟುಮಟ್ಟಿಗೆ ಸುಧಾರಣೆ ಮಾಡಬೇಕು ಎಂಬುದನ್ನು ಮನಸ್ಸಿನಲ್ಲಿಡಬೇಕು. ಮೊನ್ನೆ ನಮ್ಮ ನಾಯಕರು 'ಹಣ ಎಷ್ಟೇ ಬೇಕಾದರೂ ದೊರೆಯುವುದು, ಆದರೆ ಮುಖ್ಯವಾದ ಐಡಿಯಲ್ ಸೂಚಿಸಿ' ಎಂದು ಹೇಳಿದರು. ಆಗ ಬಹಳ ಸಂತೋಷವಾಯಿತು. ನಾವು ಫಸ್ಟ್‌ಕ್ಲಾಸಿನಲ್ಲಿ ಬರಬೇಕೆಂದು ಪ್ರಯತ್ನ ಮಾಡಿದರೆ ಥರ್ಡ್‌ಕ್ಲಾಸಿನಲ್ಲಾದರೂ ಬರಬಹುದು, ಪ್ರಭಾವಶಾಲಿಗಳಿಂದ ಒಳ್ಳೆಯ ಭಾವನೆ ಹೊರಬೀಳಬಹುದು ಎಂದು ಮಾನ್ಯ ನಾಯಕರು ಹಾಗೆ ಹೇಳಿರಬಹುದು. ಇದರಲ್ಲಿ ಮತ್ತೊಂದು ರಹಸ್ಯ, ಮಹಾತ್ಮ ಗಾಂಧಿಯವರು ಪ್ರೀತಿಸುತ್ತಿದ್ದ ಬೇಸಿಕ್ ಎಜುಕೇಷನ್ ಪ್ರಕಾರ ವಿದ್ಯಾಭ್ಯಾಸ ನಡೆಯಬೇಕು, ಮಕ್ಕಳು ಕೈಗಾರಿಕೆ ಮಾಡಿ ಸ್ವಾವಲಂಬನವನ್ನು ಪಡೆಯುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು, ಅದರಿಂದ ಬರುವ ಉತ್ಪತ್ತಿಯಲ್ಲೇ ಉಪಾಧ್ಯಾಯರಿಗೆ ಸಂಬಳ ಕೊಡುವಂತಾಗಬೇಕು, ಹುಡುಗರಲ್ಲಿ ಕೋಮುವಾರು ಭಾವನೆ ಅಳಿಯಬೇಕು, ಇಂದಿನ ಮಕ್ಕಳು ಅಲ್ಪ ಸಂಖ್ಯಾತರು ಮುಂದೆ ರಾಷ್ಟ್ರದ ನಾಯಕರಾಗಬೇಕು ಎಂಬ ಆಸೆಯಿರಬಹುದು. ಹಾಗೆ ಆ ಅಭಿಪ್ರಾಯವಿದ್ದರೆ ಅದೂ ಕೂಡ ಸರಿಯಾಗಿದೆ.

ಆಮೇಲೆ ಸೇವಾದಳದ ವಿಚಾರದಲ್ಲಿ ಈ ವರದಿಯಲ್ಲಿ ಹೆಚ್ಚಾಗಿ ಹೇಳಿದ್ದಾರೆ. ಇದು ನಮ್ಮ ದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ವೃದ್ಧಿಯಾಗಬೇಕು. ಆ ವಿಷಯವನ್ನು ಈಗ ಹೆಚ್ಚಾಗಿ ಪ್ರಸ್ತಾಪಿಸಬೇಕಾಗಿಲ್ಲ. ಬೇಸಿಕ್ ಎಜುಕೇಷನ್ ವಿಚಾರ ಕೂಡ ನಮೂದಿಸಲ್ಪಟ್ಟಿದೆ. ಅದಕ್ಕೆಷ್ಟು ಪ್ರಯತ್ನ ನಡೆಯಬೇಕೋ ಅಷ್ಟು ನಡೆದಿಲ್ಲ. ನಮ್ಮ ದೇಶದಲ್ಲಿ ಈ ದಿವಸ ಪ್ರೈಮರಿ ಶಾಲೆಗಳಿಂದ ಕಾಲೇಜುಗಳವರೆಗೆ ವಿದ್ಯಾ ಸಂಸ್ಥೆಗಳನ್ನೇರ್ಪಡಿಸಿದ್ದೇವೆ. ಮೂರರಿಂದ ಆರು ವರ್ಷದವರೆಗೆ ಹೀಗೆ ಮಾಡಿ, ಆರರಿಂದ ಹನ್ನೆರಡು ವರ್ಷದವರೆಗೆ ಹೀಗೆ ಮಾಡಿ ಎಂದು ಹೇಳಿದ್ದೇವೆ. ಆದರೆ ಹಾಗೆ ಹೇಳುವಾಗ ಹುಟ್ಟಿದ ಮಕ್ಕಳಿಗೆ ಅನ್ನ ಹಾಕುವುದಕ್ಕೇ ಗತಿಯಿಲ್ಲದಿರುವ ಅನೇಕರಿದ್ದಾರೆ. ಆದ್ದರಿಂದ ಸ್ವರಾಜ್ಯ ಬಂದಿರುವಾಗ ಮೊದಲು ಪ್ರೈಮರಿ ವಿದ್ಯಾಭ್ಯಾಸಕ್ಕೆ ತಕ್ಕಷ್ಟು ಪ್ರೋತ್ಸಾಹ ಕೊಡಬೇಕು. ಕೆಲವು ಕಡೆ ಮೂರರಿಂದ ಆರು ವರ್ಷಗಳವರೆಗೆ ಮಕ್ಕಳನ್ನು ನರ್ಸರಿ ಸ್ಕೂಲುಗಳಿಗೆ ಕಳುಹಿಸಲು ಅಂಥ ಸ್ಕೂಲುಗಳಿಲ್ಲದೆ ಅಥವಾ ಅನುಕೂಲವಿಲ್ಲದೆ ಬಿಟ್ಟಿರಬಹುದು. ಆದರೂ ಪ್ರೈಮರಿ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ಎಲ್ಲರಿಗೂ ಕೊಡಲು ಅನುಕೂಲ ಕಲ್ಪಿಸಿದರೆ ಅದಕ್ಕಿಂತಲೂ ಹೆಚ್ಚಾದ ಸೇವೆ ಸರ್ಕಾರದವರು ಸಲ್ಲಿಸತಕ್ಕದ್ದು ಮತ್ತೊಂದಿಲ್ಲ ಎಂಬ ದೃಢ

ವಾದ ನಂಬಿಕೆ ನನಗಿದೆ. ಶ್ರೀ ಬಸಪ್ಪನವರೂ ಮಾತನಾಡುವಾಗ ಇದಕ್ಕೆ ಸಂಪೂರ್ಣ ಪ್ರೋತ್ಸಾಹ ಕೊಟ್ಟರು. ಹೀಗೆ ಸಾಮಾನ್ಯವಾಗಿ ಒತ್ತಾಯವಿರುತ್ತದೆ. ಸೆಕೆಂಡರಿ ಸ್ಕೂಲುಗಳಲ್ಲಿ ಕೈಗಾರಿಕೆ ಕಲಿಸಬೇಕೆಂದು ಹೇಳಿದ್ದಾರೆ. ಭಾರತ ಸಂಸ್ಕೃತಿಯನ್ನು ನೆನಸಿಕೊಂಡರೆ India is a bundle of superstition and museum of religions, ಎಂಬ ಒಂದು ಗೊಂದಲವಿದೆ. ಸರ್ಕಾರದವರು ಕೈಗಾರಿಕೆಗಳಿಗೆ ನೀಡಬೇಕಾದ ಪ್ರೋತ್ಸಾಹದ ಹೊರೆಯನ್ನು ಮಕ್ಕಳ ತಲೆಯಮೇಲೆ ಹಾಕಿದ ಹಾಗಿದೆ, ಸ್ಕೂಲುಗಳ ಹತ್ತಿರ ತೋಟ, ಗದ್ದೆ ಮಾಡಬೇಕೆಂದು ಹೇಳುವುದು, ಸ್ಕೂಲು ಮಕ್ಕಳು ಅದರ ಜೊತೆಗೆ ಗೊಬ್ಬರದ ಗುಂಡಿ ತೋಡುವುದು ಸ್ಕೂಲು ಸುತ್ತ ಇತರ ಕೆಲಸ ಮಾಡಬೇಕೆಂದು ಹೇಳುವುದು ಇದೆಲ್ಲಾ ಸಾಧ್ಯವೆ? ಕೆಲವು ಸ್ಕೂಲುಗಳ ವಾತಾವರಣದಲ್ಲಿ ಕೈಗಾರಿಕೆಯನ್ನು ಅಳವಡಿಸಿಕೊಂಡು ಮಾಡುವುದಕ್ಕಾಗುವುದಿಲ್ಲ.

ವಿದ್ಯಾಭ್ಯಾಸ ಕ್ರಮವನ್ನು ನಮ್ಮ ದೇಶದಲ್ಲಿ rationalise ಮಾಡಬೇಕೆಂಬ ದೃಷ್ಟಿಯಿಂದ Compulsory Primary Education System ಜಾರಿಗೆ ತರಬೇಕೆಂದು ಸರ್ಕಾರದವರು ಯೋಚಿಸಿರುವ ಹಾಗಿದೆ. ಹಿಂದೆ ಹರ್ಷಚಕ್ರವರ್ತಿ ಕಾಲದಲ್ಲಿ ಸಹ ಮಕ್ಕಳಲ್ಲಿ Self-sufficiency ಎಂಬುದು ಬೆಳೆದು ಬರಬೇಕೆಂಬ ದೃಷ್ಟಿಯಿಂದ ಜ್ಞಾನ ಪ್ರಸಾರಣೆಗೆ ಒಂದು ಮಾರ್ಗವನ್ನು ಅನುಸರಿಸುತ್ತಿದ್ದರೆಂದು ಕೇಳಿದ್ದೇನೆ. ಚಿಕ್ಕವಯಸ್ಸಿನಲ್ಲಿಯೇ ಬಾಲಕರಿಗೆ ವೃತ್ತಿ ಶಿಕ್ಷಣಕ್ರಮವನ್ನು ಚೆನ್ನಾಗಿ ಹೇಳಿಕೊಟ್ಟು ಅವರು ತಮ್ಮ ಮುಂದಿನ ಜೀವನಕ್ರಮವನ್ನು ರೂಪುಗೊಳಿಸಿಕೊಳ್ಳುವುದಕ್ಕೇ ಅಗುಣವಾದ ಶಿಕ್ಷಣವನ್ನು ಕೊಡುವುದು ಉತ್ತಮವಾದ ಮಾರ್ಗವೇ. ಆದರೆ ಪ್ರೈಮರಿ ಶಿಕ್ಷಣ ಮುಗಿದ ನಂತರ ಅವರು ಸೆಕೆಂಡರಿ stageಗೆ ಬಂದಾಗ ವೃತ್ತಿ ಶಿಕ್ಷಣದೊಂದಿಗೆ ಅವರಿಗೆ ಕೈಗಾರಿಕೆ ಶಿಕ್ಷಣವೂ ದೊರಕುವಂತೆ ತಕ್ಕ ರೀತಿಯ ಶಿಕ್ಷಣವು ಲಭಿಸುವಂತೆ ಮಾಡಬೇಕಾದುದು ಅತ್ಯಗತ್ಯ. ಇದಕ್ಕೆ ಅನುಗುಣವಾಗಿ Industrial School ಗಳನ್ನು ಸ್ಥಾಪಿಸಬೇಕು. ಅದರಲ್ಲಿಯೂ ಯಾವ ಯಾವ ಪ್ರದೇಶಕ್ಕೆ ಯಾವ ಯಾವ ರೀತಿ Industrial School ಯೋಗ್ಯವೆಂಬುದನ್ನು ಮನಗಂಡು ತಕ್ಕರೀತಿಯ ವ್ಯವಸ್ಥೆ ಮಾಡುವುದು ಚಿರ. ಬೇಕಾದರೆ ಇದಕ್ಕಾಗಿಯೇ ಬೇರೊಂದು ಸಮಿತಿಯನ್ನು ರಚಿಸಿ ಆಯಾ ಪ್ರದೇಶಕ್ಕೆ ವಂತೆ ಏರ್ಪಡಿಸುವುದು ಅಗತ್ಯ, ಹೀಗೆ ಮಾಡುವುದರಿಂದ ದೇಶದಲ್ಲಿ ಈಗ ಒದಗಿರುವ ನಿರುದ್ಯೋಗ ಸಮಸ್ಯೆಯನ್ನು ಸಹ ಬಹುಮಟ್ಟಿಗೆ ಬಗೆಹರಿಸಲು ಅನುಕೂಲವಾಗಿ ಈ ವಿದ್ಯೆಯನ್ನು ಕಲಿತವರು ತಮ್ಮ ಜೀವನವನ್ನು ತಾವೇ ಹೊರೆದುಕೊಳ್ಳಲು ಸಹಾಯಕವಾಗುತ್ತದೆಂದು ನಂಬಿರುತ್ತೇನೆ.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ವಿದ್ಯಾ ಸುಧಾರಣಾ ಸಮಿತಿಯವರು ನಮ್ಮ ದೇಶದಲ್ಲಿ ವಿದ್ಯಾಸುಧಾರಣೆ ಯಾವ ರೀತಿ ಆಗಬೇಕೆಂಬ ಬಗ್ಗೆ ಒಂದು ಚಿತ್ರವನ್ನು ನಿರೂಪಿಸಿದ್ದಾರೆ. ಈ ಬಗ್ಗೆ ಈಗಾಗಲೇ ಹಲವು ಮಾನ್ಯ ಸದಸ್ಯರು ತಮ್ಮ ತಮ್ಮ ಟೀಕೆಗಳನ್ನು ವ್ಯಕ್ತಪಡಿಸಿರುತ್ತಾರೆ. ನಾನು ಇದರಗೊಡವೆಗೆ ಹೋಗಲು ಇಷ್ಟಪಡುವುದಿಲ್ಲ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಕ್ರಮವು ಹಲವಾರು ವರ್ಷಗಳಿಂದ ಆಯಾ ಕಾಲಕ್ಕೆ, ಆಯಾಸ್ಥಿತಿಗತಿಗಳಿಗೆ ಅನುಗುಣವಾಗಿ ಬದಲಾವಣೆ ಹೊಂದುತ್ತಾ ಬಂದಿದೆ. ಹಿಂದೆ ಪೂರ್ವದಲ್ಲಿ ರಾಜಮಹಾರಾಜರುಗಳು ಸಹ ಶಿಕ್ಷಣಪಡೆಯಲೋಸುಗ ಗುರುಕುಲವೆಂಬುದನ್ನು ಸ್ಥಾಪಿಸಿಕೊಂಡು ಶಿಕ್ಷಣ ಪಡೆಯುತ್ತಿದ್ದುದು ನನ್ನ ತಿಳಿವಳಿಕೆಗೆ ಬಂದಿದೆ. ಆ ಶಿಕ್ಷಣ ಕ್ರಮವು ಹಲವಾರು ರೂಪದಲ್ಲಿ ಆಯಾ ಕಾಲಸನ್ನಿವೇಶಕ್ಕೆ ತಕ್ಕ ರೀತಿಯಲ್ಲಿ ಮಾರ್ಪಾಡು ಹೊಂದಿಕೊಂಡು ಬರುತ್ತಿದೆ. ಆದರೆ ಪರಕೀಯರ ಆಳ್ವಿಕೆ ನಮ್ಮ ದೇಶದಲ್ಲಿ ಪ್ರಾರಂಭವಾದ ಮೇಲೆ ಹಿಂದಿನ ಶಿಕ್ಷಣ ಕ್ರಮವೇ ಮಾರ್ಪಾಟುಹೊಂದಿ, ಹೊಸ ಹೊಸ ಶಿಕ್ಷಣ ಕ್ರಮಗಳು ಅನುಷ್ಠಾನಕ್ಕೆ ಬಂದಿವೆ. ಈ ಕ್ರಮವು ಸಹ ಬರಬರುತ್ತಾ ಪರಕೀಯರ ಆಡಳಿತದ ಬಿಗಿ ನಮ್ಮ ಮೇಲೆ ತಪ್ಪಿದ ಹಾಗೆಲ್ಲಾ, ಇದು ಮಾರ್ಪಾಟು ಹೊಂದುತ್ತಾ ಬಂದಿದೆ. ಪರಕೀಯರ ಆಡಳಿತ ಕ್ರಮ ಇರುವವರೆಗೂ ಈ ಶಿಕ್ಷಣ ಕ್ರಮದಲ್ಲಿಯೂ ಸಹ, ಸ್ವಾರ್ಥ ಮನೋವೃತ್ತಿ ಮನೋಭಾವವೇ ತುಂಬಿತುಳುಕಾಡುತ್ತಿತ್ತು. ಪರಕೀಯರ ಆಡಳಿತ ತಪ್ಪಿದಾಗಿನಿಂದ ಇದರಲ್ಲಿ ಇತ್ತೀಚೆಗೆ ಸ್ವತಂತ್ರ ಮನೋಭಾವ ಮತ್ತು ದೇಶದ ಏಳಿಗೆಯ ದೃಷ್ಟಿ ಇಃ ಗಳು ಕಂಡುಬರುತ್ತಿವೆ.

ನಮ್ಮ ದೇಶದ ವಿದ್ಯಾಭ್ಯಾಸ ಕ್ರಮದಲ್ಲಿರುವ ಲೋಪದೋಷಗಳನ್ನೆಲ್ಲಾ ತೊಡೆದುಹಾಕಿ ದೇಶದ ಹಿತದೃಷ್ಟಿಗೆ ಸಾಧಕವಾಗುವಂತಹ ವಿದ್ಯಾಭ್ಯಾಸ ಕ್ರಮವನ್ನು ಅಳವಡಿಸಬೇಕೆಂದು ಈಗಾಗಲೇ ಹಲವಾರು ಸುಧಾರಣಾ ಸಮಿತಿಯವರು ಪ್ರಯತ್ನಪಟ್ಟಿರುತ್ತಾರೆ. ಅವರು ಪ್ರಯತ್ನಪಟ್ಟ ಹಾಗೂ ಅದರಲ್ಲಿ ಸ್ವಲ್ಪ ಸ್ವಲ್ಪವಾಗಿ ಜಾರಿಗೆ ಬರುವುದು ಸಹ ಆಗಿ, ಈ ಬಗ್ಗೆ ಸ್ವಲ್ಪಮಟ್ಟಿಗೆ ಪ್ರಯತ್ನ ನಡೆದಿದೆ. ಅನಂತರ ಬಲಾತ್ಕಾರ ವಿದ್ಯಾಭ್ಯಾಸಕ್ರಮವನ್ನು ಜಾರಿಗೆ ತರಬೇಕೆಂದೂ, ಕೆಲವು ವರ್ಷಗಳಲ್ಲಿ ಒಂದೊಂದು ವರ್ಷ ಇಷ್ಟಿಷ್ಟು ಮಿಡ್ಲ್‌ಸ್ಕೂಲ್ ಸ್ಥಾಪಿಸಬೇಕೆಂದೂ, ಇದನ್ನು ಕೆಲವು ತಾಲ್ಲೂಕುಗಳಲ್ಲಿ ಕಡ್ಡಾಯವಾಗಿ ಜಾರಿಗೆ ತರಬೇಕೆಂದೂ, ಅನಂತರ ಅದೂ ಮಾರ್ಪಟ್ಟು partial compulsory education system ಜಾರಿಗೆ ತರಬೇಕೆಂದೂ ಹೀಗೆ ನಾನಾ ವಿಧದ ಪ್ರಯತ್ನಗಳು ನಡೆದಿವೆ. ಅಂತೂ ನಿರ್ಧಾರವಾಗಿ ಯಾವ ಒಂದು ಕ್ರಮವನ್ನೂ ನಿರ್ದಿಷ್ಟವಾಗಿ ಅನುಷ್ಠಾನಕ್ಕೆ ತಂದಿಲ್ಲವೆಂದೇ ಹೇಳಬೇಕು. ಇದರಿಂದ ದೇಶದಲ್ಲಿ ಜನರ ಮನಸ್ಸಿನಲ್ಲಿಯೂ ಈ ವಿದ್ಯಾಭ್ಯಾಸದ ಕ್ರಮದ ವಿಚಾರದಲ್ಲಿ ನಮ್ಮ ದೇಶಕ್ಕೆ ಇಂಥ ಕ್ರಮವೇ ಉತ್ತಮವಾದುದು ಎಂದು ನಿಖರವಾಗಿ ಹೇಳುವ ಮನೋಧರ್ಮ ಇನ್ನೂ ಬೆಳೆದುಬಂದಿಲ್ಲ. ವಿದ್ಯಾಭ್ಯಾಸದ ವಿಚಾರದಲ್ಲಿ ನಿರ್ದಿಷ್ಟ ಕ್ರಮವನ್ನು ರೂಪುಗೊಳಿಸಬೇಕೆಂದು ನಮ್ಮ ಸರ್ಕಾರ ಈಗ ಸರ್ವಸಾಹಸಪಟ್ಟು ಈ ಶಿಕ್ಷಣ ಸುಧಾರಣಾ ಸಮಿತಿಯ ವರದಿಯನ್ನು ಈಗ ನಮ್ಮ ಮುಂದಿಟ್ಟಿದ್ದಾರೆ. ಈಗ ನಾವು ಈ ಸಮಿತಿಯವರು ಮಾಡಿರುವ ಶಿಫಾರಸುಗಳಲ್ಲಿ ನಮ್ಮ ದೇಶಕ್ಕೆ ಅನುಗುಣವಾದ ಶಿಕ್ಷಣ ಕ್ರಮವ ಅಡಕವಾಗಿದೆಯೇ ಇಲ್ಲವೇ ಎಂಬುದನ್ನು ನೋಡಬೇಕಾಗಿದೆ.

3 P.M.

ಎರಡನೆಯದಾಗಿ ಸಾಮಾನ್ಯವಾಗಿ ಹಳ್ಳಿಗಾಡುಗಳಲ್ಲಿರತಕ್ಕ ಸಮಸ್ತ ಪ್ರಜೆಗಳಿಗೂ ಇದರಿಂದ ಪ್ರಯೋಜನವಾಗುತ್ತದೆ ಎಂಬುದು. ಈ ಎರಡು ದೃಷ್ಟಿಯಿಂದ ಈ ವಿದ್ಯಾಭ್ಯಾಸ ಸುಧಾರಣೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿರತಕ್ಕ ಹಳ್ಳಿಗಾಡಿನ ಜನಗಳ ಮುಖ್ಯವಾದ ಒಂದು ಕಸಬು ವ್ಯವಸಾಯ; ಇನ್ನೂ ಅನೇಕ ಕೈಗಾರಿಕೆಗಳು ವ್ಯವಸಾಯಕ್ಕೆ ಹೊಂದಿ

(ಶ್ರೀ ಎಚ್. ಹುಚ್ಚೆಮಾಸ್ತಿಗೌಡ.)

ಕೊಂಡು ಹೋದಹಾಗೆ ಇವೆ. ಇಂಗ್ಲಿಷ್ ವಿದ್ಯಾಭ್ಯಾಸ ನಮ್ಮ ದೇಶದಲ್ಲಿ ಬಂದಮೇಲೆ ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿ ಹೈಸ್ಕೂಲುದಾಟಿದ ಕೂಡಲೇ ಹಳ್ಳಿಯ ಸಂಪರ್ಕ ಬಿಡುವುದಕ್ಕೆ ಪ್ರಯತ್ನಮಾಡುತ್ತಾನೆ. ರಜಾ ಕಾಲದಲ್ಲೂ ಕೂಡ ಹಳ್ಳಿಗೆ ಹೋಗಿ ತಂದೆತಾಯಿಗಳು ಅನುಸರಿಸುತ್ತಾಯಿರತಕ್ಕ ಕಸುಬಿನಲ್ಲಿ ಸಹಾಯಕ ನಾಗಲು ಇಷ್ಟಪಡುವುದಿಲ್ಲ. ರಜಾ ಕಾಲದಲ್ಲಿ ಗುಮಾಸ್ತನ ಕೆಲಸವೋ ಅಥವಾ ಇನ್ನಾವುದಾದರೂ ಕೆಲಸವೊ ಮಾಡಿಕೊಂಡು ಪಟ್ಟಣದಲ್ಲಿರುವುದಕ್ಕೆ ಹವಣಿಸುತ್ತಾನೆ. ಹೀಗೆ ಈಗಿನ ವಿದ್ಯಾಭ್ಯಾಸ ಪದತ್ತಿಯಿಂದ ಹಳ್ಳಿಯ ಸಂಪರ್ಕ ವಿದ್ಯಾವಂತನಾದವನಿಗೆ ಕಡಮೆಯಾಗುತ್ತಿದೆ. ಹಳ್ಳಿಯಲ್ಲಿ, ಸಾಮಾನ್ಯವಾಗಿ ವ್ಯವಸಾಯಗಾರರಾಗಿರತಕ್ಕವರೆಲ್ಲರ ಅನುಭವ ಈಗ ಯಾವ ರೀತಿಯಿದೆ ಯೆಂದರೆ ಅವಿದ್ಯಾವಂತರಾಗಿ ಪೂರ್ವದಿಂದ ಹಳ್ಳಿಯಲ್ಲಿ ನೆಲೆಸಿ ಕೆಲಸಮಾಡಿಕೊಂಡು ಬಂದಿರುವ ಮುದುಕರು ಮತ್ತು ಇತರರು ವ್ಯವಸಾಯದಲ್ಲಿ ನಿರತರಾಗಿರುವ ಹಾಗೆ ಆಗಿದೆಯೇ ಹೊರತು ವಿದ್ಯಾವಂತರು ಯಾರೂ ಹಳ್ಳಿಯಲ್ಲಿ ನೆಲೆಸಿ ವ್ಯವಸಾಯವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನಮಾಡುತ್ತಾಯಿಲ್ಲ. ಅವರು ಹಳ್ಳಿಯಲ್ಲಿ ನೆಲೆಸುವುದಕ್ಕೆ ಇಷ್ಟಪಡುವುದಿಲ್ಲ. ಈ ವಿದ್ಯಾಭ್ಯಾಸದಲ್ಲಿ ಇದು ಒಂದು ಬಹಳ ದೊಡ್ಡ ದೋಷ ಎಂದು ಭಾವಿಸುತ್ತೇನೆ. ಆ ಒಂದು ದೃಷ್ಟಿಯಿಂದ ನೋಡಿದರೆ ಹಳ್ಳಿಯಲ್ಲಿ ವಿದ್ಯಾವಂತರಾದವರು ನೆಲೆಸಿ ಅವರ ಕಸಬನ್ನು ಉತ್ತಮ ಪಡಿಸಿಕೊಂಡು ಹೋಗುವುದಕ್ಕೆ ಅನುಕೂಲಮಾಡಿಕೊಡುವ ಪ್ರಯತ್ನ ಈ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ವರದಿಯಿಂದ ಸ್ವಲ್ಪಮಟ್ಟಿಗೆ ಆಗಿದೆ. ಅಷ್ಟೋ ಏಕೆ ಬಹುಮಟ್ಟಿಗೆ ಆಗಿದೆ ಎಂದು ಹೇಳಿ ನಾನು ಭಾವಿಸುತ್ತೇನೆ. ಏಕೆಂದರೆ ಪ್ರಾಥಮಿಕ ವಿದ್ಯಾಭ್ಯಾಸದ ಅಂತಸ್ತಿನಲ್ಲೇ ವ್ಯವಸಾಯ ಮತ್ತು ಇತರ ಕಸಬುಗಳ ಕಡೆಗೆ ಒಂದು ಒಳ್ಳೆಯ ಮನೋಭಾವ ಬರುವುದಕ್ಕೆ ಅವರು ಒಂದು ಅವಕಾಶಮಾಡಿಕೊಟ್ಟಿದ್ದಾರೆ. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಅಂತಸ್ತಿನಲ್ಲಿ ಹೆಚ್ಚು ಶಾರೀರಕ ಶಿಕ್ಷಣ ಇಲ್ಲದ ಹಾಗೆ ನೋಡಿಕೊಳ್ಳಬೇಕಾದದ್ದು ಅಗತ್ಯ ಎಂದು, ಸುಮಾರು 12 ವರ್ಷದ ವಯಸ್ಸಿನೊಳಗೆ ಹೆಚ್ಚು ಕೆಲಸಮಾಡಿಸಬಾರದು ಎಂದೂ ಶಾರೀರಕ ಶಿಕ್ಷಣ ಕೊಡತಕ್ಕ ಅನೇಕರ ಅನುಭವವಾಗಿದೆ. ನಾನು ಕೆಲವು ಕಾಲ ಫಿಸಿಕಲ್ ಕಲ್ಚರ್ ಟ್ರೈನಿಂಗ್ ತೆಗೆದುಕೊಳ್ಳುತ್ತಾಯಿದ್ದ ಕಾಲದಲ್ಲಿ ಇದರಲ್ಲಿ ಒಳ್ಳೆಯ ಪ್ರವೀಣರಾದ ಪ್ರೊಫೆಸರ್ ಕೆ. ವಿ. ಐಯ್ಯರ್‌ರವರು 12 ಅಥವಾ 14 ವರ್ಷದವರೆಗೂ ಹೆಚ್ಚು ಶಾರೀರಕ ಶಿಕ್ಷಣ ಕೊಡಬಾರದು ಎಂಬುದಾಗಿ ಹೇಳುತ್ತಾಇದ್ದರು. ಆದ್ದರಿಂದ 12 ವರ್ಷ ವಯಸ್ಸು ಆಗುವುದಕ್ಕೆ ಮುಂಚೆ ಪ್ರಾಥಮಿಕ ವಿದ್ಯಾಭ್ಯಾಸದ ಅಂತಸ್ತಿನಲ್ಲಿ ಮಕ್ಕಳಿಗೆ ಹೆಚ್ಚು ದೇಹಶ್ರಮ ಆಗುವ ರೀತಿಯಲ್ಲಿ ಶಿಕ್ಷಣಕೊಡಬಾರದು ಎಂದು ಹೇಳಿ ಭಾವಿಸುತ್ತೇನೆ.

ಇನ್ನು ಪ್ರಾಥಮಿಕ ವಿದ್ಯಾಭ್ಯಾಸದ ಅಂತಸ್ತಿನಲ್ಲಿ 5-6ನೇ ವರ್ಷಗಳಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಸ್ವಲ್ಪಮಟ್ಟಿಗೆ ಕೊಟ್ಟಿರುವುದು ಒಳ್ಳೆಯದಲ್ಲ ಎಂದು ನನ್ನ ಭಾವನೆ. ಏಕೆಂದರೆ ಈ ದೇಶದ ರಾಷ್ಟ್ರಭಾಷೆ ಹಿಂದೀ ಎಂದು ನಿರ್ಧರವಾಗಿದೆ. ಆ ಕಾಲದಲ್ಲಿ ಇಂಗ್ಲಿಷ್‌ಗೆ ಬದಲಾಗಿ ಹಿಂದೀ ಭಾಷೆಯನ್ನಾದರೂ ಹೇಳಿಕೊಟ್ಟರೆ ಒಳ್ಳೆಯದು. ಆ ವಯಸ್ಸಿನಲ್ಲಿ 2 ವರ್ಷ ಇಂಗ್ಲಿಷ್ ಅಭ್ಯಾಸಮಾಡಿಸಿ ಮತ್ತೆ ವಿದ್ಯಾಭ್ಯಾಸವನ್ನು ಬಿಟ್ಟುಹಳ್ಳಿಯಲ್ಲಿಹೋಗಿ ನೆಲೆಸುವಂಥ ಪರಿಸ್ಥಿತಿ ಬಂದಾಗ 2 ವರ್ಷದ ಇಂಗ್ಲಿಷ್ ವಿದ್ಯಾಭ್ಯಾಸವೆಲ್ಲಾ ವ್ಯರ್ಥವಾಗುತ್ತದೆ.

ಇನ್ನು ಪ್ರೈಮರಿ ವಿದ್ಯಾಭ್ಯಾಸದ ಅಂತಸ್ತಿನಲ್ಲಿ ಬೆಳಗಿನ ಹೊತ್ತು ಪಾಠಪ್ರವಚನಗಳನ್ನು ನಡೆಸಿ ಮಧ್ಯಾಹ್ನದ ಹೊತ್ತು ತಂದೆತಾಯಿಗಳಿಗೆ ವ್ಯವಸಾಯದ ಕಸಬಿನಲ್ಲಿ ಸಹಾಯಕನಾಗುವುದಕ್ಕೆ ಒಂದು ಅವಕಾಶ ಕಲ್ಪಿಸುವುದರಿಂದ ಏನು ಪ್ರಯೋಜನ ಎಂಬುದನ್ನು ಕೆಲವರು ವಿಮರ್ಶೆಮಾಡುತ್ತಾ ತಿಳಿಸಿದರು. ಸಾಮಾನ್ಯವಾಗಿ ನಾನು ಹಳ್ಳಿಯಲ್ಲಿ ನೋಡಿರುವ ಮಟ್ಟಿಗೆ ವ್ಯವಸಾಯದ ಕಾಲದಲ್ಲಿ ನಾಟಿ ಹಾಕುವಾಗ, ಬಿತ್ತನೆಮಾಡುವಾಗ, ಕಳೆ ಕೀಳುವಾಗ, ಪೈರು ಕಟಾವಿನ ಕಾಲದಲ್ಲಿ 6 ವರ್ಷ, 8 ವರ್ಷ, 10 ವರ್ಷದ ಮಕ್ಕಳು ತಂದೆತಾಯಿಗಳಿಗೆ ಸಹಾಯಕರಾಗಬೇಕಾಗುತ್ತದೆ. ಹಳ್ಳಿ ಜೀವನದಲ್ಲಿ ನಿಕಟವಾದ ಸಂಪರ್ಕವುಳ್ಳವರಿಗೆ ಇದು ಗೊತ್ತಾಗುತ್ತದೆ.

ಇನ್ನು ರಜಾ ಕೊಡತಕ್ಕ ಕಾಲವೂ ಕೂಡ ನಮ್ಮ ದೇಶದಲ್ಲಿ ಬದಲಾವಣೆಯಾಗಬೇಕಾದದ್ದು ಬಹಳ ಅಗತ್ಯ. ಈಗ ಬೇಸಿಗೆ ಕಾಲದಲ್ಲಿ ರಜಾ ಕೊಡುವುದು ಯಾವಾಗ ಎಂದರೆ ವ್ಯವಸಾಯಗಾರರ ಎಲ್ಲಾ ಕೆಲಸಗಳೂ ಕಳೆದು ಸುಗ್ಗಿ ಕುಣಿತದ ಕಾಲದಲ್ಲಿ ರಜಾ ಕೊಡುತ್ತಾರೆ. ಆ ಕಾಲದಲ್ಲಿ ಹೈಸ್ಕೂಲು ವಿದ್ಯಾಭ್ಯಾಸಮಾಡತಕ್ಕವನು ನಿಜವಾಗಿಯೂ ಹಳ್ಳಿಗೆಹೋದರೆ ಪ್ರಯೋಜನವಾಗುವುದಿಲ್ಲ. ಅದೇ ರೀತಿ ಪ್ರಾಥಮಿಕ ಶಾಲೆಗಳ ವಿಷಯದಲ್ಲೂ ಸಹ ಸ್ವಲ್ಪಮಟ್ಟಿಗೆ ಪ್ರಯೋಜನವಾಗುತ್ತದೆಯೆಂಬುದನ್ನು ನಾವು ನೋಡಬಹುದು.

ಇನ್ನು ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಉಚಿತ ಶಿಕ್ಷಣ ಕೊಡಬೇಕೆಂಬುದು ನಮಗೆ ಈ ವರದಿಯಿಂದ ಗೊತ್ತಾಗುತ್ತದೆ. ಇದನ್ನು ಎಲ್ಲಾ ಕಡೆಯೂ ಜಾರಿಗೆ ತರುವುದಾದರೆ ಇದಕ್ಕಿಂತ ಉತ್ತಮವಾದಂಥ ಮಾರ್ಪಾಟು ಬೇರೆ ಯಾವುದೂ ಇಲ್ಲ ಎಂದು ನಾನು ಭಾವಿಸುತ್ತೇನೆ. ಈಗಿರುವ ರೀತಿಯಲ್ಲಿ ಹಳ್ಳಿಗಳಲ್ಲಿ ಅನೇಕ ಜನ ಹುಡುಗರಿಗೆ ಶಿಕ್ಷಣ ದೊರಕುತ್ತಿಲ್ಲ. ಎಲ್ಲರಿಗೂ ಉಚಿತವಾದ ಶಿಕ್ಷಣ 6 ವರ್ಷವಾದರೂ ದೊರೆತಲ್ಲಿ ಅದು ಖಂಡಿತವಾಗಿಯೂ ಸಂತೋಷಪಡತಕ್ಕ ವಿಷಯ. ಆದ್ದರಿಂದ ಸರ್ಕಾರದವರು ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರುವುದರ ಕಡೆಗೆ ಗಟ್ಟಿ ಮನಸ್ಸುಮಾಡಬೇಕೆಂದು ನಾನು ಭಾವಿಸುತ್ತೇನೆ.

ಇನ್ನು ಯೂನಿವರ್ಸಿಟಿ ಸ್ಟೇಜಿನಲ್ಲಿ ಯೋಚನೆಮಾಡಬೇಕಾದ ವಿಚಾರ ಎಂದರೆ ಅದು ಸ್ವಪರಿಪೂರ್ಣವಾಗಿರಬೇಕು ; ಮತ್ತು ವಿದ್ಯಾಭ್ಯಾಸಮಾಡತಕ್ಕವರು ಅವರಿಗೆ ಆಗತಕ್ಕ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವಂತೆಯಿರಬೇಕು ಎಂದು ನಾನು ಭಾವಿಸುತ್ತೇನೆ ಅದು ಆದಮೇಲೆ ಪೋಸ್ಟ್‌ಗ್ರ್ಯಾಜ್ಯುಯೇಟ್ ಕೋರ್ಸ್‌ಗೆ ಎಂದರೆ ರಿಸರ್ಚ್ ಆ ಸೆಕ್ಷನ್ನಿಗೆ ಸರ್ಕಾರದವರು ಹೆಚ್ಚು ಖರ್ಚುಮಾಡಿ ದೇಶಕ್ಕೆ ಪ್ರಯೋಜನವಾಗುವ ಹಾಗೆ ಮಾಡಬೇಕೆಂದು ಅಭಿಪ್ರಾಯಪಡುತ್ತೇನೆ. ಎಲ್ಲಾ ದೃಷ್ಟಿಗಳಿಂದಲೂ ನೋಡುವುದಾದರೆ, ದೇಶದಲ್ಲಿರತಕ್ಕ ಎಲ್ಲಾ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಕೊಡುವುದಕ್ಕೆ ಪ್ರಯತ್ನ ನಡೆದಿದೆ, ದೇಶಕಾಲಕ್ಕನುಗುಣವಾಗಿ ವಿದ್ಯಾಭ್ಯಾಸವನ್ನು ಹೊಂದಿಸುವುದಕ್ಕೆ ಪ್ರಯತ್ನಮಾಡಿದ್ದಾರೆ ಎಂದು ಹೇಳಿ ನಾನು ಈ ವರದಿಯನ್ನು ಸ್ವಾಗತಿಸುತ್ತೇನೆ.

Mr. SPEAKER.—We shall now rise for Lunch and meet again at 3-40.

The House adjourned for Lunch at Eight Minutes past Three of the Clock and reassembled at Forty Minutes past Three of the Clock.

[MR. SPEAKER in the Chair.]

*ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಕಾಲಾವಕಾಶವಿಲ್ಲದೆ, ಆತುರ ಆತುರವಾಗಿ ಪ್ರೈಮರಿ ವಿದ್ಯಾಭ್ಯಾಸದಿಂದ ಹಿಡಿದು ವಿಶ್ವವಿದ್ಯಾನಿಲಯ, ರಿಸರ್ಚ್ ಸೆಕ್ಷನ್‌ವರೆಗೂ ಬೇಗ ಹೋಗಬೇಕಾಗಿ ಬಂತು. ಈ ಮಧ್ಯೆ, ಪ್ರಾಥಮಿಕ ವಿದ್ಯಾಭ್ಯಾಸದ ಅಂತಸ್ತಿಗಿಂತ ಮುಂಚೆ 6 ವರ್ಷದ ವಯಸ್ಸಿನವರೆಗೆ ಕೊಡತಕ್ಕಂಥ ಶಿಕ್ಷಣದ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕೆಂದು ಮಾನ್ಯ ಸದಸ್ಯರು ಕೆಲವರು ಹೇಳಿದರು. ಸ್ವಾಮಿ, ಮುಖ್ಯವಾಗಿ ಹಳ್ಳಿಗಾಡಿನ ಮಕ್ಕಳಿಗಿಂತ ಪಟ್ಟಣಗಳಲ್ಲಿರತಕ್ಕ ಮಕ್ಕಳಿಗೆ ಈ ಅಂತಸ್ತಿನಲ್ಲಿ ಬುದ್ಧಿವಂತಿಕೆ ಬೆಳೆಯುವುದಕ್ಕೆ ಹೆಚ್ಚು ಅವಕಾಶಗಳಿರುತ್ತವೆಯೆಂಬುದು ಖಂಡಿತವಾದ ವಿಷಯ. ಇದನ್ನು ಎಲ್ಲರೂ ಒಪ್ಪಲೇಬೇಕು. ಪಟ್ಟಣಗಳಲ್ಲಿರತಕ್ಕ ಮಕ್ಕಳಿಗೆ ಈ 6 ವರ್ಷದ ಅವಧಿಯಲ್ಲಿ ಅವರ ಮಾನಸಿಕ ಬೆಳವಣಿಗೆಯಾಗಲು ಅವರ ಪಟ್ಟಣದ ವಾಸ ಹೆಚ್ಚು ಸಹಾಯಕವಾಗಿರುತ್ತದೆ. ಅವರು ಒಳ್ಳೆಯ ನಡೆವಳಿಕೆಗಳನ್ನು ಕಲಿಯುವುದಕ್ಕೇ ಆಗಲಿ ಒಳ್ಳೆಯ ಚುರುಕು ಪ್ರವೃತ್ತಿಯನ್ನು ಅಭ್ಯಾಸ ಮಾಡುವುದಕ್ಕೇ ಆಗಲಿ, ಅವರಿಗೆ ಹೆಚ್ಚು ಅವಕಾಶವಿರುತ್ತದೆ. ಆದರೆ ಹಳ್ಳಿಗಳಲ್ಲಿರತಕ್ಕ ಮಕ್ಕಳಾದರೋ 6 ವರ್ಷದವರೆಗೂ ಬೀದಿಯಲ್ಲಿ ಚೆಂಡು ಬುಗುರಿಗಳನ್ನಾಡಿಕೊಂಡು ಕಾಲಕಳೆಯುತ್ತಿರುವ ಪರಿಸ್ಥಿತಿಯಿದೆ. ಆದ್ದರಿಂದ ಅಂಥ ಮಕ್ಕಳೂ ಕೂಡ ಎರಡು–ಮೂರು ವರ್ಷಗಳಾದರೂ ಸ್ವಲ್ಪಮಟ್ಟಿಗೆ ಅವರ ನಡೆವಳಿಕೆಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುವ ಹಾಗೆ ಶಿಕ್ಷಣ ಕೊಡಬೇಕಾದದ್ದು ಬಹಳ ಅಗತ್ಯ. ಇದನ್ನು ಸಾರ್ವಜನಿಕ ಸಂಸ್ಥೆಗಳಿಗೆ ಸಂಪೂರ್ಣವಾಗಿ ಬಿಡುವುದಕ್ಕೆ ಬದಲು ಸರ್ಕಾರದವರೇ ಬಹಳಮಟ್ಟಿಗೆ ವಹಿಸಿ ಶಿಕ್ಷಣ ಕೊಡುವ ಏರ್ಪಾಡು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಶಿಕ್ಷಣ ಸುಧಾರಣೆಯಲ್ಲಿ ಈ ವಿಷಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡದಿರುವುದು ಒಂದು ಗಮನಾರ್ಹವಾದ ಲೋಪವೆಂದು ನಾನು ಭಾವಿಸುತ್ತೇನೆ.

ಸ್ಕೂಲು ಕಟ್ಟಡಗಳ ವಿಷಯ ಕೆಲವರು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಸ್ಕೂಲು ಕಟ್ಟಡಗಳಿಗೆ ಹೆಚ್ಚಿಗೆ ಪ್ರಾಮುಖ್ಯತೆ ಕೊಡುವುದಕ್ಕೆ ಬದಲಾಗಿ ಅವರ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುವುದು ಒಳ್ಳೆಯದು. ಯಾವುದಾವರೂ ಮರದ ಕೆಳಗೆ ಕುಳಿತುಕೊಂಡಾಗಲಿ ವಿದ್ಯಾಭ್ಯಾಸ ನಡೆಸುವುದು ಅಗತ್ಯವೆಂದು ಹೇಳುತ್ತೇನೆ. ಆದರೆ ಕೆಲವು ಸದಸ್ಯರು ಹೇಳಿದರು, ಕಟ್ಟಡಗಳನ್ನು ಒದಗಿಸಿಕೊಳ್ಳುವುದು ಬಹಳ ಕಷ್ಟ, ಸರ್ಕಾರದವರೇ ಉತ್ತಮ ಕಟ್ಟಡಗಳನ್ನು ಕಟ್ಟಿಸಿ ಆಮೇಲೆ ಸ್ಕೂಲು ಕೊಡಬೇಕು ಎಂದು. ನನ್ನ ಅನುಭವವನ್ನು ಹೇಳುವುದಾದರೆ, ಮಾನ್ಯ ಸದಸ್ಯರು ಪ್ರಯತ್ನ ಮಾಡಿದರೆ ಯಾವ ಹಳ್ಳಿಯಲ್ಲೇ ಆಗಲಿ ಜನರ ಸಹಾಯವನ್ನು ಪಡೆದು ಒಂದು ಕಟ್ಟಡವನ್ನು ಒದಗಿಸಿಕೊಳ್ಳುವುದು ಅಸಾಧ್ಯವೆಂದು ಹೇಳಲಾರೆ. ಹಳ್ಳಿಯ ಜನರೊಡನೆ ನಿಕಟ ಸಂಬಂಧ ಬೆಳೆಸಿಕೊಂಡರೆ ಅವರಿಂದ ಕಟ್ಟಡ ಕಟ್ಟಿಸುವುದು ಕಷ್ಟವಾಗಲಾರದು.

ಸೆಕೆಂಡರಿ ಸ್ಟೇಜಿನಲ್ಲಿ ಸ್ಕೂಲು ಫೀಜನ್ನು ಹೆಚ್ಚು ಮಾಡಿರುವ ವಿಷಯವನ್ನು ಅನೇಕರು ಸಭೆಯ ಗಮನಕ್ಕೆ ತರದರು. ನನ್ನ ಅಭಿಪ್ರಾಯದಲ್ಲಿ, ಹೀಗೆ ತಾವು ಹೆಚ್ಚು ಮಾಡಿದರೂ ಪ್ರೈಮರಿ ಸ್ಟೇಜ್ ಕಡೆಗೆ ಇದರ ಸಹಾಯದಿಂದ ಹೆಚ್ಚಿಗೆ ಗಮನಕೊಡುವುದಾದರೆ ಅದು ಸಾರ್ಥಕವಾಯಿತೆಂದು ಭಾವಿಸುತ್ತೇನೆ. ಕಡ್ಡಾಯವಾಗಿ 6 ವರ್ಷದ ಉಚಿತ ವಿದ್ಯಾಭ್ಯಾಸ ಎಲ್ಲಾ ಚಿಕ್ಕ ಮಕ್ಕಳಿಗೂ ದೊರೆಯುವುದಾದರೆ ಅದಕ್ಕಿಂತಲೂ ಉತ್ತಮವಾದದ್ದು ಯಾವುದೂ ಇಲ್ಲವೆಂದು ನಾನು ತಿಳಿಯುತ್ತೇನೆ. ಆದ್ದರಿಂದ ಸೆಕೆಂಡರಿ ಸ್ಟೇಜಿನಲ್ಲಿ ಸ್ವಲ್ಪಮಟ್ಟಿಗೆ ಫೀಜು ಜಾಸ್ತಿ ಮಾಡಿದರೂ ಪರವಾಗಿಲ್ಲ. ಆದರೆ ಇದನ್ನು ತೆಗೆದುಕೊಂಡು ಯೂನಿವರ್ಸಿಟಿಯಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಬೇಕಾದ ಅಗತ್ಯವಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ ಬಹುಮಟ್ಟಿಗೆ ವಿಶ್ವವಿದ್ಯಾನಿಲಯಗಳಲ್ಲಿ ಅಧಿಕಾರಿಗಳ ಮಕ್ಕಳಿಗೆ ಹೆಚ್ಚಿಗೆ ಅವಕಾಶವಿದೆ. ಅಂಥದ್ದರಲ್ಲಿಯೂ ವಿಶ್ವವಿದ್ಯಾನಿಲಯದಲ್ಲಿ ಮಹಿಳೆಯರಿಗೆ ಫೀಜು ಏಕೆ ಹೆಚ್ಚು ಮಾಡಿದರೆಂದು ನಮ್ಮ ಮಹಿಳಾ ಸದಸ್ಯರು ಪ್ರಶ್ನೆ ಮಾಡಿದರು. ಮುಖ್ಯವಾಗಿ ವಿಶ್ವವಿದ್ಯಾನಿಲಯಗಳಲ್ಲಿ ಗಂಡುಮಕ್ಕಳೇ ಆಗಲಿ, ಹೆಣ್ಣುಮಕ್ಕಳೇ ಆಗಲಿ ಯಾರಿಗೆ ಫೀಜನ್ನು ಕೊಡುವ ಶಕ್ತಿಯಿದೆಯೋ ಅವರೆಲ್ಲರೂ ಕೊಡುವಂತೆ ಮಾಡುವುದು ನ್ಯಾಯ. ಸಾವಿರಾರು ರೂಪಾಯಿಗಳ ಸಂಬಳ ಪಡೆಯುವ ಅಧಿಕಾರಿಗಳ ಮಕ್ಕಳಿಗೂ ಉಚಿತ ಶಿಕ್ಷಣ ಕೊಡುವುದಕ್ಕಾಗಿ ಸಾರ್ವಜನಿಕ ಹಣವನ್ನು ಖರ್ಚುಮಾಡುವುದು ಅಧರ್ಮವೆಂದು ನಾನು ಹೇಳುತ್ತೇನೆ. ಯಾರಿಗೆ ಕೊಡುವುದಕ್ಕೆ ಶಕ್ತಿಯಿಲ್ಲವೊ ಅವರಿಗೆ ಸಹಾಯ ನೀಡುವುದು ಅಗತ್ಯ. ಈ ನೀತಿಯನ್ನು ಗಮನದಲ್ಲಿಟ್ಟುಕೊಂಡು ಶಕ್ತಿಯಿಲ್ಲದವರ ಮಕ್ಕಳಿಗೂ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ದೊರೆಯುವಂತೆ ಉದಾರವಾಗಿ ಸರ್ಕಾರದವರು ಸಹಾಯ ಮಾಡುತ್ತಾರೆಂದು ನಂಬಿದ್ದೇನೆ. ಈ ದೃಷ್ಟಿಯಿಂದ ವಿಶ್ವವಿದ್ಯಾನಿಲಯದಲ್ಲಿ ಫೀಜನ್ನು ಜಾಸ್ತಿ ಮಾಡಿ ಅದು ಸ್ವಪರಿಪೂರ್ಣತೆಯಿಂದ ನಡೆಯುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹೆಚ್ಚು ಕಾಲ ತೆಗೆದುಕೊಳ್ಳದೆ, ಒಂದು ಮಾತು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಸಾಮಾನ್ಯವಾಗಿ ನಮ್ಮಲ್ಲಿ ಒಂದು ನಾಣ್ನುಡಿಯಿದೆ. "ಸಂಧ್ಯಾವಂದನೆ ಮಾಡಿದರೆ ಪುಣ್ಯವಿಲ್ಲ; ಆದರೆ ಸಂಧ್ಯಾವಂದನೆ ಮಾಡದೆ ಇದ್ದರೆ ಪಾಪ ಬರುತ್ತದೆ" ಎಂದು ಹೇಳುತ್ತಾರೆ. ಹಾಗೆಯೇ ಇಂಥ ಸುಧಾರಣೆಯನ್ನು ನಮ್ಮ ವಿದ್ಯಾಭ್ಯಾಸದಲ್ಲಿ ಜಾರಿಗೆ ತರದೆ ಇದ್ದರೆ ನಿಮಗೆ ಬೈಗಳು ತಪ್ಪಿದ್ದಲ್ಲ. ಈ ದೃಷ್ಟಿಯಿಂದ ಇಂಥ ಒಂದು ಒಳ್ಳೆಯ ಕೆಲಸವನ್ನು ಕೈಕೊಂಡು ಧೈರ್ಯವಾಗಿ, ಏನಾದರೂ ಶುಲ್ಕ ವಿಧಿಸಿದರೂ ಪರವಾಯಿಲ್ಲವೆಂದುಯೋಚನೆಮಾಡಿ ಮುಂದುವರಿಯಬೇಕೆಂದು ಪ್ರಾರ್ಥನೆಮಾಡಿ, ಈ ಸಮಿತಿಯ ವರದಿಯ ಹೆಚ್ಚು ವಿವರಗಳಿಗೆ ಕೈಹಾಕದೆ, ಈ ಸಂದರ್ಭದಲ್ಲಿ ಸ್ಥೂಲವಾಗಿ ಹೇಗಿದೆಯೆಂಬುದನ್ನು ಮಾತ್ರ ವಿಮರ್ಶೆಮಾಡಿ ಇದು ಒಟ್ಟಿನಲ್ಲಿ ಸ್ವಾಗತಾರ್ಹವಾಗಿದೆಯೆಂದು ಭಾವಿಸಿ ಆದಷ್ಟು ಜಾಗ್ರತೆ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಾರ್ಥಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ನಾನೂ ಈ ವಿದ್ಯಾಭ್ಯಾಸ ಸುಧಾರಣಾ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದೆ. ಸದಸ್ಯನಾಗಿದ್ದರೂ, ನಾನೇನೂ ಅಲ್ಲಿ ಒಬ್ಬ ತಜ್ಞನಂತೆ ಪಾತ್ರವಹಿಸಿಗಲಿಲ್ಲ. ಯಾವರೀತಿ, ಒಬ್ಬ ತಂಗಿಗೋ ಅಥವಾ ತಮ್ಮನಿಗೋ ಖಾಯಿಲೆಯಾದರೆ ಅವರಿಗೆ ಸಂಬಂಧಪಟ್ಟಿರುವವರು ಡಾಕ್ಟರುಗಳು ಚಿಕಿತ್ಸೆಮಾಡುವುದನ್ನು ನಿಂತು ಆಸಕ್ತಿಯಿಂದ ನೋಡುತ್ತಿರುವ ಹಾಗೆ ನಾನೂ ಆ ಕಮಿಟಿಯ ಮೀಟಿಂಗುಗಳಲ್ಲಿದ್ದು ಅಲ್ಲಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೆ. ಮತ್ತು ಈ ವರದಿಯಮೇಲೆ ನನ್ನ ಯಾವುದೇತೆರನಾದ dissenting ನೋಟನ್ನಾಗಲೀ ಕೊಟ್ಟಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಆ ಸಮಿತಿಯಲ್ಲಿದ್ದ ಕಾರಣಕ್ಕಾಗಿ ಆ ಸಮಿತಿಯ ಶಿಫಾರಸುಗಳನ್ನು ಒಪ್ಪಲೇಬೇಕೆಂಬ ನಿರ್ಬಂಧ ಏನೂ ಇಲ್ಲವೆಂದು ಭಾವಿಸಿ ನನ್ನ ಈ ಕೆಲವು ಅಭಿಪ್ರಾಯಗಳನ್ನು ಎರಡೇ ನಿಮಿಷಗಳಲ್ಲಿ ಸಭೆಗೆ ತಿಳಿಸಲು ನಿಂತಿದ್ದೇನೆ.

ಈ ವರದಿಯೇನೋ ಸಿದ್ಧವಾಗಿದೆ. ಇದು ನಿಜವಾಗಿಯೂ ಅಮೂಲ್ಯವಾದ ವರದಿ. ಇದಕ್ಕೆ ಖರ್ಚಾಗಿರುವ ಹಣದ ದೃಷ್ಟಿಯಿಂದ ನೋಡಿದರೆ, ಇದಕ್ಕಾಗಿ ಐವತ್ತು ಸಾವಿರ ರೂಪಾಯಿ ಖರ್ಚಾಗಿದೆ ಎಂಬುದನ್ನು ನಾವು ಮರೆಯಬಾರದು. ಇದರಲ್ಲಿ ನಾನು ಓದಿ ತಿಳಿದುಕೊಂಡಿರುವಹಾಗೆ, ಈ ಹೊತ್ತು ಸಾಮಾನ್ಯವಾಗಿ ನಮ್ಮ ವಿದ್ಯಾಭ್ಯಾಸದ ವ್ಯವಸ್ಥೆಯಲ್ಲಿರತಕ್ಕ ನ್ಯೂನತೆಯನ್ನು ತೋರ್ಪಡಿಸುವುದರಲ್ಲಾಗಲಿ ಅಥವಾ ಅಲ್ಲಿ ಯಾವ ಒಪ್ಪಂದಕ್ಕೆ ಬಂದು ಇದಕ್ಕೆ ಪರಿಹಾರವನ್ನು ಸೂಚಿಸಿರುವುದರಲ್ಲಾಗಲಿ ಯಾವುದೊಂದು ದೋಷವೂ ಇಲ್ಲ. ಇದು ನಮ್ಮ ದೇಶದಲ್ಲಿರತಕ್ಕ ವಿದ್ಯಾಭ್ಯಾಸದ ಪೂರ್ಣ ಚಿತ್ರವನ್ನು ನಮಗೆ ಕೊಡುತ್ತದೆ. ನಮ್ಮ ದೇಶದ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಈಗಿನ ವಾತಾವರಣ ಕ್ರಾಂತಿಗೆ ಪಕ್ವವಾಗಿದೆ ಎಂದು ತಿಳಿದುಕೊಂಡಿರುವವರಲ್ಲಿ ನಾನೊಬ್ಬ. ಇದರ ಅಂಗವಾಗಿಯೇ ವಿದ್ಯಾಭ್ಯಾಸ ಕ್ಷೇತ್ರದಲ್ಲಿಕೂಡ ಮೂಲಭೂತ ಕ್ರಾಂತಿಕಾರಕ ಬದಲಾವಣೆಯಾಗಬೇಕಾದುದು ಎಂದಿಗಿಂತ ಇಂದು ಅಗತ್ಯವಾಗಿದೆ. ಮೊನ್ನೆ ಹಣಕಾಸಿನ ವಿಷಯಬಂದಾಗ ಮಾನ್ಯ ಶ್ರೀಮಾನ್ ಹನುಮಂತಯ್ಯನವರು ಒಂದು ವಿಷಯವನ್ನು ಪ್ರಸ್ತಾಪಮಾಡಿದರು. ಹೆಚ್ಚು ಹಣ ಖರ್ಚಾಗುತ್ತದೆ ಎನ್ನುವುದು ಈ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಪುನರ್ರಚಿಸುವ ಕಾರ್ಯದಲ್ಲಿ ನಮ್ಮನ್ನು ಹಿಂದಕ್ಕೆ ತಳ್ಳಬಾರದು, ಇದೊಂದು ಪೆಡಂಭೂತವಾಗಬಾರದು ಎಂದು ಹೇಳಿದರು. ಡಾ|| ರಾಧಾಕೃಷ್ಣನ್‌ರವರು ಇಲ್ಲಿ ಬಂದಾಗ ನಡೆದ ಸೆಮಿನಾರ್‌ನಲ್ಲಿ ಮಾತನಾಡುವಾಗ ಕೂಡ ಹಣಕಾಸಿನ ವಿಚಾರದಲ್ಲಿ ಶ್ರೀ ಕೆ. ಹನುಮಂತಯ್ಯನವರು ಹೀಗೆಯೇ ಹೇಳಿದ್ದಾರೆ. ಆದುದರಿಂದ ಹಣಕಾಸಿನ ತೊಡಕು ಅಥವಾ ಬಿಕ್ಕಟ್ಟು ಈ ಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಅಡ್ಡವಾಗಿ ಅಡಿಬಾರದು, ಈ ವಿಷಯದಲ್ಲಿ ಧೈರ್ಯವಾಗಿ ಮುಂದೆ ಹೆಜ್ಜೆಯಿಡಬೇಕೆಂದು ಶ್ರೀಮಾನ್ ಹನುಮಂತಯ್ಯನವರು ಹೇಳಿರುವ ಮಾತು ಶ್ಲಾಘನೀಯವಾದುದೆಂದು ತಿಳಿದುಕೊಂಡಿದ್ದೇನೆ. ಈ ವರದಿಯಲ್ಲಡಕವಾಗಿರುವ ಪ್ರತಿಯೊಂದು ಅಂಶದಮೇಲೂ, ಇದರಲ್ಲಿ ಏನೇನು ಅಂಶಗಳನ್ನು ಅಳವಡಿಸಿದ್ದಾರೋ ಅವುಗಳನ್ನೇ ಉದ್ಧರಿಸಿ, ನನ್ನ ವ್ಯಾಖ್ಯಾನ ಅಥವಾ ವಿಮರ್ಶೆಯನ್ನು ನನಗೆ ತಿಳಿದಮಟ್ಟಿಗೆ ಮಾಡಬೇಕೆಂದು ಯೋಚಿಸಿದ್ದೇ ಆದರೆ ಕಾಲಾವಕಾಶವಿಲ್ಲದಿರುವುದರಿಂದ ಈ ಯಾವ ವಿವರಗಳಿಗೂ ಹೋಗದೆ ಮಾತನಾಡುವ ಸಂದರ್ಭ ಬಂದಿದೆ. ಈಗಿರತಕ್ಕ ವ್ಯವಸ್ಥೆಯಲ್ಲಿ ಪ್ರೈಮರಿ ನಾಲ್ಕು ವರ್ಷ, ಮಾಧ್ಯಮಿಕ ನಾಲ್ಕು ವರ್ಷ, ಹೈಸ್ಕೂಲು ಮೂರು ವರ್ಷ, ಇಂಟರ್‌ಮೀಡಿಯೆಟ್ ಎರಡು ವರ್ಷ, ಅನಂತರ ವಿಶ್ವವಿದ್ಯಾನಿಲಯದ ಡಿಗ್ರಿ ಪರೀಕ್ಷೆಗೆ ಎರಡುವರ್ಷ, ಆನರ್ಸ್ ಡಿಗ್ರಿಗೆ ಮೂರು ವರ್ಷ ಪಾಸಂಗ ಮಾಡಬೇಕೆಂದು ಏರ್ಪಾಡಿದೆ.

ಈ ವರದಿಯಲ್ಲಿ ಸೂಚಿಸಿರತಕ್ಕ ಮುಖ್ಯ ಬದಲಾವಣೆಯೇನೆಂದರೆ; ಆರು ವರ್ಷ ವಯಸ್ಸಾದಮೇಲೆ ವಿದ್ಯಾರ್ಥಿ ಪ್ರಾಥಮಿಕಶಾಲೆಗೆ ಹೋಗುತ್ತಾನೆ. ಈ ಸಂಬಂಧವಾಗಿ ಶ್ರೀಮಾನ್ ಮರಿಯಪ್ಪನವರು ಒಂದು ಟೀಕೆ ಮಾಡಿದರು. "ಈಗ ಪ್ರಾಥಮಿಕ ನಾಲ್ಕು ವರ್ಷ ಮಾಧ್ಯಮಿಕ ನಾಲ್ಕು ವರ್ಷ ಎರಡೂ ಸೇರಿ ಎಂಟು ವರ್ಷದ ವಿದ್ಯಾಭ್ಯಾಸ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಇದು ಉಚಿತವಾಗಿ ದೊರೆಯುತ್ತಿದೆ. ಇದರ ಜೊತೆಗೆ ಒತ್ತಾಯ ವಿದ್ಯಾಭ್ಯಾಸಕ್ಕೂ ಕೂಡ ಪ್ರಯತ್ನ ಮಾಡಿದ್ದೆವು, 1940ನೆಯ ಇಸವಿಯಲ್ಲಿ ಒಂದು ಹತ್ತು ವರ್ಷದ ಯೋಜನೆಯನ್ನು ಹಾಕಿಕೊಂಡು ಪ್ರತಿವರ್ಷವೂ ನಾನೂರು ಪ್ರಾಥಮಿಕ ವಿದ್ಯಾಶಾಲೆಗಳನ್ನು ತೆರೆಯುತ್ತಿದ್ದೆವು. ಹೀಗೆ 1951ರ ವರೆಗೂ ಸ್ಕೂಲಿಲ್ಲದ ಸ್ಥಳಗಳಿಗೆಲ್ಲಾ ಕೊಡಬಹುದೆಂದು ಮಾಡಿದ್ದೆವು. ಇದನ್ನು ಬಿಟ್ಟು ಈಗ ಎಂಟು ವರ್ಷ ಉಚಿತವಾಗಿ ದೊರೆಯುತ್ತಿರುವ ವಿದ್ಯಾಭ್ಯಾಸವನ್ನು ತಪ್ಪಿಸಿ ಏಕೆ ಹೀಗೆ ಆರು ವರ್ಷ ಮಾಡುತ್ತಾರೆ" ಎಂದು ಪ್ರಶ್ನೆ ಹಾಕಿದರು. ರಾಜ್ಯಾಂಗದಲ್ಲಿ ನಿರ್ದೇಶ ಮಾಡಿರುವಹಾಗೆ, 14 ವರ್ಷದವರೆಗೆ ಮಕ್ಕಳಿಗೆ ಉಚಿತ ಮತ್ತು ಒತ್ತಾಯವಾದ ಪ್ರಾಥಮಿಕ ವಿದ್ಯಾಭ್ಯಾಸ ದೊರಕಲೇಬೇಕೆಂದು, ಸರ್ಕಾರ ಕೊಡಬೇಕೆಂದೂ ಕಡ್ಡಾಯವಾಗಿದೆ. ಈ ಒಂದು ದೃಷ್ಟಿಯಿಂದ ನೋಡುವುದಲ್ಲದೆ, ಈ ವರದಿಯಲ್ಲೂ ಕೂಡ ಹೆಚ್ಚು ಹಣಕಾಸಿನ ಕಡೆ ದೃಷ್ಟಿಯನ್ನಿಟ್ಟುಕೊಂಡಿದ್ದೇವೆ, ಉಪಾಧ್ಯಾಯರಕಡೆ ದೃಷ್ಟಿಯಿಟ್ಟುಕೊಂಡಿದ್ದೇವೆ, ಕಟ್ಟಡಗಳಕಡೆ ದೃಷ್ಟಿಯಿಟ್ಟುಕೊಂಡಿದ್ದೇವೆ, ಇವೆಲ್ಲವುಗಳ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಈಗ ಸದ್ಯಕ್ಕೆ ಆರುವರ್ಷ ಸಾಕು, ಮುಂದೆ ಹಣಕಾಸು ಹೆಚ್ಚು ಬಂದರೆ ಇದನ್ನು ಹೆಚ್ಚಿಸಿ ಎಂಟು ವರ್ಷ ಇಟ್ಟುಕೊಳ್ಳಬಹುದು ಎಂಬ ಸೂಚನೆಯಿದೆ. ಆದುದರಿಂದ ಈ ವಿಷಯವನ್ನು ಪುನಃ ಪರ್ಯಾಲೋಚನೆಮಾಡಿ, ಈ ಎಂಟು ವರ್ಷದ ಪ್ರಾಥಮಿಕ ವಿದ್ಯಾಭ್ಯಾಸದ ರಚನೆಯನ್ನೇ ಉಳಿಸಿಕೊಳ್ಳಬಹುದಾದರೆ ಒಳಿತಾದೀತು. ಅಕ್ಷರಸ್ಥನಾಗಿ ಉಳಿಯಬೇಕಾದರೆ, ಪ್ರಾಥಮಿಕ ವಿದ್ಯಾಭ್ಯಾಸವೇ ಒಂದು ಯೂನಿಟ್ ಆಗಿ, ಅದನ್ನು ಮುಂದುವರಿಸುವುದಕ್ಕೆ ಆಗದೇಯಿದ್ದರೆ ಕೊನೆಯಪಕ್ಷ ಅಕ್ಷರಸ್ಥನಾಗಿ ಉಳಿಯಲಿ ಎನ್ನುವ ದೃಷ್ಟಿಯಿಂದ ಎಂಟುವರ್ಷ ಇಟ್ಟುಕೊಂಡರೆ ಒಳ್ಳೆಯದೆಂದು ಅನ್ನಿಸುತ್ತದೆ.

ಇನ್ನು ಸೆಕೆಂಡರಿ ಸ್ಟೇಜಿನಲ್ಲಿ ನಾಲ್ಕು ವರ್ಷ ವಿದ್ಯಾಭ್ಯಾಸವಿರುವುದು ನ್ಯಾಯ. ಇಲ್ಲಿ ಇದನ್ನು ಆರು ವರ್ಷ ಮಾಡಿ ಇಂಟರ್‌ಮೀಡಿಯೆಟ್ಟನ್ನೂ ಸೇರಿಸಿ ಮತ್ತೆ ಸೆಕೆಂಡರಿ ಜೂನಿಯರ್ ಮತ್ತು ಸೀನಿಯರ್ ಎಂದು ಎರಡು ಭಾಗ ಮಾಡಿ, ಇಂಟರ್‌ಮೀಡಿಯೇಟ್ ದರ್ಜೆಯ ವಿದ್ಯಾಭ್ಯಾಸವನ್ನು ವಿದ್ಯಾ ಇಲಾಖೆಯ ಡೈರೆಕ್ಟರ ಆಡಳಿತಕ್ಕೆ ಸೇರಿಸಬೇಕೆಂಬ ಸಲಹೆಯನ್ನು ಈಗಾಗಲೇ ಹೆಚ್ಚು ಸಂಖ್ಯೆಯಲ್ಲಿ ಸದಸ್ಯರು ವಿರೋಧಿಸಿದ್ದಾರೆ. ಹೈಸ್ಕೂಲು ವಿದ್ಯಾಭ್ಯಾಸವಾದನಂತರ ಒಂದು ರೀತಿಯ ಟೆಕ್ನಿಕಲ್ ಮತ್ತು ಟ್ರೈನಿಂಗ್ ಕೋರ್ಸು ರೂಪದಲ್ಲಿ ಎರಡು ಮೂರು ವರ್ಷಮಾಡಿ ಮುಂದೆ

ವಿಶ್ವವಿದ್ಯಾನಿಲಯಕ್ಕೆ ಹೋಗುವವರಿಗೆ ಅಡಿಪಾಯವಾಗುವ ರೀತಿಯಲ್ಲಿ ಏರ್ಪಾಡುಮಾಡಿ ವಿಶ್ವವಿದ್ಯಾನಿಲಯದಲ್ಲೇ ಇದು ಸೇರಿರುವಹಾಗೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆಂದು ನಾನುಕೂಡ ಅಭಿಪ್ರಾಯಪಡುತ್ತೇನೆ. ಇದಕ್ಕೆ ಕಾರಣವೇನೆಂದರೆ, ಇದು ಹೈಸ್ಕೂಲು ವಿದ್ಯಾಭ್ಯಾಸವಾದನಂತರ ಉಚ್ಚ ಶಿಕ್ಷಣಕ್ಕೆ preparatory ಕೋರ್ಸಾಗಿರುತ್ತದೆ. ಉಚ್ಚ ಶಿಕ್ಷಣ ಮತ್ತು ಸಾಮಾನ್ಯ ವಿದ್ಯಾಭ್ಯಾಸ ಈ ಎರಡನ್ನೂ ಸೇರಿಸಿ ಒಂದು ತೊಡಕಿಗೆ ವಿದ್ಯಾರ್ಥಿಗಳನ್ನು ಗುರಿಪಡಿಸಿದರೆ ಆಗ ಮತ್ತಷ್ಟು ತೊಡಕುಂಟಾಗಬಹುದು. ಅಲ್ಲದೆ ಇಂಟರ್‌ಮೀಡಿಯೇಟ್ ಕಾಲೇಜಿನ ಆಡಳಿತ ಕೂಡ ಅಷ್ಟು ವ್ಯವಸ್ಥಿತವಾಗಿ ನಡೆಯಲಾರದೋ ಏನೋ ಎಂಬ ಅನುಮಾನವೂ ಬರುತ್ತದೆ. ಆದುದರಿಂದ ಈ ತೊಡಕನ್ನು ಪರಿಹಾರ ಮಾಡುವುದಕ್ಕೆ ಇಂಟರ್‌ಮೀಡಿಯೇಟ್ ಕಾಲೇಜನ್ನು ವಿಶ್ವವಿದ್ಯಾನಿಲಯದಲ್ಲೇ ಇಡುವುದು ನ್ಯಾಯವಾಗಿದೆಯೆಂದು ತೋರುತ್ತದೆ.

ಇನ್ನು ಬೆಳಗಿನ ಸ್ಕೂಲು ಮಾಡುವುದರಿಂದ ಹಳ್ಳಿಗಳಲ್ಲಿರುವವರಿಗೆ ಹೆಚ್ಚು ಅನುಕೂಲವಾಗುತ್ತದೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ದಿನಕ್ಕೆ ಮೂರೂವರೆ ಗಂಟೆಕಾಲ ಮಾತ್ರ ಪಾಠ ಹೇಳಿದರೆ ಸಾಕೆ ಎಂದು ಅನುಮಾನ ಬರುತ್ತದೆ. ಮದರಾಸಿನಲ್ಲಿ ಮೂರುಗಂಟೆ ಪಾಠ ಮಾಡುವುದಕ್ಕೆ ವಿರೋಧ ಬಂತು. ಮಕ್ಕಳು ಉಪಯುಕ್ತರೀತಿಯಲ್ಲಿ ಮದ್ಯಾಹ್ನ ಸಾಯಂಕಾಲವನ್ನು ಕಳೆಯುತ್ತಾರೆಯೆ ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ ಈ ವಿಷಯವನ್ನೂ ಕೂಡ ಪುನಃ ಕೂಲಂಕಷವಾಗಿ ಪರಿಶೀಲನೆ ಮಾಡುವುದು ಅಗತ್ಯವೆಂದು ತಿಳಿದುಕೊಂಡಿದ್ದೇನೆ.

ಇನ್ನು ಮಿಡ್ಲ್‌ಸ್ಕೂಲು ಪರೀಕ್ಷೆಯನ್ನು ತೆಗೆದುಹಾಕಬೇಕೆಂಬ ಶಿಫಾರಸನ್ನು ಬಹಳ ಜನರು ಸ್ವಾಗತಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಪರೀಕ್ಷೆಯು ಆಗತ್ಯತೆಯಿಲ್ಲವೆಂದು ಹೇಳಬಹುದು.

ಇನ್ನೊಂದು ವಿಷಯವೆಂದರೆ ಶಿಕ್ಷಣ ಮಾಧ್ಯಮ (medium of instruction). ಇದು ಬಹಳ ಮುಖ್ಯವಾದ ವಿಷಯ. ಇದರಲ್ಲಿ ಭಿನ್ನಾಭಿಪ್ರಾಯಕೂಡ ಇದೆ. ಶ್ರೀಮಾನ್ ಕೋದಂಡರಾಯರು ಕೊಟ್ಟಿರುವ ನೋಟ್‌ನಲ್ಲಿ ವಿವರಿಸಿದ್ದಾರೆ. ಅದರಲ್ಲಿ ಭಾಷೆಯ ಸಮಸ್ಯೆಯ ಮೇಲೆ ಬಹಳ ವಿಚಾರ ಮಾಡಿದ್ದಾರೆ. ಈ ವರದಿಯಲ್ಲಿ ಐದನೆಯ ತರಗತಿಯಿಂದ ಇಂಗ್ಲಿಷನ್ನು ಹೇಳಿಕೊಡಬೇಕೆಂಬ ನಿಯಮವನ್ನು ಸೂಚನೆ ಮಾಡಿದ್ದಾರೆ. ಇದು ನನಗೆ ಒಪ್ಪಿಗೆಯಿಲ್ಲ. ಇಂಗ್ಲಿಷನ್ನು ಐದನೆಯ ವರ್ಷದಿಂದ ಪ್ರಾರಂಭಮಾಡಿ ಏಳನೆಯ ತರಗತಿಯವರೆಗೆ ಹೇಳಿಕೊಂಡು ಹೋಗುತಕ್ಕ ಅವಶ್ಯಕತೆಯಿಲ್ಲವೆಂದು ನನ್ನ ಭಾವನೆ. Language problem ಬಹಳಕಷ್ಟ. ಈಗ ಇಂಟರ್‌ನ್ಯಾಷನಲ್ ಲ್ಯಾಂಗ್ವೇಜ್ ಅಥವಾ ಅಂತರರಾಷ್ಟ್ರೀಯಭಾಷೆ, ಮಾತೃಭಾಷೆ, ಮತ್ತು ರಾಷ್ಟ್ರೀಯ ಭಾಷೆ, ಹೀಗೆ ಮೂರು ನಾಲ್ಕು ಭಾಷೆಗಳನ್ನು ಇಡುವುದಾದರೆ ಸಣ್ಣ ವಯಸ್ಸಿನಲ್ಲಿ ಅಷ್ಟು ಫಲಕಾರಿಯಾಗಲಾರದೆಂದೆನಿಸುತ್ತದೆ. ಅಲ್ಲದೆ ಇಷ್ಟು ಕಷ್ಟಪಟ್ಟು ಹೇಳಿಕೊಟ್ಟರೂ ಇದು ವ್ಯರ್ಥವಾಗಬಹುದೆಂದು ಅನ್ನಿಸುತ್ತದೆ.

4 P.M.

ಈ ದಿವಸ ನಾವು ಈ ಸಂಸ್ಕೃತವನ್ನೂ ಪ್ರಾಥಮಿಕ ಹಂತದಲ್ಲೇ ಪ್ರಾರಂಭಮಾಡಬೇಕೆಂದು ಹೇಳುವುದಾದರೂ ಕೂಡ ಆ ಸಂಸ್ಕೃತವನ್ನೇ ಒಂದು studying subject ಆಗಿ ಇಡಬೇಕೆಂಬ ಉದ್ದೇಶವಲ್ಲ' ಈ ಅಮರ ಕೋಶವನ್ನು ಸ್ಪಷ್ಟವಾಗಿ ಉಚ್ಚಾರಮಾಡುವುದಕ್ಕೂ ಮತ್ತು ಈ ಸಂಸ್ಕೃತ ನಮ್ಮ ದೇಶದಲ್ಲಿರತಕ್ಕ ಅನೇಕ ಇತರ ಭಾಷೆಗಳಿಗೂ ಮೂಲಸ್ಥಾನವನ್ನು ಹೊಂದಿರುವುದರಿಂದ ಹಾಗೆ ಹೇಳುತ್ತಿದ್ದೇವೆಯೇ ಹೊರತು ಬೇರೆ ದೃಷ್ಟಿಯಿಂದೇನೂ ಅಲ್ಲ. ಆದರೆ ಕೆಲವು ಮಹನೀಯರು ಪ್ರೊಫೆಸರ್‌ಗಳಾಗಿರತಕ್ಕವರು ಪರಿಧಿಯನ್ನು retrograde, reactionary ಮತ್ತು undemocratic ಎಂಬುದಾಗಿ ಕರೆದಿದ್ದಾರೆಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಆದರೆ ಅವರ ದೃಷ್ಟಿಯಲ್ಲಿ ಸೆನೇಟ್ ಮತ್ತು ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿರತಕ್ಕ ತಜ್ಞರನ್ನು ಕೇಳದೆ ಮತ್ತು ಅವರ ಅಭಿಪ್ರಾಯಗಳನ್ನೂ ಪಡೆಯದೆ ಇದನ್ನು ಮಾಡಿರುವುದರಿಂದ ಬಹುಶಃ ಅವರು ಆ ರೀತಿಯಾಗಿ ಅಭಿಪ್ರಾಯ ಪಟ್ಟಿದ್ದಾರೆಯೋ ಏನೋ. ಆದುದರಿಂದ ಈಗಲೂ ಸಹ ಅಂಥವರ ಸಲಹೆಗಳನ್ನೂ ಮತ್ತು ಅಭಿಪ್ರಾಯಗಳನ್ನೂ ಮತ್ತು ಅವರು ಮಾಡತಕ್ಕ ವಿಮರ್ಶೆಗಳನ್ನೂ ನಾವು ಪುನಃ ಸ್ವಾಗತಿಸಬೇಕಾಗಿರುವುದರಿಂದ, ಇದರ ಬಗ್ಗೆ ಅವರೆಲ್ಲಾ ಏನೇನು ಅಭಿಪ್ರಾಯಗಳನ್ನು ಪಡುತ್ತಾರೆ ಎಂಬುದನ್ನು ತಿಳಿದುಕೊಂಡನಂತರ ನಾವು ಕಾರ್ಯೋನ್ಮುಖರಾಗುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಹೀಗೆ ಒಬ್ಬರು ತಮ್ಮ ಅಭಿಪ್ರಾಯಗಳನ್ನು ಈ ಸುಧಾರಣೆಯ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಪಡಿಸಿದರೆಂದು, ಸರ್ಕಾರದವರು, ಅವರಿಗೆ ಹಾಗೆ ಮಾಡಬಾರದಾಗಿತ್ತೆಂದೂ, ಆರೀತಿ ಮಾಡಿದ್ದರಿಂದ, ಅವರ ಕೆಲಸಕ್ಕೆ ರಾಜಿನಾಮೆಕೊಡಬೇಕೆಂದು ಅವರನ್ನು ಒತ್ತಾಯಪಡಿಸಿದರೆಂದೂ ನಾನು ಕೇಳಿದ್ದೇನೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ನಾವು ಎಲ್ಲಿಯೂ ಆರೀತಿಯಾಗಿ ಮಾಡಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಈ ಶಿಕ್ಷಣ ಸುಧಾರಣೆಗಳ ವಿಷಯವಾಗಿ ಈಗ ಚರ್ಚೆನಡೆಯುತ್ತಿರುವುದು, ಪ್ರಾಯಶಃ ಐದನೆಯ ದಿವಸವಿರಬೇಕೆಂದು ನಾನು ಭಾವಿಸಿದ್ದೇನೆ. ಸುಮಾರು 20 ಸದಸ್ಯರಿಗಿಂತಲೂ ಹೆಚ್ಚು ಮಂದಿ ಸದಸ್ಯರು ಅನೇಕ ಭಾಗಗಳ ಬಗ್ಗೆ ಅವರ ದೀರ್ಘವಾದ ಆಲೋಚನೆಗಳನ್ನೂ ಮತ್ತು ಅಭಿಪ್ರಾಯಗಳನ್ನೂ ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ನನಗಾದರೂ ಈ ವಿಚಾರವಾಗಿ ನನ್ನ ಸ್ವಂತ ಅಭಿಪ್ರಾಯವೇನಿರುತ್ತದೆಯೆಂದು ಈ ಸಂದರ್ಭದಲ್ಲಿ ಪ್ರಾಯಶಃ ಯಾರೂ ಕೇಳಲಾರರೆಂದು ಭಾವಿಸಿದ್ದೇನೆ. ಹಾಗೆ ನಾನು ಭಾವಿಸುವುದಕ್ಕೆ ಕಾರಣವಾದರೂ ಏನಿವೆಯೆಂದರೆ, ಈಗ ಚರ್ಚೆ ಯಾಗುತ್ತಿರುವ ವರದಿಗೆ ನಾನೂ ಸಹ ನನ್ನ ರುಜುವನ್ನು ಹಾಕಿದ್ದೇನೆ. ಆದುದರಿಂದ ಈ ಬಗ್ಗೆ ನನ್ನ ಭಾವನೆಗಳೇನಿರುತ್ತವೆಂಬುದು ಈ ವರದಿಯಲ್ಲೇ ಸ್ಪಷ್ಟವಾಗಿವೆ. ಅಷ್ಟೇ ಅಲ್ಲದೆ ಇಲ್ಲಿಯತನಕ ನಡೆದಿರತಕ್ಕ ಚರ್ಚೆಗಳನ್ನು ನೋಡಿದರೆ ಎರಡು ಮೂರು ವಿಷಯಗಳಲ್ಲಿ ಯಾವ ಒಂದು ಖಚಿತವಾದ ಭಾವನೆಗಳನ್ನೂ ಹೊರಗೆಡವದಹಾಗೆ ಸುಮ್ಮನೆ ಚರ್ಚೆಯಾಗಿರುತ್ತೆಂದು ನನಗೆ ಅನ್ನಿಸುತ್ತಿದೆ.

ಮೊದಲನೆಯದಾಗಿ ಸರ್ಕಾರವು ಏನೋ ಒಂದು ನಿರ್ಣಯ ಮಾಡಿಬಿಟ್ಟು ಈ ರೀತಿ ಒಂದು ವರದಿಯನ್ನು ತಯಾರಿಸಿದೆಯೆಂಬುದಾಗಿ, ಆ ಭಾವನೆಗಳನ್ನೊಳಗೊಂಡು ಚರ್ಚೆಯಾಗಿರುವಂತೆ ಕಾಣುತ್ತಿದೆ. ಹಾಗೆ ಇದನ್ನು ಮಾಡಲು ಅಂಥ ಯಾವ ನಿರ್ಣಯಕ್ಕೂ ನಾವು ಇನ್ನೂ ಬಂದಿಲ್ಲ. ಇಲ್ಲಿ ತಾವೆಲ್ಲರೂ ಈಗ ಏನೇನು ಸಲಹೆಗಳನ್ನು ನೀಡುತ್ತೀರೋ, ಏನೇನು ಅಭಿಪ್ರಾಯಗ

(ಶ್ರೀ ಎ. ಜಿ. ರಾಮಚಂದ್ರರಾವ್.)

